ಸಂಚಿಕೆ 29

ರೂ. 2.00
25 ಜುಲೈ 1993

ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

"ಅವರನ್ನು ಕಟಕಟೆಗೆ ಎಳೆತನ್ನಿ"

ಮುಂದಿನ ಲೋಕಸಭೆಯ ಅಧಿವೇಶನದ ಆದ್ಯ ಕರ್ತವ್ಯ

ಒಳಪುಟಗಳಲ್ಲಿ

ತಿದ್ದುಪಡಿ

ಕಳೆದ ಸಂಚಿಕೆಯ ಮುಖಪುಟದ ಲೇಖನದಲ್ಲಿ ನಾಲ್ಕನೇ ಕಾಲಮ್‌ನಲ್ಲಿ *"16 ವರ್ಷಗಳಲ್ಲಿ 4 ಸಲ ಪಂಚಾಯತ್ ಚುನಾವಣೆ ನಡೆಸಿದ ಪಶ್ಚಿಮ ಬಂಗಾಳದ ಎಡರಂಗ ಸರಕಾರವೆಲ್ಲಿ, ಸಕಾಲದಲ್ಲಿ ನಡೆಸದೆ ತಡೆಹಿಡಿದು ...."* ಎಂದಿರಬೇಕಿತ್ತು.

ಈ ಪ್ರಮಾದಕ್ಕಾಗಿ ಕ್ಷಮೆ ಕೋರುತ್ತೇವೆ.

ವ್ಯವಸ್ಥಾಪಕರು

ಎಳೆತನ್ನಿ, ಅಪರಾಧಿಗಳನ್ನು ಕಟಕಟೆಗೆ ಎಳೆ. ತನ್ನಿ ನಮ್ಮದೇಶದ ಉತ್ತುಂಗ ಕಟಕಟೆಯಾದ ಲೋಕಸಭೆಯಲ್ಲಿ ಅವರನ್ನು ಕಟಕಟೆಯಲ್ಲಿ ನಿಲ್ಲಿಸಿ. ನಮ್ಮಿಂದ ಆಯ್ಕೆಯಾದ ನಿಮಗೆ ನಮ್ಮ ಬದುಕಿಗೆ, ನೆಮ್ಮದಿಗೆ, ನಮ್ಮ ದೇಶಕ್ಕೆ, ಸ್ವಾತಂತ್ರ್ಯಕ್ಕೆ ದ್ರೋಹಬಗೆದವರನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸುವುದು ಬಿಟ್ಟು ಬೇರೇನು ಕೆಲಸವಿದೆ? ಇಂದು ಇಡೀ ದೇಶ ಒಕ್ಕೊರಲಿನಿಂದ ಕೂಗುತ್ತಿದೆ. ಬರಗಾಲದಿಂದ ಬಳಲುತ್ತಿರುವ ನೀರಾವರಿಯಿಲ್ಲದ ನರಳುತ್ತಿರುವ ಕರ್ನಾಟಕದ ಜನತೆಯೂ ಅದಕ್ಕೆ ದನಿಗೂಡಿಸಿದೆ.

ಕಿವಿವೆತ್ತ ಕಿವುಡರಿರಾ ಕೇಳಿ ಆ ಸೊಲ್ಲು

ಲೋಕಸಭೆಯಲ್ಲಿ ಕರ್ನಾಟಕದ ಜನತೆಯ ಧ್ವನಿಯಾಗಲೆಂದೇ ಆರಿಸಿದ ರಾಜ್ಯದ ದಲೋಕಸಭಾ ಸದಸ್ಯರು ಕೇಳುತ್ತಾರೆಯೋ? ವೀರಪ್ಪಮೊಯಿಲಿಯವರ ಸರ್ಕಾರದಿಂದ ಅಷ್ಟಿಷ್ಟು ಗಿಟ್ಟಿಸಿಕೊಳ್ಳಲು ಹೆಣಗುತ್ತಿರುವ, ದೊಡ್ಡ ದೊಡ್ಡ ಖಾಸಗಿ ವಿದ್ಯಾಕಾಳಸಂತೆ ಕಂಪನಿಗಳ ಧ್ವನಿಗಳಾಗಿ ಜನತೆಯ ನೋವಿಗೆ ಕಿವುಡಾಗಿರುವ ಕರ್ನಾಟಕದ ಎಂಪಿಗಳಿಗೆ ಕೇಳುವ ಮನಸ್ಸಿದೆಯೇ? ಕಿವಿವೆತ್ತ ಕಿವುಡರಿರಾ, ಕೇಳಿ ಆ ಸೊಲ್ಲು?

ಕೇಳಿ ಆ ಕಡೆ ಕೇಳಿ. ಇಡೀ ದೇಶದ ಜನತೆಯ ಧ್ವನಿಯಾಗಿ ಎಡಪಕ್ಷದ ಎಂಪಿಗಳು ಲೋಕಸಭೆಯಲ್ಲಿ ನನಗೆ ಆಳುವ ಅರ್ಹತೆಯಿಲ್ಲ ಎಂದು ದಿನದಿನವೂ ಸಾಬೀತುಮಾಡಿಕೊಳ್ಳುತ್ತಿರುವ ನರಸಿಂಹರಾಯರ ಸರ್ಕಾರದ ನೀರಿಳಿಸಲಿದ್ದಾರೆ ಕೇಳಿ. ತಮ್ಮ ಜೊತೆಗೆ ರಾಷ್ಟ್ರೀಯ ರಂಗದ ಎಂ.ಪಿ.ಗಳನ್ನು ಸೆಳೆದಿದ್ದಾರೆ. ಕೇಳಿ ಆ ಸೊಲ್ಲು.

ನಮ್ಮ ಕಾಲ ಮೇಲೆ ನಾವೇ ನಿಲ್ಲೋಣ ಎಂದ ಕಾಲಿಗೇ ಕೊಡಲಿ ಪೆಟ್ಟು

ಇಡೀ ದೇಶದ ಹೆಮ್ಮೆಯೆಂದು ಪರಿಗಣಿತವಾದ ಸಾರ್ವಜನಿಕ ಉದ್ಯಮಗಳು, ಬೆಂಗಳೂರಿನ ಕೈಗಾರಿಕೆಗಳು ಎಚ್.ಎ.ಎಲ್., ಬಿ.ಇ.ಎಲ್., ಐ.ಟಿ.ಐ., ಎಚ್.ಎಂ.ಟಿ. ಯಂತ್ರದ ಹಾಗೂ ಗಡಿಯಾರದ ಕಾರ್ಖಾನೆಗಳು, ಇವುಗಳ ಜೊತೆಗೆ ದೇಶದಲ್ಲೆಲ್ಲಾ ಹರಡಿದ ಹಲವಾರು ಸಾರ್ವಜನಿಕ ಉದ್ಯಮದ ಕಾರ್ಖಾನೆಗಳನ್ನು, ಅಂತರರಾಷ್ಟ್ರೀಯ ಮಟ್ಟದಲ್ಲಿ ಭಾರತಕ್ಕೆಯಂತ್ರ ವಿಜ್ಞಾನದ ಪರಿಣತಿಗೆ ಗೌರವ ತಂದುಕೊಟ್ಟಿರುವ ಈ ಕಾರ್ಖಾನೆಗಳನ್ನು ಹಾಳುಗೆಡವಲು ಪ್ರಯತ್ನ ನಡೆದಿದೆ. ಇಂದು ಬೆಂಗಳೂರು ಅತೀ ತೀವ್ರವಾಗಿ ಬೆಳೆಯುತ್ತಿರಲು, ಭಾರತದ ಕೈಗಾರಿಕೋದ್ಯಮಿಗಳೆಲ್ಲಾ ಬೆಂಗಳೂರಿಗೆ ಧಾವಿಸುತ್ತಿರಲು ಈ ಕೈಗಾರಿಕೆಗಳೇ ಆಧಾರವಲ್ಲವೇ?

-- ಕಾಂ. ಜಿ.ಎನ್. ನಾಗರಾಜ್

ನಮ್ಮ ಕಾಲ ಮೇಲೆ ನಾವು ನಿಲ್ಲೋಣ! ಯಾರಿಗೂ ತಲೆಬಾಗದೆ ನಡೆಯೋಣ ಎಂದು ಅಂದು ನೆಹರೂ ಸಾರಿದುದದರ ಮೂಲ ಆಧಾರವೇ ಈ ಕಾರಖಾನೆಗಳಲ್ಲವೆ?

ಕಬ್ಬಿಣದ ಅದುರನ್ನು ಮಾರಿತಿನ್ನುತ್ತಾ, ಉಕ್ಕಿನ ಬೆಲೆ ಏರಿಸಿ ವಿದೇಶಿ ಉಕ್ಕಿಗೆ ದೇಶದ ಹೆಬ್ಬಾಗಿಲನ್ನು ತೆರೆದಿರುವ ವಿಜಯನಗರ ಉಕ್ಕಿನ ಕಾರ್ಖಾನೆಯನ್ನು ಸ್ಥಾಪಿಸದೆ ವಂಚಿಸುತ್ತಿಲ್ಲವೆ ಕೇಂದ್ರ ಸರ್ಕಾರ?

ಆರಕ್ಕೆ ಮೂರಾಗಿಸೀಯುವ ಕುಲಗೇಡಿ ಮಕ್ಕಳು

ಮಾಡಿದ ಸಾಲಗಳಿಗೆ ಬಡ್ಡಿ ತೆರಲಾಗದೆ ಕೊರತೆ ಬಜೆಟ್ ಎಂದು ಬೊಬ್ಬೆಯಿಟ್ಟು ಈ ಸಾರ್ವಜನಿಕ ಉದ್ಯಮಗಳ ಶೇರುಗಳನ್ನು ಮಾರಿಕೊಂಡು, ಬದುಕಬೇಕೆನ್ನುತ್ತಿದೆ ಈ ಸರ್ಕಾರ. ಹೋದದಷ್ಟಕ್ಕೆ ಮಾರಿ ಮೊದಲ ಕಂತಿನ ಈ ಶೇರು ಮಾರಾಟದಲ್ಲೇ 3,400 ಕೋಟಿಗಳನ್ನು ಖಾಸಗಿಯವರು ಕೊಳ್ಳೆ ಹೊಡೆಯಲು ಬಿಟ್ಟು ಮತ್ತಷ್ಟು ಅದೇ ರೀತಿ ಮಾರಬೇಕೆನ್ನುತ್ತಿದೆ. ಅಪ್ಪಮ್ಮ ಮುರಿದು ದುಡಿದುಗಳಿಸಿಟ್ಟ ಆಸ್ತಿಯನ್ನು ತನ್ನ ಕುಡಿತ, ಕುಣಿತ, ಕೇಕೆಗಳ ಅರ್ಜಂಟಿಗೆ ಆರಕ್ಕೆ ಮೂರಾಗಿ ಸೀಯುವ ಕುಲಗೇಡಿ ಮಗನಂತೆ ವರ್ತಿಸುತ್ತಿದೆ ನರಸಿಂಹರಾಯರ ಸರ್ಕಾರ.

ಕಾರ್ಖಾನೆಗಳಲ್ಲಿ ದುಡಿಯುತ್ತಿರುವ ಕೋಟ್ಯಾಂತರ ಮಂದಿಯನ್ನು ಬೀದಿಗೆ ತಳ್ಳಿ ಅವುಗಳ ಜಾಗದಲ್ಲಿ ವಿದೇಶಿ ಕಂಪ್ಯೂಟರ್‌ಗಳಿಗೆ ಹೇರಳ ಹಣ ಸುರಿಯಲು ಅವಕಾಶ ನೀಡುವ "ಎಕ್ಸಿಟ್ ಪಾಲಿಸಿ" ಈ ಲೋಕಸಭೆಯಲ್ಲಿ ತರಬಯಸುತ್ತಿದೆ ಸರ್ಕಾರ.

ಭಾರತ ದೇಶವನ್ನು ಕೈಗಾರಿಕಾ ಮರುಭೂಮಿಯನ್ನಾಗಿ ಮಾಡುವ ಈ ಸರ್ಕಾರದಲ್ಲಿ ನಮಗೆ ವಿಶ್ವಾಸವಿಲ್ಲ ಎನ್ನುತ್ತಾರೆ ನಮ್ಮ ಎಡ-ರಾಷ್ಟ್ರೀಯರಂಗದ ಎಂ.ಪಿ.ಗಳು. ಈಗ ಹೇಳಿ, ನೀವು ಯಾರ ಕಡೆ?

ಪುಟ 8ನೋಡಿ

ಅಸಂಘಟಿತ ಕಾರ್ಮಿಕರ ಹೋರಾಟದಲ್ಲೊಂದು ಹೊಸ ಘಟ್ಟ

ಹೊಸ ಹುರುಪು ತುಂಬಿದ ಜುಲೈ 14ರ ಮುಷ್ಕರ

- ವಿ.ಜೆ.ಕೆ. ನಾಯರ್

ಜುಲೈ 14 ಬೆಂಗಳೂರಿನ ಸಿಐಟಿಯು ಕಾರ್ಯಕರ್ತರಲ್ಲೊಂದು ಹೊಸ ಹುರುಪು ಮೊಟ್ಟಮೊದಲಬಾರಿಗೆ ಕಾರ್ಮಿಕವರ್ಗದ ಅತ್ಯಂತ ಕೆಳಸ್ತರದಲ್ಲಿರುವ ಕಾರ್ಮಿಕರ ಅನೇಕ ಪ್ರದೇಶಗಳಿಗೆ ಹೊಸತಾಗಿ ಪ್ರವೇಶ ಮಾಡಿದ ಹುರುಪು. ಕಷ್ಟ ಕೋಟಲೆಗಳಿಂದ ಬಾಯಿ ಬಾಯಿ ಬಿಡುತ್ತಿರುವ ಅಸಂಘಟಿತ ಕಾರ್ಮಿಕರಿಗೆ ಅವರ ಹಕ್ಕುಗಳ ಬಗ್ಗೆ ತಿಳುವಳಿಕೆ ಮೂಡಿದರೆ ಎಂತಹ ಅದಮ್ಯ ಚೈತನ್ಯ ಹೊರ ಹೊಮ್ಮುತ್ತದೆ ಎಂದು ಕಂಡುಕೊಂಡ ಹುರುಪು. ಪೀಣ್ಯ, ಯಶವಂತಪುರ, ಶ್ರೀರಾಮಪುರ, ಕುಂಬಳಗೋಡು, ಕೆ.ಆರ್. ಪುರಂ ಇತ್ಯಾದಿ ಅನೇಕ ಪ್ರದೇಶದ ಕಾರ್ಮಿಕರಿಗೆ ನಾವು ಎಷ್ಟೊಂದು ಕಾನೂನುಬದ್ಧ ಹಕ್ಕುಗಳಿಂದ ವಂಚಿತ ಪ್ರಾಣಿಗಳಂತೆ ಬದುಕಿದ್ದೇವಲ್ಲ ಎಂಬ ತಿಳುವಳಿಕೆ ಹೋರಾಟಕ್ಕೆ ಧುಮುಕಬೇಕು ಎಂಬ ತೀರ್ಮಾನ ಎದ್ದು ಕಾಣಿಸುತ್ತಿತ್ತು.

ಜುಲೈ 14ರಂದು ಸಿಐಟಿಯು ಕರೆಯ ಮೇರೆಗೆ ದೇಶದ ಇತರೆಡೆಗಳಂತೆ ರಾಜ್ಯದಲ್ಲೂ ಸಾವಿರಾರು ಅಸಂಘಟಿತ ವಲಯದ ಕಾರ್ಮಿಕರು ಮುಷ್ಕರ ನಡೆಸಿ ತಮ್ಮ ಬೇಡಿಕೆಗಳತ್ತ ದೇಶದ ಗಮನ ಸೆಳೆದರು. ಈ ಯಶಸ್ವೀ ಮುಷ್ಕರದೊಂದಿಗೆ ಅಸಂಘಟಿತ ಕಾರ್ಮಿಕರ ಹೋರಾಟ ಒಂದು ಮೇಲಣ ಹಂತವನ್ನು ಪ್ರವೇಶಿಸಿದೆ ಎಂದು ಸಿಐಟಿಯು ರಾಜ್ಯ ಕಾರ್ಯದರ್ಶಿ ಕಾಂ.ವಿ.ಜೆ.ಕೆ. ನಾಯರ್ ಹೇಳಿದ್ದಾರೆ.

3500 ಸದಸ್ಯತ್ವ ಇರುವ ಹೋಟೆಲ್ ಕಾರ್ಮಿಕರ ಸಂಘದ ಶ್ರಮದಿಂದ ಹೋಟೆಲ್ ಕಾರ್ಮಿಕರು ಈ ಮುಷ್ಕರದಲ್ಲಿ ಪಾಲ್ಗೊಂಡರು. ಸರಕಾರ ಈಗಾಗಲೇ ಕೊಡಮಾಡಿದ ತುಟ್ಟಿಭತ್ಯೆಯನ್ನೂ ಪಡೆಯದ ಅಗರಬತ್ತಿ ಕಾರ್ಮಿಕರು ತಮ್ಮ ಶೋಚನೀಯ ಬದುಕಿನ ಸ್ಥಳದಿಂದ ಬೀದಿಗಿಳಿದು ಬಂದರು. ಗಾರ್ಮೆಂಟ್ ಕಾರ್ಮಿಕರು, ಬೀಡಿ ಕಾರ್ಮಿಕರು, ಸಿಐಟಿಯು ಸಂಘಟಿಸುತ್ತಿರುವ ಕಾಂಟ್ರಾಕ್ಟ್ ಕಾರ್ಮಿಕರು ಈ ಮುಷ್ಕರದ ಕರೆಗೆ ಓಗೊಟ್ಟರು. ಬೆಂಗಳೂರಿನ ಹೊರವಲಯದಲ್ಲಿರುವ ಕುಂಬಳಗೋಡಿನಲ್ಲಿ ಸಂಪೂರ್ಣ ಮುಷ್ಕರವನ್ನು ಆಚರಿಸಲಾಯಿತು. ಮೈಸೂರು ರಸ್ತೆಯಲ್ಲೂ ಮುಷ್ಕರ ಸಂಪೂರ್ಣವಾಗಿತ್ತು. ಮುಂಜಾವಿನಿಂದಲೇ ಕಾರ್ಮಿಕರು ಮೆರವಣಿಗೆ ನಡೆಸಿದರು. ಕಾರ್ಖಾನೆಯೊಳಗೆ ಹೋದ ಕಾರ್ಮಿಕರನ್ನು ಹೊರಗೆ ಕರೆದು ಮುಷ್ಕರದಲ್ಲಿ ಭಾಗವಹಿಸಿ ಎಂದರು. ಬೆಂಗಳೂರಿನ ಮೈಸೂರು ರಸ್ತೆ, ಯಶವಂತಪುರ ಹಾಗೂ ಪೀಣ್ಯಾ ಪ್ರದೇಶಗಳಲ್ಲಿ ಈ ಪ್ರಯತ್ನ ಯಶಸ್ವಿಯಾಗಿ ನಡೆಯಿತು.

ನಗರದ ಕೇಂದ್ರದಲ್ಲಿ ಹೋಟೆಲ್ ಕಾರ್ಮಿಕರ ಮೆರವಣಿಗೆಯ ಮೇಲೆ ಇಂಪೀರಿಯಲ್ ಟಾಕೀಸ್ ಬಳಿ ಗೂಂಡಾಗಳು ಹಲ್ಲೆ ಮಾಡಿದರು. ಇಬ್ಬರು ಕಾರ್ಮಿಕರನ್ನು ಬಲವಂತದಿಂದ ಎಳೆದೊಯ್ದರು. ಸಿಐಟಿಯು ಸೂಕ್ತ ಸಮಯದಲ್ಲಿ ಮಧ್ಯಪ್ರವೇಶಿಸಿ ಈ ಇಬ್ಬರು ಕಾರ್ಮಿಕರನ್ನು ಬಲವಂತದಿಂದ ಬಿಡಿಸಿಕೊಳ್ಳುವ ಹಕ್ಕು ತಮಗಿದೆ ಎಂದು ಸಾರ್ವಜನಿಕವಾಗಿ ಎಚ್ಚರಿಕೆ ನೀಡಿದಾಗ ಪೋಲೀಸರು ನೀಲಗಿರಿ ರೆಸ್ಟೋರೆಂಟನಲ್ಲಿ ಗೂಂಡಾಗಳ ಸೆರೆಯಲ್ಲಿದ್ದ ಆ ಇಬ್ಬರು ಕಾರ್ಮಿಕರನ್ನು ಬಿಡಿಸಿ ತಂದರು.

ದಕ್ಷಿಣ ಕನ್ನಡ ಜಿಲ್ಲೆಯಾದ್ಯಂತ ಮುಷ್ಕರ ಯಶಸ್ವಿಯಾಗಿತ್ತು ಎಂಬ ಸುದ್ದಿ ಬಂದಿದೆ. ತೀರ್ಥಹಳ್ಳಿಯಲ್ಲಿ, ಎಂ.ಪಿ.ಎಂ. ಫಾರೆಸ್ಟ್ ಕಾರ್ಮಿಕರು ಮುಷ್ಕರ ನಡೆಸಿದರು. ಕೆಜಿಎಫ್‌ನಲ್ಲಿ ಬಿಇಎಂಎಲ್ ಮತ್ತು ಬಿಜಿಎಂಎಲ್ ಕಾಂಟ್ರಾಕ್ಟ್ ಕಾರ್ಮಿಕರು ಮುಷ್ಕರ ನಡೆಸಿದರು. ಬೇರೆ ಕಡೆಗಳಿಂದ ಮುಷ್ಕರ ಯಶಸ್ವಿಯಾದುದರ ಸುದ್ದಿಗಳು ಬರುತ್ತಿವೆ.

ಬೆಂಗಳೂರಿನಲ್ಲಿ ಸಂಜೆ ಮುಷ್ಕರ

ಪುಟ 3ನೋಡಿ

ಕೋಮು ಸೌಹಾರ್ದತಾ ರ್‍ಯಾಲಿ ಆಗಸ್ಟ್ 23ಕ್ಕೆ

ಬೆಂಗಳೂರಿನಲ್ಲಿ ನಡೆಯಲಿರುವ ಸಿಪಿಎಂ ಪೊಲಿಟ್‌ಬ್ಯೂರೋ ಹಾಗೂ ಕೇಂದ್ರ ಸಮಿತಿ ಸಭೆಯ ದಿನಾಂಕಗಳಲ್ಲಿ ಈಗ ತುಸು ಬದಲಾವಣೆಯಾಗಿದೆ. ಅದೀಗ ಆಗಸ್ಟ್ 20-23 ರವರೆಗೆ ನಡೆಯಲಿದೆ. ಆಗಸ್ಟ್ 23, 1993ರಂದು ಕೋಮು ಸೌಹಾರ್ದ ರ್‍ಯಾಲಿ ನಡೆಯುತ್ತದೆ.

ಕಳೆದ ಸಂಚಿಕೆಯಲ್ಲಿ ಸ್ವಾಗತ ಸಮಿತಿಯ ರಚನೆ ಕುರಿತಾದ ಸುದ್ದಿಯಲ್ಲಿ ಪದಾಧಿಕಾರಿಗಳ ಹೆಸರಿನ ಪಟ್ಟಿಯಲ್ಲಿ ಖಜಾಂಚಿಯವರ ಹೆಸರು ಪ್ರಮಾದವಶಾತ್ ತಪ್ಪಿಹೋಗಿದೆ. ಕಾಂ.ವಿ.ಜೆ.ಕೆ. ನಾಯರ್ ಪೊಲಿಟ್‌ಬ್ಯೂರೋ, ಕೇಂದ್ರ ಸಮಿತಿಯ ಸಭೆಯ ಸ್ವಾಗತ ಸಮಿತಿಯ ಖಜಾಂಚಿಯಾಗಿದ್ದಾರೆ.

- ವ್ಯವಸ್ಥಾಪಕರು



ಕಾಂಗ್ರೆಸ್ ಅಧೋಗತಿಗೆ ಹೋಗುತ್ತಿದೆ - ಕಾಂಗ್ರೆ ಎಂ.ಪಿ.

ಸಾಧನೆ ಸಮಾವೇಶ ಅನಗತ್ಯ: ಮಾದೇಗೌಡ

ಮಂಡ್ಯ : ಕಾಂಗ್ರೆಸ್‌ನ ಸಾಧನೆ ಬಗ್ಗೆ ಇಂತಹ ಸಮಾವೇಶಗಳನ್ನು ನಡೆಸುವ ಬದಲು ಮೊದಲು ನಮ್ಮನ್ನು ನಾವು ಸರಿಪಡಿಸಿಕೊಂಡು ನಡೆಯುವ ದಾರಿಯನ್ನು ಸರಿಪಡಿಸಿಕೊಳ್ಳುವುದು ಅಗತ್ಯವಾಗಿದೆ ಎಂದು ಸಂಸತ್ ಸದಸ್ಯ ಜಿ. ಮಾದೇಗೌಡ ಅಭಿಪ್ರಾಯಪಟ್ಟರು.

ಒಬ್ಬ ದಲ್ಲಾಳಿ ಪ್ರಧಾನಿಯವರಿಗೆ ಒಂದು ಕೋಟಿ ರೂ. ನೀಡಿದೆ ಎಂದು ಹೇಳಿದ ಬಗ್ಗೆ ಜನರಿಗೆ ಅದು ಸುಳ್ಳು ಎಂದು ಹೇಳಲು ಲಕ್ಷಾಂತರ ರೂ. ಖರ್ಚು ಮಾಡಿ ಈ ಸಮಾವೇಶ ನಡೆಸುವ ಅಗತ್ಯವಿಲ್ಲ.

ಆದರೆ ಇಂದು ಕಾಂಗ್ರೆಸ್ ಅಧೋಗತಿಗೆ ಹೋಗುತ್ತಿದೆ. ಇದಕ್ಕೆ ಅಧಿಕಾರದ ಗದ್ದುಗೆ ಹಿಡಿದ ಅನೇಕರು ಕಾರಣರಾಗಿದ್ದಾರೆ. ಈ ವಿಷಯದಲ್ಲಿ ರಾಜಿ ಮಾಡಿಕೊಳ್ಳಲು ನಾವು ಸಿದ್ಧರಿಲ್ಲ ಎಂದು ಅವರನ್ನು ಸಮಾಧಾನಪಡಿಸಲೆತ್ನಿಸಿದ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷರನ್ನು ಉದ್ದೇಶಿಸಿ ಹೇಳಿದರು.

ಮೊದಲು ಪಕ್ಷದಲ್ಲಿ ಅಧಿಕಾರದಲ್ಲಿರುವ ಭ್ರಷ್ಟಾಚಾರ ಕಿತ್ತು ಹಾಕಿ ಆಗ ಪಕ್ಷ ಸರಿಹೋಗುತ್ತದೆ ಎಂದರು.

ಕನ್ನಡಪ್ರಭ : ಜು. 11

ಪಿವಿನ ಅನರ್ಹ: ಕಾಂಗ್ರೆ ಶಾಸಕ

ಹುಬ್ಬಳ್ಳಿ : ಪಕ್ಷದ ಹಿತ ಕಾಪಾಡಲು ಪ್ರಧಾನಿ ಪಿ. ವಿ. ನರಸಿಂಹರಾವ್ ಮತ್ತು ಮುಖ್ಯಮಂತ್ರಿ ವೀರಪ್ಪ ಮೊಯಿಲಿ ಕೂಡಲೇ ರಾಜೀನಾಮೆ ನೀಡಬೇಕೆಂದು ಕಾಂಗ್ರೆಸ್(ಐ) ವಿಧಾನ ಪರಿಷತ್ ಸದಸ್ಯ ಚಂದ್ರಶೇಖರ್ ಮಟ್ಟಿ ಮಂಗಳವಾರ ಒತ್ತಾಯಿಸಿದರು.

ಭಾರತೀಯ ಜನತಾಪಕ್ಷದ ಅಧ್ಯಕ್ಷ ಎಲ್.ಕೆ. ಅಡ್ವಾಣಿ ಮತ್ತು ರಾವ್ ಒಂದೇ ನಾಣ್ಯದ ಎರಡು ಮುಖ ಎಂದು ಮಟ್ಟಿ ನೀಡಿರುವ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಅಯೋಧ್ಯೆಯಲ್ಲಿ ಬಾಬರಿ ಮಸೀದಿ ನೆಲಸಮಗೊಳಿಸುವುದಕ್ಕೆ ಭಾರತೀಯ ಜನತಾ ಪಕ್ಷಕ್ಕೆ ಪರೋಕ್ಷವಾಗಿ ಪ್ರಧಾನಿ ಅವಕಾಶ ನೀಡಿದರೆಂದು ಆರೋಪ ಮಾಡಿದ್ದಾರೆ.

ಕನ್ನಡಪ್ರಭ: ಜು. 8

ಗೋವೆಗೆ ಕೃಷಿ ಕಾರ್ಮಿಕರ ವಲಸೆ

ಹುಬ್ಬಳ್ಳಿ : "ಮಳಿ ಏಟೂ ಇಲ್ಲರಿ, ಬಿತ್ತಿಗೆಯಾಗಿ ಮಳೆಗೆ ಒಡೆದು ಬಾಡಲಿಕ್ಕೆ ಹತ್ಯಾವು ಊರಾಗ ಕೆಲಸ ಇಲ್ಲ. ಹೊಟ್ಟೆಗೆ ಹಿಟ್ಟು ಗಳಿಸಾಕ ಹೊರಟಿವಿ."

ಧಾರವಾಡ ಜಿಲ್ಲೆಯ ರೋಣ ಮತ್ತು ಮುಂಡರಗಿ ತಾಲೂಕಿನ ಅಬ್ಬಿಗೇರಿ, ಮಾಡಲಗೇರಿ ಮತ್ತು ಸಿಂಗಟಾಲೂರಿನ ಕೆಲ ಕುಟುಂಬಗಳು ದೆಳಿಗ್ಗೆ ಬಸ್ ಮೂಲಕ ಕೆಲಸ ಅರಸುತ್ತ ಗೋವೆಗೆ ತೆರಳುವಾಗ ಆಡಿದ ಮಾತುಗಳಿವು.

ಹುಬ್ಬಳ್ಳಿಗೆ ಒಂದು ದಿನ ಮುಂಚಿತವಾಗಿ ಬಂದಿಳಿದು ರಿಜರ್ವೇಶನ್ ಮಾಡಿಸಿ, ಹಂಬುಗ ದಡಿ, ಟ್ರಂಕು, ಹಂಡತಿ, ಮಕ್ಕಳು ಮರಿ ಸಹಿತ ಬಸ್ಸು ಏರಿ ಕುಳಿತ ಇವರ ಮುಖಗಳಲ್ಲಿ ಯಾವ ಭಾವನೆಗಳು ಕಾಣಬರಲಿಲ್ಲ. ನಿಶ್ಚಿಂತರಾಗಿದ್ದರು. 15-20 ದಿನಗಳಿಗೆ ಸಾಲುವಷ್ಟು ಕಟಿಕ ರೊಟ್ಟಿಗಳ ಬುಟ್ಟಿ, ಹಿಂಡಿ ಚಟ್ನಿ, ಖಾರ ಬ್ಯಾಳಿಗಳ ಗಂಟು ಮೂಟೆಯೇ ಅವರ ಸಮಾಧಾನಕ್ಕೆ ಕಾರಣವಾಗಿತ್ತು.

'ನಾವು ದುಡಿದು ಉಣ್ಣುವವರು ಮೂರು ಒಪ್ಪತ್ತು ನಾಲ್ಕು ರೊಟ್ಟಿ ಸಿಕ್ಕರೆ ಸಾಕು. ಶಿವಶಿವಾ ಅನ್ನಕೊಂಡ ಕಾಲ ಕಳಿತೀವಿ' ಎಂದ ಅಬ್ಬಿಗೇರಿ ಗ್ರಾಮದ ವೀರಪ್ಪ ಹೆಬ್ಬಳ್ಳಿ ಹೇಳಿದ್ದು ಮಾರ್ಮಿಕವಾಗಿತ್ತು.

ಸಂಯುಕ್ತ ಕರ್ನಾಟಕ: ಜು.10

ಕಾರ್ಯಾರಂಭ ಮಾಡದ ಮಲೆನಾಡು ಅಭಿವೃದ್ಧಿ ಮಂಡಲಿ

ಪ್ರದೇಶದ ಅಭಿವೃದ್ಧಿ ಮಂಡಳಿಗಳ ಪೈಕಿ ಮಲೆನಾಡು ಪ್ರದೇಶ ಅಭಿವೃದ್ಧಿ ಮಂಡಳಿಯೂ ಒಂದಾಗಿದೆ. ಈ ಪ್ರದೇಶದಲ್ಲಿ ಬೆಳಗಾವ್ ಜಿಲ್ಲೆಯ 5, ಚಿಕ್ಕಮಗಳೂರು ಜಿಲ್ಲೆಯ 6, ಕೊಡಗು ಜಿಲ್ಲೆಯ 3, ಹಾಸನ ಜಿಲ್ಲೆಯ 5, ಮೈಸೂರು ಜಿಲ್ಲೆಯ 5 ಉತ್ತರ ಕನ್ನಡ ಜಿಲ್ಲೆಯ 11, ದಕ್ಷಿಣ ಕನ್ನಡ ಜಿಲ್ಲೆಯ 8, ಶಿವಮೊಗ್ಗ ಜಿಲ್ಲೆಯ 8, ಧಾರವಾಡ ಜಿಲ್ಲೆಯ 7, ಹೀಗೆ ಒಂಬತ್ತು ಜಿಲ್ಲೆಯ ಐವತ್ತೆಂಟು ತಾಲೂಕುಗಳು ಬರುತ್ತವೆ.

1991-92 ರಲ್ಲಿ ಮಲೆನಾಡು ಪ್ರದೇಶ ಅಭಿವೃದ್ಧಿ ಸಲುವಾಗಿ ಸರಕಾರ 10 ಕೋಟಿ ರೂಪಾಯಿ ಒದಗಿಸಿದ್ದು. ಇದರಲ್ಲಿ ಯಾವ 58 ತಾಲೂಕುಗಳಲ್ಲಿಯೂ ಹಣ ಖರ್ಚು ಮಾಡಿರುವುದಿಲ್ಲ. 1992-93 ರಲ್ಲಿ 35 ಕೋಟಿ ರೂಪಾಯಿ ಹಣವನ್ನು ಬಜೆಟ್‌ದಲ್ಲಿ ನಿಗದಿಪಡಿಸಿದ್ದು. ಈ ಹಣದಲ್ಲಿ ಸಹ ಅಷ್ಟನ್ನು ಖರ್ಚು ಮಾಡಿಲ್ಲ.

1993-94 ರಲ್ಲಿ ಸಹ ಬಜೆಟ್‌ನಲ್ಲಿ ಈ ಯೋಜನೆಗೆ 35 ಕೋಟಿ ರೂಪಾಯಿ ನಿಗದಿಪಡಿಸಿದ್ದು ಈಗ ಮೂರು ತಿಂಗಳು ಗತಿಸಿ ಹೋಗಿದ್ದರೂ 58 ತಾಲೂಕುಗಳಲ್ಲಿ ಯಾವುದೇ ಅಭಿವೃದ್ಧಿಕಾರ್ಯ ಈ ಯೋಜನೆಯಲ್ಲಿ ಪ್ರಾರಂಭವಾಗಿಲ್ಲ.

ಸಂಯುಕ್ತ ಕರ್ನಾಟಕ : ಜು.8

ಹಾಡಿಗಳಿಗೆ ಅಧಿಕಾರಿಗಳ ಭೇಟಿ ಮಕ್ಕಳ ಜೀತ: ಸಂಚು ಬಯಲು

ಮೈಸೂರು : ಜಿಲ್ಲೆಯ ಹುಣಸೂರು ತಾಲ್ಲೂಕಿನ ಗಿರಿಜನ ಹಾಡಿಗಳಿಂದ ಕರಾವಳಿ ತೀರದ ಪ್ರದೇಶಗಳಿಗೆ ಗಿರಿಜನರ ಮಕ್ಕಳನ್ನು ಸಾಗಿಸುತ್ತಿರುವ ಪ್ರಕರಣದ ಹಿಂದೆ ದೊಡ್ಡ ಜಾಲವೊಂದು ಇರುವುದು ಈಗ ಬಯಲಾಗಿದೆ.

ಗಿರಿಜನರ ಕಿತ್ತು ತಿನ್ನುತ್ತಿರುವ ಬಡತನದ ಶೋಚನೀಯ ಪರಿಸ್ಥಿತಿಯ ದುರ್ಲಾಭ ಪಡೆಯುತ್ತಿರುವ ಕೆಲವು ಮಧ್ಯವರ್ತಿಗಳು ಗಿರಿಜನರಿಗೆ ಹಣಕೊಟ್ಟು ಅವರ ಮಕ್ಕಳನ್ನು ದೂರದ ಊರುಗಳಿಗೆ ಸಾಗಿಸಿ ಹಣ ಮಾಡುವ ದಂಧೆಯಲ್ಲಿ ತೊಡಗಿರುವ ಬಗ್ಗೆ ಅಧಿಕಾರಿಗಳು ಈಗ ಎಚ್ಚೆತ್ತಿದ್ದು, ಈ ಇಡೀ ಪ್ರಕರಣದ ಬಗ್ಗೆ ಇದೀಗ ವಿವರಿಸಿದ್ದಾರೆ.

ಸಂಯುಕ್ತ ಕರ್ನಾಟಕ: ಜು. 10

ಹೆದ್ದಾರಿಯ ಬಳಿ ಮದ್ಯ ನಿರ್ಬಂಧ ಕ್ರಮಬದ್ಧ

ಬೆಂಗಳೂರು : ರಾಷ್ಟ್ರೀಯ ಹಾಗೂ ರಾಜ್ಯ ಹೆದ್ದಾರಿಗಳು ಮತ್ತಿತರ ಸಾರ್ವಜನಿಕ ಸ್ಥಳಗಳ ಬಳಿ ಮದ್ಯದ ಮಾರಾಟವನ್ನು ನಿರ್ಬಂಧಗೊಳಪಡಿಸಿದ ರಾಜ್ಯ ಸರ್ಕಾರದ ಕ್ರಮವನ್ನು ಹೈಕೋರ್ಟ್ ಎತ್ತಿ ಹಿಡಿದಿದೆ.

ಕರ್ನಾಟಕ ಅಬಕಾರಿ ಪರವಾನಗಿಗಳ (ಸಾಮಾನ್ಯ ನಿಬಂಧನೆಗಳು) ನಿಯಮಗಳಿಗೆ ತಿದ್ದುಪಡಿ ತರುವುದರ ಮೂಲಕ ಕೈಗೊಳ್ಳಲಾದ ಈ ಕ್ರಮವನ್ನು ಪ್ರಶ್ನಿಸಿ ಅನೇಕ ಮದ್ಯಮಾರಾಟದ ಪರವಾನಗಿದಾರರು ಹೂಡಿದ್ದ ರಿಟ್ ಅರ್ಜಿ

ಅಲ್ಲಿಂದ ಇಲ್ಲಿಂದ

ಗಳ ದೊಡ್ಡ ಸಮುದಾಯವೊಂದನ್ನು ನ್ಯಾಯಮೂರ್ತಿ ಶ್ರೀ ಶಿವರಾಜ ಪಾಟೀಲರು ಇಂದು ವಜಾಮಾಡಿದರು.

ಸಂಯುಕ್ತ ಕರ್ನಾಟಕ : ಜು. 9

ಬೆಂಗಳೂರು : ಇಂದಿನ ಮಂತ್ರಿಮಂಡಲ ಸಭೆಯಲ್ಲಿ ಮುಖ್ಯಮಂತ್ರಿ ಎಂ. ವೀರಪ್ಪಮೊಯಿಲಿ ಅವರ ಪರವಾಗಿ ನಿರ್ಣಯ ಮಂಡಿಸುವ ವಿಚಾರ ಪ್ರಸ್ತಾಪವಾದಾಗ ಉಪಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಮತ್ತು ಪಶುಸಂಗೋಪನಾ ಸಚಿವ ಕೆ.ಎನ್. ನಾಗೇಗೌಡ ಅವರ ನಡುವೆ 'ಬಿಸಿ ಬಿಸಿ' ಚರ್ಚೆ ನಡೆಯಿತೆಂದು ಹೇಳಲಾಗಿದೆ.

ಪ್ರಜಾವಾಣಿ ಜು. 9

ಮೀಸಲಾತಿ ಆದೇಶ ಇನ್ನೂ ಆರು ತಿಂಗಳು ವಿಸ್ತರಣೆ

ಬೆಂಗಳೂರು: ಪ್ರಸ್ತುತ ಜಾರಿಯಲ್ಲಿರುವ ಹಿಂದುಳಿದ ವರ್ಗಗಳ ಮೀಸಲಾತಿ ಸೌಲಭ್ಯ ಸಂಬಂಧದ ಆದೇಶದ ಅವಧಿಯನ್ನು ಮತ್ತೆ ಆರು ತಿಂಗಳ ಕಾಲ ವಿಸ್ತರಿಸಲು ಇಂದು ನಡೆದ ಸಚಿವ ಸಂಪುಟದ ಸಭೆ ನಿರ್ಧರಿಸಿತು.

ಈಗಿರುವ ಮೀಸಲಾತಿ ಆದೇಶದ ಅವಧಿ ಜುಲೈ 13 ಕ್ಕೆ ಮುಗಿಯಲಿದೆ. ಆ ದಿನದಿಂದ ವಿಸ್ತರಣೆಯು ಆರು ತಿಂಗಳು ಅಥವಾ ಚಿನ್ನಪ್ಪ ರೆಡ್ಡಿ ಆಯೋಗದ ವರದಿ ಜಾರಿ ಆಗುವವರೆಗೆ, ಇದರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಈಗಿನ ಮೀಸಲಾತಿ ಪದ್ಧತಿಯೇ ಜಾರಿಯಲ್ಲಿರುವುದು ಎಂದು ಮುಖ್ಯಮಂತ್ರಿ ಎಂ. ವೀರಪ್ಪಮೊಯಿಲಿ ಅವರು ನಂತರ ಪರ್ತಕರ್ತರಿಗೆ ತಿಳಿಸಿದರು.

ಅಂದರೆ ಚಿನ್ನಪ್ಪರೆಡ್ಡಿ ವರದಿಯ ಜಾರಿ ಆರು ತಿಂಗಳ ಕಾಲ ಮುಂದಕ್ಕೆ ಹೋದಂತೆಯೇ? ಎಂಬ ಪ್ರಶ್ನೆಗೆ, "ಇಲ್ಲ ಆದಷ್ಟು ಬೇಗ ಅನುಷ್ಠಾನಕ್ಕೆ ತರುತ್ತೇವೆ ಇದಕ್ಕೆ ನಾವು ಸಂಪೂರ್ಣ ಬದ್ಧರಾಗಿದ್ದೇವೆ" ಎಂದು ಪ್ರತಿಕ್ರಿಯಿಸಿದರು.

ಪ್ರಜಾವಾಣಿ: ಜು. 9

ಕೃಷಿ ಬ್ಯಾಂಕ್ ಸಿಬ್ಬಂದಿಗೆ ತರಾಟೆ

ಉಜ್ಜನಿ : ಕೊಟ್ಟೂರು ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕಿನಲ್ಲಿ ಬ್ಯಾಂಕ್ ಸಿಬ್ಬಂದಿ ರೈತರಿಂದ ಲಂಚ ಪಡೆದಿರುವುದಾಗಿಯೂ ಬ್ಯಾಂಕ್ ಸದಸ್ಯರಿಗೆ ಕಿರುಕುಳ ನೀಡುತ್ತಿರುವುದಾಗಿಯೂ ಬ್ಯಾಂಕ್ ವಾರ್ಷಿಕ ಸರ್ವಸದಸ್ಯರ ಸಭೆಯಲ್ಲಿ ರೈತರು ಆರೋಪಿಸಿದರು.

ಬ್ಯಾಂಕ್‌ನ ಹೊಸಹಳ್ಳಿ ಕ್ಷೇತ್ರದ ಸುಪರ್ ವೈಜರ್ ಗ್ರಾಮಗಳಲ್ಲಿ ರೈತರಿಂದ ಬ್ಯಾಂಕ್‌ನ ಶೇರು ಹಣ, ಬ್ಯಾಂಕ್‌ಗೆ ಕಟ್ಟಬೇಕಾದ ಸಾಲದ ಹಣ ಮತ್ತು ರೈತರಿಗೆ ಸಾಲ ಮಂಜೂರು ಮಾಡಲು ಲಂಚ ಪಡೆದಿದ್ದ. ಅಂದಾಜು 50 ರಿಂದ 60 ಸಾವಿರ ರೂಪಾಯಿಯೊಂದಿಗೆ ನಾಪತ್ತೆಯಾಗಿರುವುದಾಗಿ ಬ್ಯಾಂಕ್‌ನ ನಿರ್ದೇಶಕರೊಬ್ಬರು ಬೆಳಕಿಗೆ ತಂದರು.

ರೈತರಿಗೆ ಸಾಲ ಮಂಜೂರಾದರೆ ಅದರಲ್ಲಿ ಕಾರ್ಯದರ್ಶಿ ಕಮಿಷನ್ ಪಡೆಯುತ್ತಿದ್ದುದಾಗಿಯೂ ಮತ್ತು ರೈತರಿಂದ ಬಹಿರಂಗವಾಗಿ ಲಂಚ ಕೇಳುತ್ತಿದ್ದಾಗಿಯೂ ರೈತರು ಬಹಿರಂಗವಾಗಿ ಹೇಳಿಕೆ ನೀಡಿದರು.

ಕನ್ನಡ ಪ್ರಭ ಜು.8

ಖಾಲಿ ಕೊಡ ಒಡೆದು ಪ್ರತಿಭಟನೆ

ಗುಡಿಬಂಡೆ : ಈ ಊರಿನಲ್ಲಿ ನೀರಿನ ಅಭಾವ ಅತಿರೇಕಕ್ಕೆ ಹೋಗಿ ನೀರು ಸರಬರಾಜಿಲ್ಲದೆ ಹಾಹಾಕಾರ ಉಂಟಾದಾಗ ಮಂಡಲ್ ಪಂಚಾಯ್ತಿ ನಿಷ್ಕ್ರಿಯವಾಗಿದೆಯೆಂದು ಪ್ರತಿಭಟಿಸಿ ಪುರಜನರು ಖಾಲಿ ಗಡಿಗೆಗಳ ಸಮೇತ ಬೀದಿಯಲ್ಲಿ ಮೆರವಣಿಗೆ ನಡೆಸಿದರು. ಟೌನ್ ಮಂಡಲ್ ಪಂಚಾಯ್ತಿ(ಹಿಂದಿನ ಪುರಸಭೆ) ಕಚೇರಿ ಮುಂದೆ ಧಿಕ್ಕಾರ ಕೂಗಿ ಖಾಲಿ ಮಡಿಕೆ ಗಡಿಗೆಗಳನ್ನು ನೆಲಕ್ಕೆ ಅಪ್ಪಳಿಸಿ ಚೂರು ಮಾಡಿದರು. ಅನಂತರ ಪ್ರತಿಭಟನಾಕಾರರು ತಾಲ್ಲೂಕು ಕಛೇರಿ ಆವರಣದಲ್ಲಿ ಸಭೆ ನಡೆಸಿ ಅಧಿಕಾರಿಗಳಿಗೆ ಜನರ ಬವಣೆ ವಿವರಿಸಿದರು.

ಸುಮಾರು ಒಂದು ಸಾವಿರ ಜನ ಮೆರವಣಿಗೆಯಲ್ಲಿದ್ದರು.

ಕನ್ನಡಪ್ರಭ: ಜು.7

ಸಾಧನೆ ಸಮಾವೇಶದಲ್ಲೂ ಜಗಳ

ಚಿಕ್ಕಮಗಳೂರು : ಗೊಂದಲ ಅತೃಪ್ತಿ ಅಸಮಾಧಾನಗಳ ನಡುವೆ ಕಾಂಗ್ರೆಸ್ (ಐ)ನ ಎರಡು ಬಣಗಳು ಕೇಂದ್ರ ಸರ್ಕಾರದ ಎರಡು ವರ್ಷಗಳ ಸಾಧನೆಯ ಸಮಾವೇಶವನ್ನು ಜುಲೈ 4 ರಂದು ಜಂಟಿಯಾಗಿ ನಗರದ ರೋಟರಿ ಸಭಾಂಗಣದಲ್ಲಿ ನಡೆಸಿದ ವಿದ್ಯಾಮಾನ ವರದಿಯಾಗಿದೆ.

ಜಿಲ್ಲಾ ಕಾಂಗ್ರೆಸ್(ಐ) ವ್ಯವಸ್ಥೆಗೊಳಿಸಿದ್ದ ಈ ಸಮಾರಂಭದ ಪ್ರಾರಂಭದಲ್ಲಿ ಗೊಂದಲದ ವಾತಾವರಣ ಉಂಟಾಗಿ ನಂತರ ಸಮಾರಂಭವನ್ನು ಸಾರ್ವಜನಿಕ ಸಮಾರಂಭವನ್ನಾಗಿ ಪರಿವರ್ತಿಸಲಾಯಿತು.

ಕೇಂದ್ರ ಸರ್ಕಾರದ ಸಾಧನೆಯ ಸಮಾವೇಶದ ಸಮಾರಂಭದ ಅಧ್ಯಕ್ಷತೆ ವಹಿಸುವವರು ಯಾರು? ಎಂಬ ಬಗ್ಗೆ ಕಾಂಗ್ರೆಸ್(ಐ)ನ ಎರಡೂ ಗುಂಪುಗಳನಲ್ಲಿ ಮೂಡಿದ ಜಿಜ್ಞಾಸೆಯಿಂದಾಗಿ ಬೆಳಿಗ್ಗೆ 11-30 ಕ್ಕೆ ಪ್ರಾರಂಭವಾಗಬೇಕಾಗಿದ್ದ ಕಾರ್ಯಕ್ರಮ ಮಧ್ಯಾಹ್ನ ಒಂದು ಗಂಟೆಗೆ ಪ್ರಾರಂಭವಾಯಿತು.

ಸಂಯುಕ್ತ ಕರ್ನಾಟಕ: ಜು.9

ಶಿಲ್ಪಿಗಳ ಬೀಡಲ್ಲಿ ಕೋಮು ಸೌಹಾರ್ದದ ಹಾಡು

ಕೋಲಾರ : ಶಿವಾರಪಟ್ಟಣ 4,000 ಜನಸಂಖ್ಯೆಯ ಗ್ರಾಮ, ವಿಶ್ವದ ವಿವಿದೆಡೆಗಳಲ್ಲಿ ಪ್ರದರ್ಶಿತಗೊಳ್ಳುತ್ತಿರುವ ಶಿಲ್ಪಕಲೆಯ ರೂವಾರಿಗಳ ತವರೂರು. ಗ್ರಾಮದ ಮುಸ್ಲಿಂ ಜನಸಂಖ್ಯೆ ಸುಮಾರು ಒಂದು ಸಾವಿರ...ಗಿದ್ದರೂ ಮೊದಲಿಂದಲೂ ಗ್ರಾಮದ ಜನತೆ ಪರಸ್ಪರ ಮತೀಯ ಸಾಮರಸ್ಯದಿಂದ ಬಾಳುತ್ತಿದ್ದಾರೆ. ದೇಶದ ಯಾವುದೇ ಭಾಗದಲ್ಲಿ ತಗಲುವ ಮತೀಯ ಜ್ವಾಲೆಯ ದಳ್ಳುರಿ ಈ ಗ್ರಾಮದ ಜನಜೀವನದ ಮೇಲೆ ಯಾವುದೇ ಪರಿಣಾಮ ಬೀರದು.

ಗ್ರಾಮದ ಹಿಂದೂಗಳಂತೆ ಮುಸ್ಲಿಮರೂ ತಮ್ಮ ಹಬ್ಬಗಳನ್ನು ಸಾಮಾನ್ಯ ರೀತಿಯಲ್ಲಿ ಆಚರಿಸಿಕೊಳ್ಳುತ್ತಾರೆ. ಅದೇ ರೀತಿಯ ಆಚರಣೆಯು ಮೊಹರಂ ಸಂದರ್ಭದಲ್ಲೂ ನಡೆಯುತ್ತದೆ. ಆದರೆ ಈ ಬಾರಿಯ ಮೊಹರಂ ಆಚರಣೆ ಮಾಮೂಲಿನಂತಿರಲಿಲ್ಲ. ಕೇವಲ ಮುಸ್ಲಿಂ ಬಾಂಧವರ ಆಂತರಿಕ ಹಬ್ಬವಾಗದೆ ಇಡೀ ಗ್ರಾಮದ ಉತ್ಸವವಾಗಿ ಮಾರ್ಪಟ್ಟಿತ್ತು.

ಅಂದು ಗ್ರಾಮದ ವಿವಿಧ ಧರ್ಮ-ವರ್ಗದ ಜನತೆ ಬಣ್ಣ ಹಾಕಿದರು. ಕುಣಿದರು, ಕುಪ್ಪಳಿಸಿದರು. ಮತ್ತೊಂದು ವರ್ಗದ ಜನರ ಸಂತಸದಲ್ಲಿ ಸಮಭಾಗಿಗಳಾದರು. ಮಾನವ ಸಂಬಂಧಗಳನ್ನು ಮೆರೆಸಿದರು. ಒಂದು ವರ್ಗದ ಜನರ ...ಣೆಯಾಗಬೇಕಾದ ಮೊಹರಂ ಅನ್ನು ಗ್ರಾಮ...ಆಚರಿಸಿದರು. ನೆರೆಹೊರೆಯ ಗ್ರಾಮಗಳ ಗ್ರಾಮಸ್ಥರಿಗೂ ಮಾದರಿಯಾದರು.

ಸಂಯುಕ್ತ ಕರ್ನಾಟಕ ಜು. 8

ಎಸ್.ಎಫ್.ಐ ರಾಜ್ಯ ಮಟ್ಟದ ತರಬೇತಿ ಶಿಬಿರ

ಕರ್ನಾಟಕ ರಾಜ್ಯದಲ್ಲಿ ವಿದ್ಯಾರ್ಥಿ ಚಳುವಳಿ ನೇತೃತ್ವವಹಿಸಿರುವ ಎಸ್.ಎಫ್.ಐ.ನ ಪ್ರಮುಖ ಆಯ್ದ ಕಾರ್ಯಕರ್ತರಿಗೆ ವಿವಿಧ ಸೈದ್ಧಾಂತಿಕ ತರಬೇತಿ ನೀಡುವ ನಿಟ್ಟಿನಲ್ಲಿ ಗುಲ್ಬರ್ಗಾದ ಶಹಾಪುರದಲ್ಲಿ ಜೂನ್ 26 ರಿಂದ ಜುಲೈ 1 ರವರೆಗೆ ರಾಜ್ಯ ಮಟ್ಟದ ತರಬೇತಿ ಶಿಬಿರ ಯಶಸ್ವಿಯಾಗಿ ನಡೆಯಿತು.

ದಿನಾಂಕ ಜೂನ್ 26,1993 ತರಬೇತಿ ಶಿಬಿರದ ಉದ್ಘಾಟನಾ ಸಮಾರಂಭ ಜರುಗಿತು. ಪ್ರಾಂತ ರೈತ ಸಂಘದ ಮುಖಂಡ ಹಾಗೂ ಸಿಪಿಐ(ಎಂ)ನ ರಾಜ್ಯ ಸಮಿತಿ ಸದಸ್ಯರಾದ ಕಾಂ. ಮಾರುತಿ ಮಾನ್ಪಡೆಯವರು ಉದ್ಘಾಟನೆಯನ್ನು ನೆರವೇರಿಸಿದರು. ರೈತ ಸಂಘದ ಕಾಂ. ಚನ್ನಪ್ಪ ಆನೆಗುಂದಿ ಮತ್ತಿತರ ಮುಖಂಡರು ಹಾಗೂ ಸ್ಥಳೀಯ ಜನರು, ಡಿ.ವೈ.ಎಫ್.ಐ ಸಂಗಾತಿಗಳು ಸಮಾರಂಭದಲ್ಲಿ ಹಾಜರಿದ್ದರು.

ವೈವಿಧ್ಯಮಯವಾದ ರಾಷ್ಟ್ರೀಯ ಅಂತರಾಷ್ಟ್ರೀಯ ಮತ್ತು ಸೈದ್ಧಾಂತಿಕ ವಿಚಾರಗಳ ಬಗ್ಗೆ ರಾಜ್ಯ ರಾಷ್ಟ್ರೀಯ ಮುಖಂಡರುಗಳು ಮತ್ತು ಖ್ಯಾತ ವಿಚಾರವಾದಿಗಳಿಂದ ತರಬೇಗಳು ನಡೆದವು.

'ವಿದ್ಯಾರ್ಥಿ ಚಳುವಳಿಯ ಇತಿಹಾಸ' ಈ ಬಗ್ಗೆ ಎಸ್.ಎಫ್.ಐ.ನ ಮಾಜಿ ನಾಯಕರು ಮತ್ತು ಸಿಪಿಐ(ಎಂ)ನ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾಂ. ಜಿ.ವಿ. ಶ್ರೀರಾಮರೆಡ್ಡಿ ಮಾತನಾಡಿದರು. ಸ್ವಾತಂತ್ರ್ಯ ಹೋರಾಟದೊಂದಿಗೆ ಬೆಳೆದ ವಿವಿಧ ತಿರುವುಗಳನ್ನು ಪಡೆದ ವಿದ್ಯಾರ್ಥಿ ಚಳುವಳಿಯ ಸ್ವರೂಪವನ್ನು ವಿವರಿಸಿದರು.

ಅಂತರ ರಾಷ್ಟ್ರೀಯ ಪರಿಸ್ಥಿತಿಯನ್ನು ಕುರಿತು ಎಸ್.ಎಫ್.ಐ ಮಾಜಿ ಅಖಿಲ ಭಾರತ ಪ್ರಧಾನ ಕಾರ್ಯದರ್ಶಿಗಳಾದ ಕಾಂ. ನೀಲೋತ್ಪಾಲ್ ಬಸು ಅವರು ಮಾತನಾಡಿದರು.

ದಿನಾಂಕ 27ರಿಂದ 'ಮಾರ್ಕ್ಸ್‌ವಾದದ ಪ್ರಸ್ತುತತೆ' ಎಂಬ ವಿಷಯದ ಮೇಲೆ ಸಿಪಿಎಂ ರಾಜ್ಯ ಕಾರ್ಯದರ್ಶಿ ಪಿ. ರಾಮಚಂದ್ರ ರಾವ್ ಮಾತನಾಡಿದರು. ಹೊಸ ಆರ್ಥಿಕ ನೀತಿಯ ಒಸ್ನಲೆಯ ಅಪಾಯಗಳ ಬಗ್ಗೆ ಖ್ಯಾತ ಲೇಖಕ, ವಿಚಾರವಾದಿ, ಕಾಂ. ಸಿ. ಆರ್. ಭಟ್ ಅವರು ವಿವರಿಸಿದರು. ಹೊಸ ಆರ್ಥಿಕ ನೀತಿಯ ಭಾಗವಾಗಿ ಬರುತ್ತಿರುವ 'ಉಳ್ಳವರಿಗೆ ಶಿಕ್ಷಣ' ಎಂಬ 'ಹೊಸ ಶಿಕ್ಷಣ ನೀತಿ'ಯ ಸ್ವರೂಪವನ್ನು ವಿದ್ಯಾರ್ಥಿಗಳ ಮುಂದಿಟ್ಟರು. ಬೆಂಗಳೂರು ವಿ.ವಿ. ಅಕಾಡೆಮಿಕ್ ಕೌನ್ಸಿಲ್ ಸದಸ್ಯ ಅಧ್ಯಾಪಕ ಕಾಂ. ಟಿ. ವೆಂಕಟೇಶ್ ಮೂರ್ತಿಯವರು. 'ಕೋಮುವಾದ' ಮತ್ತು 'ಮೂಲಭೂತವಾದ'ದ ಸೈದ್ಧಾಂತಿಕ ನೆಲೆಗಳ ವೈಜ್ಞಾನಿಕ ವಿಶ್ಲೇಷಣೆಯನ್ನು ಆಕರ್ಷಕವಾಗಿ ವಿವರಿಸಿದವರು ಗುಲ್ಬರ್ಗಾ ಸಮುದಾಯದ ಸಂಗಾತಿ ಕಾಂ. ಆರ್. ಕೆ. ಹುಡುಗಿ. 'ದಲಿತ ಚಳುವಳಿ - ಅಂಬೇಡ್ಕರ್ ಮತ್ತು ವೈಜ್ಞಾನಿಕ ನಿಲುವು' ಎಂಬ ಬಗ್ಗೆ ಮಾತಾಡಿದರು. ಸಿಪಿಐ(ಎಂ) ರಾಜ್ಯ ಸಮಿತಿ ಸದಸ್ಯರಾದ ಕಾಂ. ಜಿ.ಎನ್. ನಾಗರಾಜ್. ಎಸ್.ಎಫ್.ಐ. ನ ಸಂವಿಧಾನ ಮತ್ತು ಕಾರ್ಯಕ್ರಮ ವನ್ನು ವಿವರಿಸಿದವರು ಎಸ್.ಎಫ್.ಐ.ನ ಮಾಜಿ, ಡಿ.ವೈ.ಎಫ್.ಐ ಹಾಲಿ ರಾಜ್ಯ ಕಾರ್ಯದರ್ಶಿ ಎಸ್.ವೈ. ಗುರುಶಾಂತ್. ಅವರು ಬಿ.ಜಿ.ವಿ.ಎಸ್., ವಿಜ್ಞಾನ ಚಳುವಳಿಯ ಮುಖಂಡರಾದ ಕಾಂ. ಯತಿರಾಜು ಅವರು ವಿಜ್ಞಾನವು ಬೆಳೆದು ಬಂದ ದಾರಿಯ ಬಗ್ಗೆ 'ವಿಜ್ಞಾನದ ಇತಿಹಾಸ ಮತ್ತು ವೈಜ್ಞಾನಿಕ ಚಿಂತನೆ' ಬಗ್ಗೆ ಮಾತನಾಡಿದರು.

ಪ್ರಾಥಮಿಕ ಶಿಕ್ಷಣ ಮತ್ತು ವೃತ್ತಿಪರ ಶಿಕ್ಷಣದ ಬಗ್ಗೆ ಸುಪ್ರಿಂ ಕೋರ್ಟ್ ನೀಡಿರುವ ಚಾರಿತ್ರಿಕ ತೀರ್ಪಿನ ಸ್ವರೂಪವನ್ನು ವಿವರಿಸಿದವರು. ಎಸ್.ಎಫ್.ಐ. ನ ರಾಜ್ಯ ಅಧ್ಯಕ್ಷರಾದ ಕಾಂ. ಜಿ.ಸಿ. ಬಯ್ಯಾರೆಡ್ಡಿಯವರು.

'ಸಂಘಟನೆ'ಯ ಬಗ್ಗೆ ಎಸ್.ಎಫ್.ಐ. ರಾಷ್ಟ್ರಾಧ್ಯಕ್ಷರಾದ ಕಾಂ. ವೈ. ವೆಂಕಟೇಶ್ವರ ರಾವ್ ಅವರು ವಿವರಿಸಿದರು.

ತರಬೇತಿ ಶಿಬಿರದಲ್ಲಿ ಉಪನ್ಯಾಸಗಳಷ್ಟೇ ಅಲ್ಲದೆ ವಿದ್ಯಾರ್ಥಿಗಳನ್ನು ಭಾಗಿಯಾಗಿಸುವ ರೀತಿಯಲ್ಲಿ ಗುಂಪು ಚರ್ಚೆಗಳನ್ನು ಸಂಘಟಿಸಲಾಗಿತ್ತು. ಶಿಬಿರಾರ್ಥಿಗಳು ಸಾಕಷ್ಟು ಉತ್ತಮ ರೀತಿಯಲ್ಲಿ ಚರ್ಚೆಯಲ್ಲಿ ಪಾಲ್ಗೊಂಡಿದ್ದರು.

ಕೇವಲ ಪಾಠವಷ್ಟೇ ಅಲ್ಲದೆ ವಿವಿಧ ಆಟೋಟಗಳನ್ನು ಸಂಘಟಿಸಲಾಗಿತ್ತು. ಕಬ್ಬಡಿ ಸ್ಪರ್ಧೆ, ಬೆಟ್ಟ ಹತ್ತುವ ಸ್ಪರ್ಧೆ, ಮ್ಯೂಸಿಕಲ್ ಚೇರ್ ಮುಂತಾದುವುಗಳಲ್ಲಿ ಶಿಬಿರಾರ್ಥಿಗಳು ಅತ್ಯುತ್ಸಾಹದಿಂದ ಪಾಲ್ಗೊಂಡಿದ್ದರು.

ಜುಲೈ 1,1993 ರಂದು ರಾಜ್ಯ ಸಮಿತಿ ಮಂಡಿಸಿದ ವಾರ್ಷಿಕ...

ಶಿಬಿರಾರ್ಥಿಗಳು ಚರ್ಚೆಯಲ್ಲಿ ಪಾಲ್ಗೊಂಡಿದ್ದರು. ಸಂಜೆ ನಡೆದ ಸಮಾರೋಪ ಸಮಾರಂಭದಲ್ಲಿ ಶಿಬಿರದ ಯಶಸ್ಸಿಗೆ ದುಡಿದ ಸಂಗಾತಿಗಳೆಲ್ಲರಿಗೆ ವಂದನೆ ಸಲ್ಲಿಸಲಾಯಿತು.

ಶಹಾಪುರದ ಭೀಮರಾಯನ ಗುಡಿಯಲ್ಲಿ ನಡೆಯಬೇಕಿದ್ದ ಶಿಬಿರ ಕಡೆಗಳಿಗೆಯಲ್ಲಿ ಆರ್.ಎಸ್.ಎಸ್‌ನ ಚೆಡ್ಡಿಗಳ ಕುತಂತ್ರದಿಂದ ಸ್ಥಳಾವಕಾಶ ನಿರಾಕರಿಸಲಾಯಿತಾದರೂ. ಗುಲ್ಬರ್ಗಾ ಸಂಗಾತಿಗಳ ಪರಿಶ್ರಮ ಮತ್ತು ಸಹಕಾರದಿಂದ ಮತ್ತೊಂದೆಡೆ ಶಿಬಿರ ಯಶಸ್ವಿಯಾಗಿ ನಡೆಯಿತು. ಗುಲ್ಬರ್ಗಾದಂತಹ ಬರಪೀಡಿತ ಜಿಲ್ಲೆಯಲ್ಲಿ ಶಿಬಿರವನ್ನು ಯಶಸ್ವಿಯಾಗಿ ಮಾಡಲು ಶಕ್ತಿ ಮೀರಿ ಶ್ರಮಿಸಿದ ಶಹಾಪುರದ ಎಸ್.ಎಫ್.ಐ. ಸಂಗಾತಿಗಳ ಮತ್ತು ಡಿ.ವೈ.ಎಫ್.ಐ, ರೈತ ಸಂಘ ಮುಂತಾದವರ ಪರಿಶ್ರಮಕ್ಕೆ ನ್ಯಾಯ ಒದಗಿಸುವ ಆಶಯದೊಂದಿಗೆ, ಶಹಾಪುರ ಮುಖ್ಯ ಬೀದಿಗಳಲ್ಲಿ ಸಂಜೆ ಶಿಬಿರಾರ್ಥಿಗಳ ಮೆರವಣಿಗೆ ಆಕರ್ಷಕ ಘೋಷಣೆಗಳೊಂದಿಗೆ ನಡೆದು ಬಸ್ ನಿಲ್ದಾಣದಲ್ಲಿ ನಡೆದ ಪುಟ್ಟ ಸಭೆಯೊಂದಿಗೆ ಮುಕ್ತಾಯವಾಯಿತು.

ಅಸಂಘಟಿತ ಕಾರ್ಮಿಕರ ಹೋರಾಟದಲ್ಲೊಂದು.......

ಪುಟ 1ರಿಂದ

ನಿರತ ಕಾರ್ಮಿಕರು ಒಂದು ದೊಡ್ಡ ಮೆರವಣಿಗೆ ನಡೆಸಿ ವಿಧಾನಸೌಧದತ್ತ ಹೋದರು. ಸಿಐಟಿಯುವಿನ ನಿಯೋಗವೊಂದು ಮುಷ್ಕರ ನಿರತ ಅಸಂಘಟಿತ ವಲಯದ ಲಕ್ಷಾಂತರ ಕಾರ್ಮಿಕರ ಪರವಾಗಿ ಒಂದು ಮನವಿಯನ್ನು ಮುಖ್ಯಮಂತ್ರಿಗಳಿಗೆ ಅರ್ಪಿಸಿದರು. ಮುಖ್ಯಮಂತ್ರಿಗಳು ಮುಂದಿನ ವಾರ ಈ ಬಗ್ಗೆ ಚರ್ಚಿಸುವುದಾಗಿ ಆಶ್ವಾಸನೆಯಿತ್ತರು. ಇದರಿಂದ ಅಸಂಘಟಿತ ವಲಯದ ಕಾರ್ಮಿಕರ ಸಮಸ್ಯೆಗಳು ಬಗೆಹರಿದುಬಿಡುತ್ತವೆ ಎಂಬ ಭ್ರಮೆಯೇನೂ ಸಿಐಟಿಯುವಿಗಿಲ್ಲ ಎಂದಿರುವ ಕಾಂ.ವಿ.ಜೆ.ಕೆ.ನಾಯರ್ ಇದಕ್ಕೆ ಕಾರಣ ನೀಡುತ್ತಾ ಕಾರ್ಮಿಕ ಇಲಾಖೆಯ ಆಡಳಿತ ಅತ್ಯಂತ ಅದಕ್ಷವಾಗಿದೆ ಅಥವಾ ಭ್ರಷ್ಟವಾಗಿದೆ ಎಂದಿದ್ದಾರೆ. ಲೇಬರ್ ಕೋರ್ಟುಗಳೂ, ಪಂಚಾಯ್ತಿಗಳ ಪರಿಸ್ಥಿತಿಯೂ ಅಷ್ಟೇ ಕೆಟ್ಟದಾಗಿದೆ. ವರ್ಷಾನುಗಟ್ಟಲೆ ಈ ಕೋರ್ಟುಗಳಿಂದ ತೀರ್ಪು ಬರುವುದಿಲ್ಲ. ಆದ್ದರಿಂದ ಕಾರ್ಮಿಕರ ಒಂದೇ ಆಶಾಕಿರಣವೆಂದರೆ ಶಕ್ತಿಶಾಲೀ ಹೋರಾಟಗಳ ಮೂಲಕ ಸರಕಾರ ತಮ್ಮ ನ್ಯಾಯಬದ್ಧ ಬೇಡಿಕೆಗಳನ್ನು ಒಪ್ಪುವಂತೆ ಮಾಡುವುದು. ಜುಲೈ 14ರ ಮುಷ್ಕರದ ಮೂಲಕ ಈ ಸಂದೇಶವನ್ನು ಸಾವಿರಾರು ಕಾರ್ಮಿಕರ ಮಧ್ಯೆ, ವಿಶೇಷವಾಗಿ 15 ಲಕ್ಷ ದುಡಿಯುವ ಜನಗಳಿರುವ ಬೆಂಗಳೂರಿನ ಕಾರ್ಮಿಕರ ನಡುವೆ ಕೊಂಡೊಯ್ಯಲು ಸಾಧ್ಯವಾಯಿತು, ತಮಗೂ ತುಟ್ಟಿಭತ್ಯೆ ಎಂಬುದು ನಿಗದಿಯಾಗಿದೆ, ಹೋರಾಟಗಳ ಮೂಲಕ ಅವನ್ನು ಜ್ಯಾರಿಗೊಳಿಸಲು ಸಾಧ್ಯ ಎಂದು ಅಗರಬತ್ತಿ ಕಾರ್ಮಿಕರಿಗೆ ಮನವರಿಕೆ ಮಾಡಲು ಸಾಧ್ಯವಾಗಿದೆ ಎಂದು ಕಾಂ.ವಿ.ಜೆ.ಕೆ. ಹೇಳಿದ್ದಾರೆ.

ಬೆಂಗಳೂರಿನಲ್ಲಿ ಈ ಮುಷ್ಕರಕ್ಕೆ ಪೂರ್ವಭಾವಿಯಾಗಿ ಪ್ರಚಾರ ಕಾರ್ಯ, ಸಿದ್ಧತೆಗಳು ನಡೆದಿದ್ದವು. ಶ್ರೀರಾಂಪುರ, ಮೈಸೂರು ರಸ್ತೆ, ಯಶವಂತಪುರದಲ್ಲಿ ವ್ಯಾಪಕ ಪ್ರಚಾರ ನಡೆಸಲಾಯಿತು. ಕೆ.ಆರ್.ಪುರಂ, ಕನಕಪುರ ರಸ್ತೆಗಳಂತಹ ಪ್ರದೇಶಗಳಲ್ಲೂ ಸಿದ್ಧತಾ ಕಾರ್ಯ ನಡೆದವು. ಹೋಟೆಲ್ ಉದ್ಯಮದಲ್ಲಿ ಜುಲೈ 2ರಂದು ಒಂದು ಮತಪ್ರದರ್ಶನ ನಡೆಸಿ ಪ್ರತಿ ಹೋಟೆಲ್‌ನಲ್ಲೂ 'ಎನ್' ಫಾರ್ಮ್‌ಗಳನ್ನು ಪ್ರದರ್ಶಿಸಬೇಕು, ಅವರಲ್ಲಿ ಪ್ರತಿ ಕಾರ್ಮಿಕರ ಹೆಸರು, ಕೆಲಸದ ವೇಳೆಗಳನ್ನು ನಮೂದಿಸಬೇಕು ಎಂದು ಒತ್ತಾಯಿಸಿದ್ದರು.

ಸಿಐಟಿಯು ಅಗತ್ಯ ಆಧಾರಿತ ಕನಿಷ್ಠ ಕೂಲಿಗಾಗಿ, ಹೋಟೆಲ್ ಕಾರ್ಮಿಕರ ಕಲ್ಯಾಣ ಕಾನೂನುಗಳ ರಚನೆಗಾಗಿ ಎಲ್ಲಾ ಕಾರ್ಮಿಕರಿಗೆ ಕನಿಷ್ಠ ಕೂಲಿ ಹಾಗೂ ಇತರ ಸೌಲಭ್ಯಗಳನ್ನು ನೋಟಿಫೈ ಮಾಡಿಸಲು ಹೋರಾಟವನ್ನು ಮುಂದುವರಿಸಲು ದೃಢ ನಿರ್ಧಾರ ಮಾಡಿದೆ. ಅಸಂಘಟಿತ ವಲಯಗಳ ಕಾರ್ಮಿಕರ ಬೇಡಿಕೆಗಳನ್ನು ಈಡೇರಿಸಿಕೊಳ್ಳಲು ಈ ವರ್ಷದ ಅಂತ್ಯದೊಳಗೆ ಅನಿರ್ದಿಷ್ಟ ಕಾಲದ ಮುಷ್ಕರ ನಡೆಸುವ ತನ್ನ ನಿರ್ಣಯವನ್ನು ಪ್ರಕಟಿಸಿದೆ ಎಂದೂ ಕಾಂ.ವಿ.ಜೆ.ಕೆ.ನಾಯರ್ ತಿಳಿಸಿದ್ದಾರೆ. ಈ ಹೋರಾಟದ ನಿಲುವನ್ನು ಕಾರ್ಮಿಕ ಸಮೂಹದ ನಡುವೆ ಕೊಂಡೊಯ್ದುದ್ದರಿಂದ ಅಸಂಘಟಿತ ವಲಯದ ಕಾರ್ಮಿಕರ ಹೋರಾಟದ ಈ ಘಟ್ಟ ಯಶಸ್ವಿಯಾಗಿ ಪೂರ್ಣಗೊಂಡಿದೆ ಎಂದು ಕಾಂ.ವಿ.ಜೆ.ಕೆ. ನಾಯರ್ ಹೇಳಿದ್ದಾರೆ.

ಅಸಂಘಟಿತ ಕಾರ್ಮಿಕರ ಮುಷ್ಕರ

ದ.ಕ. ದಲ್ಲಿ ಉತ್ಸಾಹದ ಪ್ರತಿಕ್ರಿಯೆ

ಅಸಂಘಟಿತ ಕಾರ್ಮಿಕರಿಗೆ ನ್ಯಾಯಯುತ ಕನಿಷ್ಠ ವೇತನ ನಿಗದಿಪಡಿಸುವಂತೆ ಸಿಐಟಿಯು ರಾಷ್ಟ್ರಾದ್ಯಂತ ನೀಡಿದ ಮುಷ್ಕರದ ಕರೆಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವ್ಯಾಪಕ ಬೆಂಬಲ ವ್ಯಕ್ತವಾಯಿತು.

ಜಿಲ್ಲೆಯ ವಿವಿಧ ಕ್ಷೇತ್ರದ ಸುಮಾರು 80 ಸಾವಿರಕ್ಕೂ ಹೆಚ್ಚು ಅಸಂಘಟಿತ ಕಾರ್ಮಿಕರು ಮುಷ್ಕರ ನಡೆಸಿ ಒಕ್ಕೊರಲಿನ ಬೇಡಿಕೆ ಮಂಡಿಸಿದರು.

ಬೀಡಿ ಕೈಗಾರಿಕೆಯ 40 ಸಾವಿರ ಕಾರ್ಮಿಕರೂ ಸೇರಿದಂತೆ ಹೆಂಚು, ಗೋಡಂಬಿ ಕಾರ್ಮಿಕರೂ ಯಶಸ್ವಿ ಮುಷ್ಕರ ನಡೆಸಿದ್ದಾರೆ ಎಂದು ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕೆ. ಮೂಸಬ್ಬ ತಿಳಿಸಿದ್ದಾರೆ.

ಇಡೀ ಜಿಲ್ಲೆಯ ಬೀಡಿ ಕೆಲಸಗಾರರು ಕೆಲಸ ಸ್ಥಗಿತಗೊಳಿಸಿದ್ದರಿಂದ ಯಾವ ಡಿಪ್ಪೋ ಸಹ ಜುಲೈ 14 ರಂದು ಕಾರ್ಯನಿರ್ವಹಿಸಲಿಲ್ಲ ಎಂದು ಸಿಐಟಿಯು ಜಿಲ್ಲಾಕಾರ್ಯದರ್ಶಿ ಉಮೇಶ್ ಭಂಡಾರಿ 'ಐಕ್ಯರಂಗ'ಕ್ಕೆ ತಿಳಿಸಿದರು.

ಕುಂದಾಪುರ, ಉಡುಪಿ, ಮಂಗಳೂರು ತಾಲೂಕಿನ ಹೆಂಚು, ಗೋಡಂಬಿ ಕಾರ್ಮಿಕರು ಮುಷ್ಕರಕ್ಕೆ ಉತ್ಸಾಹದ ಪ್ರತಿಕ್ರಿಯೆ ತೋರಿಸಿದರು.

ಮಂಗಳೂರು ಬಂದರ್ ಪ್ರದೇಶದ ಅಡಿಕೆ ಸಂಸ್ಕರಣ ನಡೆಸುವ ಕಾರ್ಮಿಕರು, ಕುಲಶೇಖರದ ಕಾಫಿ ಶುದ್ಧೀಕರಣ ಮಾಡುವ ಕಾರ್ಮಿಕರು, ಮಂಗಳೂರಿನ ಟೈರ್ ರಿಟ್ರೆಡಿಂಗ್, ಯಯ್ಯಾಡಿ ಮತ್ತು ಕೊಂಚಾಡಿಯ ಪ್ಯಾಕೇಜಿಂಗ್ ಘಟಕದ ಕಾರ್ಮಿಕರು, ಉಪ್ಪಿನಂಗಡಿಯ ಅಲ್ಯುಮಿನಿಯಂ ಇಂಡಸ್ಟ್ರಿ, ಪಾಣೆ ಮಂಗಳೂರಿನಲ್ಲಿ ವಿದ್ಯುತ್ ಕಂಬ ನಿರ್ಮಿಸುವ ಕಾರ್ಮಿಕರು, ಕುಂದಾಪುರ ಮಂಗಳೂರಿನ ಆಟೋಮೊಬೈಲ್ ಇಂಡಸ್ಟ್ರಿ ಕಾರ್ಮಿಕರೂ ಸೇರಿದಂತೆ 80 ಸಾವಿರ ಕಾರ್ಮಿಕರು ಮುಷ್ಕರದಲ್ಲಿ ಪಾಲ್ಗೊಂಡಿದ್ದರು ಎಂದು ಉಮೇಶ್ ಭಂಡಾರಿ ತಿಳಿಸಿದ್ದಾರೆ.



ಹೋರಾಟದ ದಾರಿಯಲ್ಲಿ ಆಟೋ ಚಾಲಕರು

ಕೇಪುಳ

ನೆಹರೂ ಮೈದಾನ ಕಾಂಗ್ರೆಸ್ ನಾಯಕರುಗಳ ಸಾವಿರಾರು ಒಣ ಭಾಷಣಗಳನ್ನು ಕೇಳಿದೆ. ಬಿಜೆಪಿಯ ಮನೆಮುರುಕತನದ ಮಾತುಗಳನ್ನು ಆಲಿಸಿದೆ. ಇಂತಹ ಮೈದಾನ ಹೆಮ್ಮೆಯಿಂದ ಪಟ ಪಟ ಹಾರುತ್ತಿದ್ದ ಕೆಂಬಾವುಟಗಳನ್ನು ಹೊತ್ತ ಸಾವಿರಾರು ಆಟೋಗಳಲ್ಲಿ ಬಂದಿಳಿದ ಚಾಲಕರನ್ನು ಕಂಡು ದಿಗ್ಭ್ರಮೆಗೊಂಡಿತು.

ಫ್ಲಾಗ್ ಮೀಟರ್‌ಗಳನ್ನು ಕಡ್ಡಾಯವಾಗಿ ಅಳವಡಿಸಬೇಕೆಂಬ ಸರ್ಕಾರದ ಆದೇಶವನ್ನು ಪ್ರತಿಭಟಿಸಿ ಸಿಐಟಿಯು ನೇತೃತ್ವದ ದಕ್ಷಿಣ ಕನ್ನಡ ಜಿಲ್ಲಾ ಆಟೋ ರಿಕ್ಷಾ ಚಾಲಕರ ಸಂಘ ಮಂಗಳೂರಿನಲ್ಲಿ ಬೃಹತ್ ಪ್ರತಿಭಟನೆ ನಡೆಸಿತು. ಕೆಂಬಾವುಟದ ಅಡಿಯಲ್ಲಿ ಶಿಸ್ತಿನಿಂದ ಸಾಗಿದ ಸಾವಿರಾರು ಆಟೋಗಳನ್ನು ಕಂಡು ನಗರದ ಜನ ದಂಗಾದರು.

ಆಟೋ ಚಾಲಕರು ಎಂದರೆ ಸಾಕು ಅಶಿಸ್ತಿನವರು ಎಂದು ಒಂದೇ ಸಲಕ್ಕೆ ಮೂಗು ಮುರಿಯುವ ಜನರ ಮುಖಕ್ಕೆ ರಾಚುವಂತೆ ಮೂರು ಸಾವಿರಕ್ಕೂ ಹೆಚ್ಚು ಆಟೋಗಳು ಮಂಗಳೂರಿನ ಪ್ರಮುಖ ಬೀದಿಗಳಲ್ಲಿ ಒಂದರ ಹಿಂದೆ ಒಂದರಂತೆ ಶಿಸ್ತುಬದ್ಧವಾಗಿ ಸಾಗಿ ಹೋದುದು ಗಮನ ಸೆಳೆದವು.

ಜುಲೈ 14 ರಂದು ಬಾವುಟಗುಡ್ಡೆಯಿಂದ ಆರಂಭಗೊಂಡ ಆಟೋ ಮೆರವಣಿಗೆಗೆ ಅನೇಕ ಹೋಳಿಗಳು ಬಂದು ಸೇರುವಂತೆ ಪ್ರತಿಬೀದಿಯಲ್ಲೂ ಆಟೋಗಳು ಬಂದು ಸೇರಿಕೊಂಡವು. ಇದೇ ಪ್ರಥಮ ಬಾರಿಗೆ ಎಲ್ಲಾ ಆಟೋಸ್ಟ್ಯಾಂಡ್‌ಗಳು ಬಿಕೋ ಎನ್ನುತ್ತಿದ್ದವು. ಆಟೋಗಳನ್ನು ನಂಬಿದ ನಾಗರಿಕರಿಗೆ, ಶಾಲೆಯ ಮಕ್ಕಳಿಗೆ ತೊಂದರೆಯಾಗದ ರೀತಿಯಲ್ಲಿ ಸಿಐಟಿಯು ಪ್ರತಿಭಟನೆ ರೂಪಿಸಿತ್ತು.

ಬರಿದ ಮೈದಾನ : ಪ್ರಮುಖ ರಸ್ತೆಗಳಲ್ಲಿ ಸಾಗಿದ ಮೆರವಣಿಗೆ ನೆಹರೂ ಮೈದಾನಕ್ಕೆ ಬಂದಾಗ ಜನ ನೋಡನೋಡುತ್ತಿದ್ದಂತೆಯೇ ಬೃಹತ್ ಮೈದಾನವನ್ನು ಆವರಿಸಿ ನಿಂತಿತು. ಇಲ್ಲಿಯೂ ಮತ್ತೆ ಶಿಸ್ತು. ಇಡೀ ಮೈದಾನ ಆಟಗಳಿಂದ ತುಂಬಿದರೂ ಮೆರವಣಿಗೆಯಲ್ಲಿ ಬರುತ್ತಿದ್ದ ಆಟೋಗಳ ಸಂಖ್ಯೆ ಮಾತ್ರ ತಪ್ಪಲಿಲ್ಲ.

ಮೈದಾನದ ಹೊಟ್ಟೆ ಬಿರಿದು ಮುಂದಿನ ರಸ್ತೆಯಲ್ಲೂ ಆಟೋಗಳು ನಿಂತಿದ್ದವು. ಭಾರಿ ಸಂಖ್ಯೆಯಲ್ಲಿದ್ದ ಪೊಲೀಸರು ಚಾಲಕರ ಶಿಸ್ತನ್ನು ನೋಡಿ ಕೆಲಸವಿಲ್ಲದೆ ಕೈ ಕಟ್ಟಿ ನಿಂತರು.

ಆಟೋಗಳು ಮೈದಾನದಲ್ಲಿ ಸೇರ್ಪಡೆಯಾದ ನಂತರ ಚಾಲಕರು ಫ್ಲಾಗ್ ಮೀಟರ್ ಕಡ್ಡಾಯ ಕ್ರಮದ ವಿರುದ್ಧ ಘೋಷಣೆ ಕೂಗಿ ಮೆರವಣಿಗೆಯಲ್ಲಿ ತೆರಳಿ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದರು. ಆಟೋ ಚಾಲಕರ ಸಂಘದ ಪ್ರಧಾನ ಕಾರ್ಯದರ್ಶಿ ಸುಧನ್ ಕುಮಾರ್ ಉರ್ವಾ, ಸಿಐಟಿಯುನ ಉಮೇಶ್ ಭಂಡಾರಿ, ಕೆ. ಮೂಸಬ್ಬ, ಹಿರಿಯ ಚಾಲಕ ಬಿ.ಎಸ್. ಪರಮೇಶ್ ನಿಯೋಗದ ನೇತೃತ್ವ ವಹಿಸಿದ್ದರು.

ಇಬ್ಬಗೆ ನೀತಿ: ಆಟೋ ಚಾಲಕರ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಕೆ. ಮೂಸಬ್ಬ ಅವರು ಆಟೋಚಾಲಕರು ಏರಿದ ಜೀವನ ವೆಚ್ಚದಲ್ಲಿ ದುಸ್ಥಿತಿಯಲ್ಲಿ ಬದುಕು ಸಾಗಿಸುತ್ತಿದ್ದಾರೆ. ಇಲ್ಲಿನ ಆಡಳಿತ ಬಸ್ ಮಾಲೀಕರಿಗೆ ಒಂದು ನೀತಿ ಬಡ ಆಟೋ ಚಾಲಕರಿಗೆ ಮತ್ತೊಂದು ನೀತಿಯನ್ನು ಅನುಸರಿಸುತ್ತಿದೆ. ಇದರ ವಿರುದ್ಧ ಬಲವಾದ ಹೋರಾಟ ಸಂಘಟಿಸಬೇಕು ಎಂದರು.

ಉಮೇಶ್ ಭಂಡಾರಿ ಮಾತನಾಡಿ ಫ್ಲಾಗ್ ಮೀಟರ್‌ನಲ್ಲಿ ದೋಷವಿದೆಯೇ ಎಂಬುದನ್ನು ಪರಿಶೀಲಿಸಲು ಜಿಲ್ಲಾಧಿಕಾರಿಗಳು ಸುರತ್ಕಲ್ ಎಂಜಿನಿಯರಿಂಗ್ ಕಾಲೇಜಿನ ಮುಖ್ಯಸ್ಥರಿಗೆ ಅನುಮತಿ ನೀಡಿದ್ದರು. ದೋಷವಿದೆ ಎಂದು ಕಾಲೇಜು ವರದಿ ನೀಡಿದೆ. ಆದರೂ ಸಹ ಈ ಮೀಟರನ್ನೇ ಹೇರುವುದೇಕೆ?

ಮೀಟರ್ ಸಂಸ್ಥೆಗಳ ಹಣ ತಿಂದ ಸರ್ಕಾರ ಕೆಟ್ಟ ಮೀಟರ್‌ಗಳನ್ನು ಬಡ ಚಾಲಕರ ಮೇಲೆ ಹೇರುತ್ತಿದೆ ಎಂದು ನೇರವಾಗಿ ಆರೋಪಿಸಿದರು.

ಆಟೋ ಚಾಲಕರು ಮೀಟರ್ ವಿರೋಧಿಗಳೇ?

'ಐಕ್ಯರಂಗ' ವಿಶೇಷ ವರದಿ

"ಖಂಡಿತಾ ಅಲ್ಲ" ಎನ್ನುತ್ತದೆ ಆಟೋರಿಕ್ಷಾ ಚಾಲಕರ ಸಂಘ. ಮೀಟರ್ ಸಾರ್ವಜನಿಕರಿಗೂ ಬೇಕು ಹಾಗೆಯೇ ಚಾಲಕರಿಗೂ ಬೇಕು. ನಾವು ಮೀಟರ್ ಅಳವಡಿಸುವುದನ್ನು ಎಂದು ವಿರೋಧಿಸಿಲ್ಲ. ನ್ಯಾಯ ದರ ತೋರಿಸುವ ಮೀಟರ್ ನಮಗೆ ಕೊಡಿ. ಖಂಡಿತಾ ಒಪ್ಪುತ್ತೇವೆ. ಆದರೆ ಕೆಲಸಕ್ಕೆ ಬಾರದ, ಅಸ್ಪಷ್ಟ ದರ ತೋರಿಸುವ, ಬಾಳಿಕೆ ಬರದ ಮೀಟರ್‌ಗೆ ನಮ್ಮ ವಿರೋಧ ಖಂಡಿತಾ ಇದೆ ಎನ್ನುತ್ತಾರೆ. ದಕ್ಷಿಣ ಕನ್ನಡ ಜಿಲ್ಲಾ ಆಟೋ ಚಾಲಕರ ಸಂಘ(ಸಿಐಟಿಯು) ಪ್ರಧಾನ ಕಾರ್ಯದರ್ಶಿ ಸುಧನ್ ಕುಮಾರ್ ಉರ್ವಾ

ಫ್ಲಾಗ್ ಮೀಟರ್ ಮತ್ತು ಯಾಂಕಿ ಮೀಟರ್‌ಗಳ ನಡುವೆ ಇರುವ ವ್ಯತ್ಯಾಸಗಳ ಬೃಹತ್ ಪಟ್ಟಿಯನ್ನೇ ಚಾಲಕರ ಸಂಘ ಮುಂದಿಡುತ್ತದೆ.

ಆಟೋಗಳಲ್ಲಿ ಈ ಮೊದಲು ಯಾಂಕಿ ಮೀಟರ್‌ಗಳನ್ನು ಅಳವಡಿಸಲಾಗುತ್ತಿತ್ತು. 40 ವರ್ಷದಿಂದಲೂ ಯಾಂಕಿ ಮೀಟರ್ ತನ್ನ ಸಾಮರ್ಥ್ಯವನ್ನು ಸಾಬೀತುಪಡಿಸುತ್ತಾ ಬಂದಿದೆ. ಹೀಗಿರುವಾಗ ಫ್ಲಾಗ್ ಮೀಟರ್ ಹೇರುವ ಆತುರ ಏಕೆ?

ಫ್ಲಾಗ್ ಮೀಟರ್ ಬೆಲೆ ವಿಪರೀತ ದುಬಾರಿ (1700 ರೂ.) ಇನ್ನು ರಿಪೇರಿಗೆ ಬಂದರಂತೂ ಯಾಂಕಿ ಮೀಟರ್ ರಿಪೇರಿಗಿಂತ ಎಳೆಂಟು ಪಾಲು ಹೆಚ್ಚು (ಯಾಂಕಿ ಮೀಟರ್ ರಿಪೇರಿ ಹತ್ತು ರೂ ಒಳಗೆ ಆದರೆ ಫ್ಲಾಗ್ ಮೀಟರ್ ರಿಪೇರಿಗೆ 75 ರೂ ಗಿಂತ ಹೆಚ್ಚು ತಗಲುತ್ತದೆ).

ಫ್ಲಾಗ್ ಮೀಟರ್ ಕೆಟ್ಟರೆ ಅದರ ದುರಸ್ತಿಗೆ ಮೀಟರ್ ಅಧಿಕಾರಿಯ ಬಳಿ ಬರಬೇಕು. ಈ ಅಧಿಕಾರಿಯಿಂದಲೇ ದುರಸ್ತಿ ನಡೆಸಿ, ರಿಕ್ಷಾಗಳಿಗೆ ಹಾಕಿಸಿ ಸೀಲ್ ಮಾಡಿಸಬೇಕು. ರಿಪೇರಿಗೆ 140 ತಗುಲಿದರೆ ರಿಪೇರಿಗಾಗಿ ಬರುವಾಗ ತಪಾಸಣೆ ಅಧಿಕಾರಿಗಳು ಹಿಡಿದರೆ ದಂಡ ಸಾವಿರ ರೂ.

ಭಿನ್ನ ಜಿಲ್ಲೆ

ದಕ್ಷಿಣ ಕನ್ನಡಕ್ಕೂ ಫ್ಲಾಗ್ ಮೀಟರ್‌ಗೂ ಎಣ್ಣೆ-ಸೀಗೆಕಾಯಿ ನಂಟು. ರಾಜ್ಯದ ಎಲ್ಲಾ ಕಡೆ ಬಜಾಜ್ ಆಟೋರಿಕ್ಷಾ ಚಲಾವಣೆಯಲ್ಲಿದ್ದರೆ ದಕ್ಷಿಣ ಕನ್ನಡದಲ್ಲಿ ಲ್ಯಾಂಬ್ರೆಟಾ ರಿಕ್ಷಾಗಳು. ಲ್ಯಾಂಬ್ರೆಟ್ ರಿಕ್ಷಾಗೆ ಫ್ಲಾಗ್ ಮೀಟರ್ ಹೊಂದಿಕೆಯಾಗುವುದಿಲ್ಲ.

ಫ್ಲಾಗ್ ಮೀಟರ್ ಈ ರಿಕ್ಷಾಗಳಿಗೆ ಅಳವಡಿಸಿದರೆ ಕನಿಷ್ಠ 100 ಎಂ.ಎಲ್. ಎಣ್ಣೆ ಎಂಜಿನ್‌ನಿಂದ ಸೋರಿಹೋಗುತ್ತದೆ.

ದಕ್ಷಿಣ ಕನ್ನಡ ಜಿಲ್ಲೆಯ ರಸ್ತೆ ಓಡಾಡಿಯೇ ಅನುಭವಿಸಬೇಕು. ಆಟೋ ಫ್ಲಾಗ್ ಮೀಟರ್ ಇಲ್ಲಿ ಪದೇ ಪದೇ ಜಂಪ್ ಆಗುತ್ತದೆ. ಮತ್ತೆ ರಿಪೇರಿಗೆ, ಒಂದು ಮೀಟರ್ ಹೆಚ್ಚು ದರ ತೋರಿದರೆ ಮತ್ತೊಂದು ಜೋಲು ಮುಖ ಹೊತ್ತು ಮುಂದೆಯೇ ಸಾಗುವುದಿಲ್ಲ.

ಕಣ್ಣಿಗೆ ಸುಣ್ಣ

ಜಿಲ್ಲಾಧಿಕಾರಿಗಳದ್ದಂತೂ ಒಂದು ಕಣ್ಣಿಗೆ ಬೆಣ್ಣೆ ಒಂದು ಕಣ್ಣಿಗೆ ಸುಣ್ಣ ಹಚ್ಚುವ ನೀತಿ. ಬಸ್ ಮಾಲೀಕರು ಪುಸಲಾಯಿಸಿದರೆ ಪ್ರತಿ ವರ್ಷ ಬಸ್ ಪ್ರಯಾಣ ದರ ಏರುತ್ತದೆ. ಆಟೋಗಳ ಪರಿಸ್ಥಿತಿ ಹಾಗಲ್ಲ. ಎಷ್ಟೇ ಬೆಲೆ ಏರಿದರೂ ದರ ಪರಿಷ್ಕರಣೆಗೆ ಮಾತ್ರ ಐದಾರು ವರ್ಷ ಕಾಯಬೇಕು. ಬಸ್‌ಗಳಿಗೆ ದಕ್ಷಿಣ ಕನ್ನಡ ಜಿಲ್ಲೆಗೆಂದೇ ವಿಶೇಷ ನೀತಿ ರೂಪಿಸುವ ಜಿಲ್ಲಾಧಿಕಾರಿಗಳು ಆಟೋಗಳು ಮಾತ್ರ ಬೆಂಗಳೂರಿನ ಹವಾನಿಯಂತ್ರಿತ ಕೊಠಡಿಯಿಂದ ಹೊರಬೀಳುವ ದ.ಕ. ರಸ್ತೆ ರುಚಿಗೊತ್ತಿಲ್ಲದ ಆದೇಶಕ್ಕೆ ತಲೆಬಾಗಬೇಕು ಎನ್ನುತ್ತಾರೆ. ಏರುತಗ್ಗಿನ ದ.ಕ. ರಸ್ತೆಯಲ್ಲಿ ರಿಕ್ಷಾ ಎಷ್ಟು ಪೆಟ್ರೋಲ್ ಕುಡಿಯುತ್ತದೆ ಎಂಬುದೂ ಅವರಿಗೆ ಗೊತ್ತಿಲ್ಲ.

ಯಾಕೇ ಈ ಪ್ರೀತಿ?

ಅದೆಲ್ಲಾ ಇರಲಿ, ಈ ಸರ್ಕಾರಿ ಅಧಿಕಾರಿಗಳಿಗೆ ಫ್ಲಾಗ್ ಮೀಟರ್ ಮೇಲೆ ಯಾಕೆ ಇಷ್ಟೊಂದು ಪ್ರೀತಿ? ಬೆಕ್ಕು ಕಣ್ಣು ಮುಚ್ಚಿ ಹಾಲು ಕುಡಿಯುತ್ತಿದೆ.

ಯಾಕೆ ಕಾಮ್ರೆಡ್? ಎಂದು ಸಿಐಟಿಯು ದ.ಕ. ಜಿಲ್ಲಾ ಕಾರ್ಯದರ್ಶಿ ಉಮೇಶ್ ಭಂಡಾರಿಯವರನ್ನು ಕೇಳಿ, "ಸರ್ಕಾರ ಮೀಟರ್ ಸಂಸ್ಥೆಗಳೊಡನೆ ಒಳಒಪ್ಪಂದ ಮಾಡಿಕೊಂಡಿದೆ. ದುಡ್ಡು ತಿಂದ ಸರ್ಕಾರ ಬಡ ಚಾಲಕರ ಹೊಟ್ಟೆಯ ಮೇಲೆ ಬಡಿಯುತ್ತಿದೆ" ಎಂದು ಖಡಕ್ಕಾಗಿ ಉತ್ತರಿಸುತ್ತಾರೆ.

ಶಂಕರಾಚಾರ್ಯಗಳ ಸಮಾವೇಶ

ಬೆಂಕಿಯೊಡನೆ ನರಸಿಂಹರಾಯರ ಆಟ

-- ಕಾಂ. ಪ್ರಕಾಶ್ ಕಾರತ್

ಧರ್ಮ ಮತ್ತು ಪ್ರಭುತ್ವವನ್ನು ಅಥವಾ ರಾಜಕೀಯವನ್ನು ಬೇರ್ಪಡಿಸುವ ಪ್ರಯತ್ನದಲ್ಲಿ ಮತ್ತೊಂದು ದೊಡ್ಡ ಅಡಚಣೆ ಬಂದಿದೆ. ನಾಲ್ಕು ಶಂಕರಾಚಾರ್ಯರುಗಳು ಅಯೋಧ್ಯೆಯಲ್ಲಿ ರಾಮದೇವಸ್ಥಾನ ಕಟ್ಟುವುದು ಹೇಗೆ ಎಂಬ ಬಗ್ಗೆ ತಮ್ಮ ದೇ ಸಲಹೆಯೊಂದಿಗೆ ಈ ವಿವಾದದಲ್ಲಿ ತಲೆಹಾಕಿದ್ದಾರೆ. ಇದು ಪ್ರಧಾನಮಂತ್ರಿಗಳ ಆಶ್ರಯದಲ್ಲೇ ನಡೆದಿದೆಯೆಂಬುದು ಇನ್ನಷ್ಟು ಅಪಾಯಕಾರಿ ಅಂಶ. ಕಾಂಗ್ರೆಸ್(ಐ) ಸ್ವತಃ ಸರಕಾರದ ಆಳ್ವಿಕೆಯಲ್ಲಿ ಧಾರ್ಮಿಕ ವ್ಯಕ್ತಿಗಳು ಮೂಗುತೂರುವಂತೆ ಹೇಗೆ ಕುಮ್ಮಕ್ಕು ನೀಡುತ್ತಿದ್ದಾರೆ, ಈ ಮೂಲಕ ಆಳ್ವಿಕೆಯ ಜಾತ್ಯಾತೀತ ಸ್ವರೂಪವನ್ನೇ ಬುಡಮೇಲು ಮಾಡುತ್ತಿದ್ದಾರೆ ಎಂಬುದಕ್ಕೊಂದು ಒಳ್ಳೆಯ ಉದಾಹರಣೆಯಿದು.

'ಒಂದು ಭವ್ಯ ರಾಮದೇವಸ್ಥಾನವನ್ನು ಅಯೋಧ್ಯೆಯಲ್ಲಿ ರಾಮಜನ್ಮಸ್ಥಾನದಲ್ಲಿ ಕಟ್ಟಲೇಬೇಕು' ಎಂಬ ಶಂಕರಾಚಾರ್ಯರುಗಳ ನಿಲುವು ವಿ.ಹೆಚ್.ಪಿ.ಯಂತೆಯೇ ಇದೆ. ಕೇಂದ್ರ ಸರಕಾರ ವಹಿಸಿಕೊಂಡ ಪ್ರದೇಶವನ್ನು 'ರಾಜಕೀಯವಲ್ಲ ಧಾರ್ಮಿಕ ಸಂಸ್ಥೆ'ಗೆ ನೀಡಬೇಕು ಎಂಬಲ್ಲಿ ಮಾತ್ರ ಅವರ ನಿಲವು ವಿ.ಹೆಚ್.ಪಿ.ಗಿಂತ ಭಿನ್ನವಾಗಿದೆ.

ಆದರೆ ಶಂಕರಾಚಾರ್ಯರುಗಳ ನಿಲುವು ಮೊದಲ ನೋಟಕ್ಕೆ ಪ್ರಧಾನ ಮಂತ್ರಿಗಳ ನಿಲುವಿಗೆ ಅನುಗುಣವಾಗಿರುವಂತೆ ಕಾಣುತ್ತದೆ. ಪ್ರಧಾನಮಂತ್ರಿಯವರೇ ಡಿಸೆಂಬರ್ 1992 ರಲ್ಲಿ 'ಅಯೋಧ್ಯಾ ಸಮಸ್ಯೆಗೆ ಪರಿಹಾರ' ಎಂದು ಸೂಚಿಸಿದ್ದರಲ್ಲಿ ದೇವಸ್ಥಾನ ಕಟ್ಟಲು ಟ್ರಸ್ಟ್ ರಚಿಸುವುದಾಗಿ ಹೇಳಿರುವುದು ಶಂಕರಾಚಾರ್ಯರ ನಿಲುವಿನ ಎರಡನೇ ಅಂಶದಂತೆಯೇ ಇದೆ. ನಿಜಸಂಗತಿಯೆಂದರೆ

> ಬಾಬ್ರಿಮಸೀದಿ ಇದ್ದಲ್ಲೇ ರಾಮದೇವಸ್ಥಾನ ಕಟ್ಟಿಸಿ ಹಿಂದೂ ಜನಸಮೂಹಗಳ ಎದುರು ತಾವೇ ಅದರ ಕೀರ್ತಿ ಗಿಟ್ಟಿಸುವುದು ನರಸಿಂಹರಾಯರ ನಿಲುವು ಎಂಬುದು ಸ್ಪಷ್ಟವಾಗುತ್ತಿದೆ. ಆದರೆ ಇದೊಂದು ಅತ್ಯಂತ ಅಪಾಯಕಾರಿ ಪ್ರಮಾದವಾಗುತ್ತದೆ.

ಕಾಂಗ್ರೆಸ್(ಐ) ವಕ್ತಾರ ಚಂದೂಲಾಲ್ ಚಂದ್ರಾಕರ್ ಶಂಕರಾಚಾರ್ಯರುಗಳ ನಿಲುವು "ಕಾಂಗ್ರೆಸ್(ಐ) ಯೋಚನಾ ದಿಕ್ಕಿನಲ್ಲೇ ಇದೆ" ಎಂದಿದ್ದಾರೆ.

ನರಸಿಂಹರಾಯರು ತಮ್ಮ "ಪರಿಹಾರ"ದ ಭಾಗವಾಗಿ ಸುಪ್ರಿಂಕೋರ್ಟ್‌ನ 143 ನೇ ಕಲಮಿನ ಪ್ರಕಾರ ನೀಡಬಹುದಾದ ಅಭಿಪ್ರಾಯವನ್ನು ಕಾದು ಕೂತಿದ್ದಾರೆ. ಮತ್ತೆ- ಮತ್ತೆ ದೇವಸ್ಥಾನ ಕಟ್ಟುವ ಮಾತನ್ನಾಡುತ್ತಿದ್ದಾರೆ. ತನ್ನ ಈ 'ಪರಿಹಾರ' ಸೂತ್ರಗಳನ್ನು ಪ್ರಕಟಿಸಿದಂದಿನಿಂದ ಅವರು ಹಲವು ಹಿಂದೂ ಧಾರ್ಮಿಕ ಮುಖಂಡರನ್ನು ಒಲಿಸಿಕೊಳ್ಳುವ ಪ್ರಯತ್ನ ನಡೆಸಿಯೇ ನಡೆಸಿದ್ದಾರೆ. ನೇರಮಾತಿನಲ್ಲಿ ಹೇಳಬೇಕಾದರೆ ಬಾಬ್ರಿಮಸೀದಿ ಇದ್ದಲ್ಲೇ ರಾಮದೇವಸ್ಥಾನ ಕಟ್ಟಿಸಿ ಹಿಂದೂ ಜನಸಮೂಹಗಳ ಎದುರು ತಾವೇ ಅದರ ಕೀರ್ತಿ ಗಿಟ್ಟಿಸುವುದು ನರಸಿಂಹರಾಯರ ನಿಲುವು ಎಂಬುದು ಸ್ಪಷ್ಟವಾಗುತ್ತಿದೆ. ಆದರೆ ಇದೊಂದು ಅತ್ಯಂತ ಅಪಾಯಕಾರಿ ಪ್ರಮಾದವಾಗುತ್ತದೆ.

ಏಕೆಂದರೆ ಈ ಮೂಲಕ ವಿ.ಹೆಚ್.ಪಿ.ಯ ಕೋಮುವಾದೀ ನಿಲುವಿಗೆ ಒಂದು ಗೌರವದ ಸ್ಥಾನ ನೀಡಿದಂತಾಗುತ್ತದೆ. ಅಷ್ಟೇ ಅಲ್ಲ. ಕಾವಿಪಡೆಗಳೊಂದಿಗೆ ನರಸಿಂಹರಾಯರ ಈ ಸ್ಪರ್ಧೆಯಲ್ಲಿ ಭಾರತದ ಸಂವಿಧಾನದ ಜಾತ್ಯಾತೀತ ಆಧಾರಕ್ಕೆ ಕೊಡಲಿಯೇಟು ಬೀಳುತ್ತದೆ.

ಶಂಕರಾಚಾರ್ಯರುಗಳ ಶೃಂಗೇರಿ ಸಭೆ ನಡೆಸಲು ನರಸಿಂಹರಾಯರ ವತಿಯಿಂದ ಈ ಬಗ್ಗೆ ಸಾಕಷ್ಟು ನೆಲಹದ ಮಾಡಲಾಗಿತ್ತು. ಮೇ ತಿಂಗಳಲ್ಲಿ ಕಾಂಚೀಪುರಂನ ಹಿರಿಯ ಶಂಕರಾಚಾರ್ಯರ ಶತಮಾನೋತ್ಸವ ಆಚರಣೆಯಲ್ಲಿ ನರಸಿಂಹರಾವ್ ಸ್ವತಃ ಆಗಮಿಸಿದ್ದರು ಎಂಬುದನ್ನು ನೆನಪಿಸಿಕೊಳ್ಳಿ ಅಲ್ಲಿ ಮಠದ ವತಿಯಿಂದ ಸ್ಥಾಪಿಸಬೇಕೆಂದಿರುವ ವೈದಿಕ ಸಂಶೋಧನಾ ಸಂಸ್ಥೆಗೆ 5 ಕೋಟಿ ರೂ.ಗಳ ಉದಾರ ಸರಕಾರೀ ಕೊಡುಗೆಯ ಘೋಷಣೆ ಮಾಡಿದರು. ದೂರದರ್ಶನದಲ್ಲಿ ಶಂಕರಾಚಾರ್ಯರ ಶತಮಾನೋತ್ಸವದ ನೇರಪ್ರಸಾರ ನಡೆಯುತ್ತಿದ್ದಾಗ ತೆರೆಯ ಮರೆಯಲ್ಲಿ ಆ ಮಠದ ಕಿರಿಯ ಶಂಕರಾಚಾರ್ಯ ಜಯೇಂದ್ರ

> ಪುರಿಯ ಸ್ವಾಮಿ ನಿಶ್ಚಲಾನಂದ ಶೃಂಗೇರಿಯ ಸಭೆಯಿಂದ ಹಿಂದಿರುಗಿ ಬಂದು ನವದೆಹಲಿಯಲ್ಲಿ ಒಂದು ಪತ್ರಿಕಾ ಸಮ್ಮೇಳನ ನಡೆಸಿದರು. ಅದು ವಿ.ಹೆಚ್.ಪಿ.ಯ ಪತ್ರಿಕಾ ಸಮ್ಮೇಳನ ಜಾಗದಲ್ಲೇ ನಡೆಯಿತೆಂಬುದು ಗಮನಾರ್ಹ.

ಸರಸ್ವತಿಯವರನ್ನು ಸರಕಾರದತ್ತ ಸೆಳೆಯುವ ಪ್ರಯತ್ನವೂ ನಡೆಯುತ್ತಿತ್ತು.

ನಾಲ್ಕು ಶಂಕರಾಚಾರ್ಯರುಗಳನ್ನು ಒಂದೆಡೆ ಸೇರಿಸಿದ್ದು ತಮ್ಮ ಸಾಧನೆ ಎಂದು ಕಾಂಗ್ರೆಸ್(ಐ) ಬೀಗಿಕೊಳ್ಳಬಹುದು. ಆದರೆ ಕಾಂಗ್ರೆಗಳಿಂದ, ಸರ್ಕಾರಕ್ಕಾಗಲೀ ಅಯೋಧ್ಯಾ ವಿವಾದ ಪರಿಹಾರದತ್ತ ಸಾಗಲು ಇದರಿಂದ ತುಸುವಾದರೂ ಪ್ರಯೋಜನವಾಗಿದೆಯೇ? ಬದಲಿಗೆ, ಪ್ರಧಾನಮಂತ್ರಿಗಳು ಮತ್ತು ಸರಕಾರ ಧಾರ್ಮಿಕ ವ್ಯಕ್ತಿಗಳ ಅಭಿಪ್ರಾಯಕ್ಕೆ ಶರಣಾಗುವ ಸ್ಥಿತಿ ಏರ್ಪಡುತ್ತಿದೆ.

> ಈಗ ಶಂಕರಾಚಾರ್ಯಗಳ ಸಮಾ[...]ವಳಿ ಸಾಲದೆನ್ನುವಂತೆ ಈ ಕಣಕ್ಕೆ ಶಂ[...] ಕಾಡಿ ತಂದಿದ್ದಾರೆ. ಧರ್ಮ ಗುರುಗಳ[...] ಕೊನೆಗೆ ಬಿಜೆಪಿಗೇ ಪ್ರಯೋಜನ ದೇ[...]
>
> ಇಂತಹ ಅಪಾಯಕಾರಿ ಆಟ[...] ಕೀರ್ತಿಯನ್ನು ಬಿ.ಜೆ.ಪಿ.ಯಿಂದ ಕದಿ[...] ವಿಯಿಂದ ವಿಮೋಚನೆ ಮಾಡುವವ[...] ಎಂದಿದ್ದಾರೆ ಪ್ರಕಾಶ್ ಕಾರತ್.

ಜಯೇಂದ್ರ ಸರಸ್ವತಿಯವರು ವಿ.ಹೆಚ್[...] ಬೆಂಬಲ ನೀಡಿರುವುದು ಎಲ್ಲರಿಗೂ ತಿಳಿದಿ[...] ಸಂಗತಿ. ತಮಿಳುನಾಡಿನಲ್ಲಿ 'ರಾಮಜನ್ಮಭೂಮಿ ನ[...] ಮಂಚ್'ನ ಕಾರ್ಯಕ್ರಮದಲ್ಲಿ ಅವರ ಭಾಗವಹಿಸಿ[...] ಈಗ ರಾವ್ ಸರಕಾರದ ಬಗ್ಗೆ ಅವರು ವಿರೋಧ[...]ಯಾಗಿದ್ದರೆ ಅದಕ್ಕೆ ಕಾಂಚೀಪುರ ಮಠದಲ್ಲಿ ನರಸಿಂ[...]ಯರ ಉದಾರ ಕೊಡುಗೆಯೂ ಕಾರಣವಾಗಿರಬಹು[...] ಇನ್ನು ದ್ವಾರಕೆಯ ಶಂಕರಾಚಾರ್ಯ ಸ್ವಾಮಿ ಸ್ವರೂಪಾ[...]ದರಂತೂ ಸರಕಾರ ಬಯಸಿದಂತೆ ಸಾಧು ಸಮ್ಮೇ[...] ನಡೆಸಿದರು.

ಶಂಕರಾಚಾರ್ಯರುಗಳ ಈ ಮಧ್ಯ ಪ್ರ[...] ಕೊನೆಗೂ ವಿ.ಹೆಚ್.ಪಿ. ಹಾಗೂ ಅದರ ರಾ[...]ನ್ಮಭೂಮಿ ನ್ಯಾಸ್ ಪರವಾಗಿಯೇ ತಿರುಗುತ್ತಿದೆ ಎ[...]ದನ್ನು ಸೂಚಿಸುವ ಇನ್ನೊಂದು ಸಂಗತಿಯೂ [...] ಇನ್ನೊಬ್ಬ ಶಂಕರಾಚಾರ್ಯರಾದ ಪುರಿಯ [...]ಲಾನಂದ ಶೃಂಗೇರಿಯ ಸಭೆಯಿಂದ ಹಿಂದಿರುಗಿ ಬ[...] ನವದೆಹಲಿಯಲ್ಲಿ ಒಂದು ಪತ್ರಿಕಾ ಸಮ್ಮೇಳನ್ನು ನ[...]ದರು. ಅದು ವಿ.ಹೆಚ್.ಪಿ. ಯ ಪತ್ರಿಕಾ ಸಮ್ಮೇ[...] ಜಾಗದಲ್ಲೇ ನಡೆಯಿತೆಂಬುದು ಗಮನಾರ್ಹ. [...] ದೇವಸ್ಥಾನ ಕಟ್ಟುವ ಕಾರ್ಯನಡೆಸುವ ರಾಜಕೀಯ[...]



ಪಶ್ಚಿಮಬಂಗಾಳ ಪಂಚಾಯತು ಚುನಾವಣೆ

ಇಡೀ ದೇಶಕ್ಕೆ ಒಂದು ಪಾಠ

"ಹಿಂದೂ" ಪತ್ರಿಕೆಯಲ್ಲಿ ಸಮಾಜವಿಜ್ಞಾನಿ

"ಇತ್ತೀಚೆಗೆ ನಡೆದ ಪಶ್ಚಿಮಬಂಗಾಲ ಪಂಚಾಯತು ಚುನಾವಣೆಗಳು ಜ್ಯೋತಿಬಸುರವರ 16 ವರ್ಷದ ದೀರ್ಘ ಆಡಳಿತದ ಮುಕುಟದಲ್ಲಿನ ಇನ್ನೊಂದು ಮಣಿಯಷ್ಟೇ ಅಲ್ಲ ರಾಜ್ಯ ಸರಕಾರಗಳು ಬುಡಮಟ್ಟದ ಪ್ರಜಾಪ್ರಭುತ್ವ ನೀತಿಗೆ ಬದ್ಧರಾಗಿ ಗ್ರಾಮಪಂಚಾಯತುಗಳನ್ನು ಸ್ವಯಂ ಮಾಡಳಿತದ ಘಟಕಗಳು ಎಂದು ಕಂಡರೆ ಯಾವ ರೀತಿಯ ಗ್ರಾಮೀಣ, ಸಾಮಾಜಿಕ ಪರಿವರ್ತನೆ ತರಲು ಸಾಧ್ಯ ಎಂಬುದಕ್ಕೆ ಇಡೀ ದೇಶಕ್ಕೆ ಒಂದು ಪಾಠ".

-- ಇದು ನವದೆಹಲಿಯ ಸಾಮಾಜಿಕ ವಿಜ್ಞಾನಗಳ ಸಂಸ್ಥೆಯ ನಿರ್ದೇಶಕ ಜಾರ್ಜ್ ಮ್ಯಾಥ್ಯೂರವರ ಸ್ಪಷ್ಟ ಅಭಿಪ್ರಾಯ.

'ಹಿಂದೂ' ಇಂಗ್ಲೀಷ್ ದೈನಿಕದ ಸಂಪಾದಕೀಯ ಪುಟದಲ್ಲಿ ಜುಲೈ 1 ಹಾಗೂ 2 ರಂದು ಪ್ರಕಟವಾದ ಮ್ಯಾಥ್ಯೂರವರ ಲೇಖನ ಹೇಗೆ ಬಂಗಾಳದ ಗ್ರಾಮಾಂತರದಲ್ಲಿ ಗ್ರಾಮ ಮಟ್ಟದ ಚುನಾವಣೆಗಳು ಜೀವನದ ಅಂಗವೇ ಆಗಿಬಿಟ್ಟವೆಎಂಬ ಎಲ್ಲಾ ರಂಗಗಳಲ್ಲಿ ಮುಖ್ಯವಾಗಿ ಕೃಷಿರಂಗದಲ್ಲಿ ರಾಜ್ಯದ ಪ್ರಗತಿಯಲ್ಲಿ ಪಂಚಾಯತೀ ಸಂಸ್ಥೆಗಳು ವಹಿಸಿದ ನಿರ್ಣಾಯಕ ಪಾತ್ರದತ್ತ ಬೊಟ್ಟು ಮಾಡಿ ತೋರಿಸಿದೆ. ಮ್ಯಾಥ್ಯೂರವರು ಆಗ ಪಶ್ಚಿಮಬಂಗಾಳಕ್ಕೆ ಭೇಟಿ ನೀಡಿದ್ದ ಚೀಣೀ ನಿಯೋಗದ ಜೊತೆಗೆ ಚುನಾವಣೆಯ ಕಾಲದಲ್ಲಿ ಪಶ್ಚಿಮಬಂಗಾಳದಲ್ಲಿ ವ್ಯಾಪಕ ಪ್ರವಾಸ ನಡೆಸಿದ್ದರು. ಅವರು ತಮ್ಮ ಲೇಖನದಲ್ಲಿ ಪಂಚಾಯತು ಸಂಸ್ಥೆಗಳು ಮತ್ತು ಅಧಿಕಾರಶಾಹಿಯ ನಡುವಿನ ಯುದ್ಧಗಳ ಮೇಲೂ, ಈ ಸಂಸ್ಥೆಗಳ ಮುಂದಿರುವ ಸವಾಲುಗಳ ಮೇಲೂ ಬೆಳಕು ಚೆಲ್ಲಿದ್ದಾರೆ.

"ಪ್ರಜಾಪ್ರಭುತ್ವ ಬೇರು ಬಿಟ್ಟಾಗ......."

ಪಶ್ಚಿಮಬಂಗಾಳದಲ್ಲಿ ಪಂಚಾಯತ್ ಚುನಾವಣೆಗಳು ನಡೆಯುತ್ತಿದ್ದಾಗಲೇ ಕಂಬೋಡಿಯಾದಲ್ಲೂ ವಿಶ್ವಸಂಸ್ಥೆ, ಉಸ್ತುವಾರಿಯಲ್ಲಿ ಚುನಾವಣೆಗಳು ನಡೆದವು. ಇವೆರಡನ್ನು ಹೋಲಿಸುತ್ತಾ ಮಾಡೂ[...] ಬಂಗಾಳದ ಚುನಾವಣೆಗಳು ಸುಸೂತ್ರವಾಗಿ ಯಾವುದೇ ಅಡೆ-ತಡೆಗಳಿಲ್ಲದೆ ನಡೆದವು ಎಂದಿದ್ದಾರೆ. ಕಂಬೋಡಿಯಾದ ಚುನಾವಣೆಗಳಿಗೆ ಹೋಲಿಸಿದರೆ ಪಶ್ಚಿಮ ಬಂಗಾಳದ ಚುನಾವಣೆಯ ಪ್ರಮಾಣ ಬಹಳ ದೊಡ್ಡದು. ಕಂಬೋಡಿಯಾದಲ್ಲಿ 47 ಲಕ್ಷ ಮತದಾರರಿಗೆ ಮತದಾನ ಮಾಡಲು ಏಳು ದಿನಗಳು ಬೇಕಾದವು. ತಗುಲಿದ ಒಟ್ಟು ಖರ್ಚು 4 ಕೋಟಿ ಡಾಲರು ಅಂದರೆ ಸುಮಾರು 120 ಕೋಟಿ ರೂಪಾಯಿಗಳು. ಆದರೆ ಪಶ್ಚಿಮಬಂಗಾಳದಲ್ಲಿ 3 ಕೋಟಿ ಮತದಾರರು 71119 ಸದಸ್ಯರನ್ನು ಆರಿಸಿದರು. ಇದಕ್ಕೆ 37677 ಮತದಾನ ಕೇಂದ್ರಗಳಲ್ಲಿ ಒಂದೇ ದಿನದಲ್ಲಿ ಮತದಾನ ಮುಗಿಯಿತು. ತಗಲಿದ ಒಟ್ಟು ಖರ್ಚು 18 ಕೋಟಿ ರೂಪಾಯಿ.

ಯಾವುದೇ ಕಂಪ್ಯೂಟರ್ ಅಥವಾ ಆಧುನಿಕ ಉಪಕರಣಗಳ ನೆರವಿಲ್ಲದೆ ಸಂಪೂರ್ಣವಾಗಿ ತಾತ್ಕಾಲಿಕ ಡ್ಯೂಟಿಯಲ್ಲಿದ್ದ ರಾಜ್ಯ ಸರಕಾರೀ ಸಿಬ್ಬಂದಿಯೇ ಈ ಚುನಾವಣೆಯ ಕಾರ್ಯ ನೆರವೇರಿಸಿತು. ಇದು ಹೇಗೆ ಸಾಧ್ಯವಾಯಿತು ಎಂದು ಪರಿಶೀಲಿಸಿದ ಮ್ಯಾಥ್ಯೂರವರ "ಈ ರಾಜ್ಯ ನಿಯಮಿತವಾಗಿ ಪಂಚಾಯುತು ಚುನಾವಣೆ ನಡೆಸಿರುವ ಒಂದು ಇತಿಹಾಸವನ್ನೇ ಹೊಂದಿರುವುದರಿಂದಲೇ ಇದು ಸಾಧ್ಯವಾಯಿತು ಎಂದಿದ್ದಾರೆ." "ಗ್ರಾಮಮಟ್ಟದಲ್ಲಿ ಪ್ರಜಾಪ್ರಭುತ್ವ ಬೇರು ಬಿಟ್ಟಾಗ ಚುನಾವಣೆಗಳು ಜೀವನದ ಅಂಗವಾಗಿ ಬಿಡುತ್ತವೆ. ಇಂತಹ ಪರಂಪರೆಗಳು ಜನಮಾನಸದಲ್ಲಿ ಆಳವಾಗಿ ನೆಟ್ಟಾಗ ನಿಯಮಗಳ ಪಾಲನೆ ಚೆನ್ನಾಗಿ ನಡೆಯುತ್ತದೆ" ಎನ್ನುತ್ತಾರೆ ಜಾರ್ಜ್ ಮ್ಯಾಥ್ಯೂ.

"ಮುಂದದೃಷ್ಟಿ ರಾಜಕೀಯ"

ಜಂಟಿ ಮಾದರಿ ಮತಪತ್ರ ಮುದ್ರಿಸುವರೆಗೂ ಹೋದ ಬಿಜೆಪಿ, ಕಾಂಗ್ರೆ ಮೈತ್ರಿಯ ಬಗ್ಗೆ ಹೇಳುತ್ತಾ ಮ್ಯಾಥ್ಯೂ "ಇವ[...] ವೈರಿಯ ವೈರಿ ತನ್ನ ಮಿತ್ರ ಎಂಬ ದೃಷ್ಟಿಕೋಣದಿಂದ ಅವರು ವರ್ತಿಸಿದರು. ಕೇರಳದಲ್ಲೂ ಇದೇ ರಾಜಕೀಯ ಮುಂದದೃಷ್ಟಿಯಿಂದ ಇಂತಹ ಮೈತ್ರಿ ಹುಟ್ಟಿಕೊಂಡಿದೆ. ಗ್ರಾಮೀಣ ಪ್ರದೇಶಗಳಲ್ಲಿ ಈ ಎರಡೂ ಪಕ್ಷಗಳು ತಮ್ಮ ಸಂಘಟನಾ ದೌರ್ಬಲ್ಯಗಳಿಂದಾಗಿ ಪರಸ್ಪರ ಅವಲಂಬಿಸಿದರು. ತನ್ನ ಹಿಂದುತ್ವ ತತ್ವಕ್ಕೆ ಪ್ರಯೋಜನಕಾರಿಯಾಗಿರುವ ಸ್ಥಳೀಯ ಪ್ರಶ್ನೆಗಳನ್ನು ಬಿಜೆಪಿ ಬಳಸಿತು ಎಂಬುದು ಸ್ವಯಂವೇದ್ಯ". ಕೆಲವೇ ಪ್ರದೇಶಗಳಲ್ಲಿ ಅಯೋಧ್ಯಾ ಪ್ರಶ್ನೆಯನ್ನು ಬಳಸಿದರೆ ನಿರಾಶ್ರಿತ ಪ್ರಶ್ನೆಯ ಸಂಪೂರ್ಣ ಪ್ರಯೋಜನ ಪಡೆಯಲು ಅದು ಪ್ರಯತ್ನಿಸಿತು" ಎಂದಿದ್ದಾರೆ.

1988 ರ ಚುನಾವಣೆಗಳಿಗೆ ಹೋಲಿಸಿದರೆ ಎಡರಂಗದ ಸ್ಥಾನಬಲದಲ್ಲಿ ತುಸು ಕಮ್ಮಿಯಾಗಿರುವುದನ್ನು ಕೂಡಾ ಗಮನಿಸಿರುವ ಮ್ಯಾಥ್ಯೂರವರು ಇದಕ್ಕೆ ಒಂದು ಮುಖ್ಯ ಕಾರಣ ಎಡರಂಗದ ಪಕ್ಷಗಳಲ್ಲಿ ಐಕ್ಯತೆ ಅಭಾವ ಹಾಗೂ ಕೆಲವೆಡೆ ಕೆಳಮಟ್ಟದಲ್ಲಿ ಭ್ರಷ್ಟಚಾರ, ಸ್ವಜನ ಪಕ್ಷಪಾತದಿಂದಾಗಿ ಎಡರಂಗದ ಬಗ್ಗೆ ಉಂಟಾದ ಬೇಸರವೂ ಕಾರಣ ಎಂದಿದ್ದಾರೆ. ಚುನಾವಣೆಗಳು ಇಂತಹ ಆಪಾದನೆಗಳ ಬಗ್ಗೆ ಚರ್ಚಿಸುವ ಅವಕಾಶ ಕಲ್ಪಿಸುತ್ತದೆ ಎನ್ನುತ್ತಾ *" 15 ವರ್ಷಗಳ ದೀರ್ಘಕಾಲ ಈ ಸ್ಥಳೀಯ ಸ್ವಯಮಾಡಳಿತ ಸಂಸ್ಥೆಗಳಲ್ಲಿ ಅಧಿಕಾರ ನಡೆಸಿದ ಸಿಪಿಐ(ಎಂ) ಇಂತಹ ಸಂದರ್ಭ ಎದುರಿಸಬೇಕಾಗಿ ಬಂದದ್ದು ಸಹಜವೇ ಆದರೂ ಕೇವಲ ಸಣ್ಣಪುಟ್ಟ ಗಾಯಗಳಿಂದಲೇ ಅದು ಪಾರಾಗಿರುವುದೇ ಗ್ರಾಮೀಣ ಜನಸಮೂಹಗಳೊಂದಿಗೆ ಅದು ಹೊಂದಿರುವ ಅನ್ಯೋನ್ಯ ಸಂಬಂಧದ ಬಗ್ಗೆ ಬಹಳಷ್ಟು ಸಾರುತ್ತದೆ"* ಎಂದಿದ್ದಾರೆ ಜಾರ್ಜ್ ಮ್ಯಾಥ್ಯೂ.

ಬಡರೈತರು ಸಾಧಿಸಿದ "ಹಸಿರು ಕ್ರಾಂತಿ"

ಪಂಚಾಯತುಗಳು ಗ್ರಾಮೀಣ ಬೆಳವಣಿಗೆಯಲ್ಲಿ ವಹಿಸಿದ ಪಾತ್ರದ ಬಗ್ಗೆ ಮ್ಯಾಥ್ಯೂ ವಿವರವಾಗಿ ವಿಶ್ಲೇಷಿಸುತ್ತಾರೆ[...]

ಬಿಜೆಪಿಯ ಧರ್ಮ ಸಂಸತ್ ಮಾಡಿರುವಹಾ
ರ್ಯಗಳನ್ನು ನರಸಿಂಹರಾಯರು ಬಹಳ ತಿಣು
ರೀತಿ ಪ್ರಧಾನಿಯವರು ಒಲೈಸುತ್ತಿರುವುದು
ಿಗೂ ಅಲ್ಲ.
ಆಡುತ್ತಾ ತಾವೇ ರಾಮಮಂದಿರ ಎಂಬ
ಯುಸುವ ನರಸಿಂಹರಾಯರನ್ನು ಅವರ ಪದ
ಾರತಕ್ಕೆ ಅನಾಹುತದಿಂದ ವಿಮೋಚನೆಯಿಲ್ಲ

ಸಂಘಟನೆಯೂ ಇರಬಹುದೆಂದು ಅವರು ಈ ಪತ್ರಿಕಾ ಸಮ್ಮೇಳನದಲ್ಲಿ ಸ್ಪಷ್ಟಪಡಿಸಿದರು. ಜಾತಿ ಪದ್ಧತಿಯನ್ನು, ಮಹಿಳಾ ಅಸಮಾನತೆಯನ್ನು ಎತ್ತಿ ಹಿಡಿದ "ಖ್ಯಾತಿ" ಈ ಪುರಿ ಶಂಕರಾಚಾರ್ಯರದ್ದು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬೇಕು.

ಪುರಿ ಶಂಕರಾಚಾರ್ಯರು ಆ ಪತ್ರಿಕಾ ಸಮ್ಮೇಳನದಲ್ಲಿ ಇನ್ನೊಂದು ಸುದ್ದಿ ಪ್ರಕಟಿಸಿದರು. ಶಂಕರಾಚಾರ್ಯರುಗಳ ಮುಂದಿನ ಸಭೆ ಅಕ್ಟೋಬರ್-ನವಂಬರ್ ವೇಳೆಗೆ ಹರಿದ್ವಾರದಲ್ಲಿ ನಡೆಯುವುದಂತೆ. ಇದೂ ಮಹತ್ವಪೂರ್ಣ ಸಂಗತಿ. ಏಕೆಂದರೆ ಅಕ್ಟೋಬರ್ 24 ರೊಳಗೆ ತಾನು ವಹಿಸಿಕೊಂಡ ಪ್ರದೇಶವನ್ನು ಸರಕಾರ ರಾಮಜನ್ಮಭೂಮಿ ನ್ಯಾಸಕ್ಕೆ ಒಪ್ಪಿಸದಿದ್ದರೆ ಮತ್ತೊಂದು 'ಧರ್ಮ-ಸಂಸದ್' ನಡೆಸುವುದಾಗಿ ಈ ವಿ.ಹೆಚ್.ಪಿ.ಯ ನ್ಯಾಸದ 'ಮಾರ್ಗದರ್ಶಕ ಮಂಡಲ' ಬೆದರಿಕೆ ಹಾಕಿದೆ. ವಿ.ಹೆಚ್.ಪಿ.ಯ ಈ 'ಧರ್ಮ-ಸಂಸದ್' ಮತ್ತು ನಾಲ್ಕು ಶಂಕರಾಚಾರ್ಯರುಗಳು ರಾವ್ ಸರಕಾರ ಅಂತಿಮವಾಗಿ ತಲೆಬಾಗುವಂತೆ ಒತ್ತಡ ತರಲು ಏಕಕಾಲದಲ್ಲೇ ಅಥವಾ ಒಟ್ಟಿಗೇ ಕಾರ್ಯಾಚರಣೆಗಿಳಿಯುವ ಸಂಭವ ಬಹಳ ಇದೆ.

> ಈ ವಿ.ಹೆಚ್.ಪಿ.ಯ ನ್ಯಾಸದ 'ಮಾರ್ಗದರ್ಶಕ ಮಂಡಲ' ಬೆದರಿಕೆ ಹಾಕಿದೆ. ವಿ.ಹೆಚ್.ಪಿ.ಯ ಈ 'ಧರ್ಮ-ಸಂಸದ್' ಮತ್ತು ನಾಲ್ಕು ಶಂಕರಾಚಾರ್ಯರುಗಳು ರಾವ್ ಸರಕಾರ ಅಂತಿಮವಾಗಿ ತಲೆಬಾಗುವಂತೆ ಒತ್ತಡ ತರಲು ಏಕಕಾಲದಲ್ಲೇ ಅಥವಾ ಒಟ್ಟಿಗೇ ಕಾರ್ಯಾಚರಣೆಗಿಳಿಯುವ ಸಂಭವ ಬಹಳ ಇದೆ.

ಆದ್ದರಿಂದ ರಾವ್ ಸರಕಾರದ ಶಾಮಿಲಿನಿಂದ ನಡೆದ ಶಂಕರಾಚಾರ್ಯರುಗಳ ಈ ಪ್ರವೇಶ ಆಡಳಿತದ ವಿಷಯಗಳಲ್ಲಿ ಮತೀಯ ಶಕ್ತಿಗಳಿಗೆ ನೀಡಿರುವ ಇನ್ನೊಂದು ಅಪಾಯಕಾರಿ ರಿಯಾಯ್ತಿ. ಈ ಮೂಲಕ ರಾವ್ ಸರಕಾರ ದೇಶದ ಐಕ್ಯತೆ, ಕೋಮು ಸೌಹಾರ್ದತೆಯಂತಹ ಪ್ರಮುಖ ವಿಷಯಗಳಲ್ಲಿ ಸರಕಾರ ಹೊಣೆಯನ್ನೇ ತ್ಯಜಿಸಿದಂತಾಗಿದೆ.

ನರಸಿಂಹರಾಯರು ಡಿಸೆಂಬರ್‌ನಲ್ಲಿ ಘೋಷಿಸಿದ "ಅಯೋಧ್ಯಾ ಪರಿಹಾರ ಕ್ರಮಗಳು' ' ಅಪಾಯಕಾರಿ ಅಂಶಗಳಿಂದ ಕೂಡಿದ ಒಂದು ಕಂತೆ ಎಂದರೆ ಬಹಳ ಜನಕ್ಕೆ ಅದು ಅರಿವಾಗಿರಲಿಲ್ಲ. ಈ ಶಂಕರಾಚಾರ್ಯ ಘಟನೆಯ ನಂತರ ಹಾಗೆ ಹಿಂದೇಟು ಹಾಕುವವರೂ ಕಣ್ಣು ತೆರೆಯಬೇಕಾಗಿ ಬಂದಿದೆ. ನರಸಿಂಹರಾವ್ ಪ್ರಧಾನ ಮಂತ್ರಿಯಾಗಿರುವವರೆಗೂ ಬಿಜೆಪಿ,-ಆರ್.ಎಸ್.ಎಸ್.-ವಿ.ಹೆಚ್.ಪಿ. ಸವಾಲನ್ನು ಕಾಂಗ್ರೆಸ್(ಐ) ಸರಕಾರ ರಾಜಕೀಯವಾಗಿ, ಸೈದ್ಧಾಂತಿಕವಾಗಿ ಅಥವಾ ಆಡಳಿತಾತ್ಮಕವಾಗಿ ಎದುರಿಸಲಾರದು ಎಂಬುದಂತೂ ಈಗ ಬೆಳಕಿನಷ್ಟು ಸ್ಪಷ್ಟ. ದೇಶವನ್ನು ಅನಾಹುತದಿಂದ ಉಳಿಸಬೇಕಾದರೆ ನರಸಿಂಹರಾವ್‌ರನ್ನು ಅಧಿಕಾರಸ್ಥಾನದಿಂದ ಇಳಿಸಿ ಅವರ "ಅಯೋಧ್ಯಾ ಪರಿಹಾರ" ಕ್ರಮಗಳನ್ನು ಸಂಪೂರ್ಣ ತ್ಯಜಿಸಬೇಕು ಆಗ ಸೂತ್ರವೇ ಸಂವಿಧಾನ, ಜಾತ್ಯಾತೀತತೆಯ ರಕ್ಷಣೆಯ ಹೋರಾಟ ಸಾಧ್ಯ.

●

ಹಗಲು ಗನಸಾದ ಮಧ್ಯಮವರ್ಗದ ಕನಸು

-- ಜಿ.ಎಸ್.ಮಣಿ

ಇದು 1993-94 ರ ಬಜೆಟ್‌ನಲ್ಲಿ ನೀಡಿದ ಅಬ್ಕಾರಿ ಸುಂಕ ರಿಯಾಯ್ತಿಯ ಕತೆ. ಕೇಂದ್ರದ ನಾಗರೀಕ ಪೂರೈಕೆಯ ಮಂತ್ರಿ ಎ.ಕೆ. ಆಂಟನಿ ಉದ್ಯಮಿಗಳು ತಮ್ಮ ಗ್ರಾಹಕರಿಗೆ ಈ ರಿಯಾಯ್ತಿಯನ್ನು ದಾಟಿಸಲೇಬೇಕು. ಇಲ್ಲದಿದ್ದರೆ ಉಗ್ರಕ್ರಮ ಕೈಗೊಳ್ಳುತ್ತೇವೆಂದು ಮೆತ್ತಗೆ ಹೇಳಿದ್ದರು.

ಬ್ಯೂರೋ ಆಫ್ ಇಂಡಸ್ಟ್ರಿಯಲ್ ಕಾಸ್ಟ್ ಅಂಡ್ ಪ್ರೈಸಸ್(ಬಿಐಸಿಪಿ) ಈ ರಿಯಾಯ್ತಿಯನ್ನು ದಾಟಿಸಿದಾರೆಯೇ ಎಂಬುದನ್ನು ಅಧ್ಯಯನ ಮಾಡಬೇಕು. ಆದರೆ ಬಿಐಸಿಪಿಯ ಅಧ್ಯಕ್ಷ ವಿ.ಪಿ. ದೇಸಾಯಿಯವರು ನಾವು ಪತ್ರಿಕೆಗಳಲ್ಲಿ ಈ ಬಗ್ಗೆ ವರದಿಗಳನ್ನು ನೋಡಿದ್ದೇವಷ್ಟೆ ಎನ್ನುತ್ತಾರೆ. ಅಂದರೆ ಸರ್ಕಾರ ಬಿಐಸಿಪಿಗೆ ನಿರ್ದೇಶನವನ್ನೇ ಕಳುಹಿಸಿಲ್ಲ. ಸರ್ಕಾರ ರಿಯಾಯ್ತಿಗಳನ್ನು ಉದ್ಯಮಗಳಿಗೆಂದೇ ಕೊಟ್ಟಿರಬೇಕಲ್ಲವೇ?

ಕರುಳ ಕುಡಿಯನ್ನೇ ಮಾರುವ ಕಾಲ : ಬಂದ್ಯೈತಿಂತಾ ಕಾಲ

ಇದು ನಮ್ಮ ಮನೆಬಾಗಿಲಿನಲ್ಲೇ ನಡೆಯುತ್ತಿದೆ. ಮೈಸೂರು ಜಿಲ್ಲೆಯ ಬುಡಕಟ್ಟು ಜನರು (ಗಿರಿಜನ) ತಮ್ಮ ಎಳೆ ಕಂದಮ್ಮಗಳನ್ನು 200 ರಿಂದ 400 ರೂಪಾಯಿಗಳಿಗೆ ಚಿಕ್ಕಮಗಳೂರು, ಶಿವಮೊಗ್ಗಾ, ಕೊಡಗು, ಹಾಸನ, ದಕ್ಷಿಣ ಕನ್ನಡ ಜಿಲ್ಲೆಗಳ ಎಸ್ಟೇಟು ಮಾಲೀಕರುಗಳಿಗೆ ಮಾರುತ್ತಿದ್ದಾರೆ.

ಜೀತ ಪದ್ಧತಿಯನ್ನೇ ತೊಡೆದು ಹಾಕಿದ್ದೇವೆ ಎಂದು ಸರ್ಕಾರ ಹೇಳುತ್ತಿದೆ. ಆದರೆ ಹೊಸ ಆರ್ಥಿಕ ನೀತಿ ತಂದಿರುವ ಬಡತನ, ನಿರುದ್ಯೋಗ ಮನುಷ್ಯರನ್ನು ಮನುಷ್ಯರಂತೆ ಬಾಳಲೂ ಬಿಡದು ಎಂಬುದಕ್ಕೆ ಇದು ನಿದರ್ಶನ. ಕಂದಮ್ಮಗಳೇ ಸರಕು ಎಲ್ಲಿವೆ ನಮ್ಮ ಪ್ರಜಾಪ್ರಭುತ್ವ ಕರುಣಿಸಿದ ಹಕ್ಕುಗಳು?

ಮಿತಿಯೇ ಇಲ್ಲದ ರಿಯಾಯಿತಿಗಳು

ವಿದ್ಯುತ್ ವಲಯಕ್ಕೆ ವಿದೇಶೀ ಹಣ ಹರಿದು ಬರಲು ಇನ್ನೂ ಹೆಚ್ಚಿನ ರಿಯಾಯತಿಗಳನ್ನು ನೀಡಬೇಕಂತೆ. ಈಗಾಗಲೇ ಬಹುರಾಷ್ಟ್ರೀಯ ಕಂಪನಿಗಳು ಲಾಭ ಪಿಪಾಸೆಯ ಯಾವ ಮಟ್ಟಕ್ಕೆ ಇಳಿದಿದ್ದಾರೆಂದು ಓಂದೆ ಓದಿರುವಿರಲ್ಲವೆ? ಈಗ ಇದೇ ವಿಷಯದ ಬಗೆಗೆ ಅಧ್ಯಯನ ನಡೆಸಲು ನಿಯಮಿತವಾದ ಉಪಸಮಿತಿಯ



ಮುಖ್ಯಸ್ಥ ಪ್ರಾ. ಇ. ರೈಹಾರ್ಡ್ ಪ್ರಕಾರ 'ಇನ್ನು ಹೆಚ್ಚಿನ ರಿಯಾಯಿತಿಗಳ ಅವಶ್ಯಕತೆ' ಇದೆಯಂತೆ.

ಅವರ ಪ್ರಕಾರ ರಾಜ್ಯ ವಿದ್ಯುತ್ ನಿಗಮಗಳನ್ನು ಹಣಕಾಸು ಮತ್ತು ಆಡಳಿತಾತ್ಮಕವಾಗಿ ಪುನರೂಪಿಸಬೇಕು. ಅವುಗಳು ಹಣ ಪಾವತಿಸುವ ಬಗ್ಗೆ ಸರ್ಕಾರ ಜಾಮೀನು ನಿಲ್ಲಬೇಕು. ಇನ್ನೂ ಹಲವು ಇಂತಹ ಬೇಡಿಕೆಗಳು.

ಅಂತೂ ಆರ್ಥಿಕದ ನಾಡಿಯೇ ಆದ ವಿದ್ಯುತ್ ವಿದೇಶಿಯರಿಗೆ ಲಾಭದಾಯಕವಾಗಬೇಕು. ಈ ತುಟ್ಟೀ ವಿದ್ಯುತ್ ಬಳಸುವ ಉತ್ಪನ್ನಗಳು ಇನ್ನೆಷ್ಟು ತುಟ್ಟಿಯಾಗುತ್ತವೋ ಊಹಿಸುವುದು ಬಹಳ ಕಷ್ಟ.

ಆಹಾರ ಧಾನ್ಯಗಳ ರಫ್ತು

ಈಗ ಆಹಾರ ಧಾನ್ಯಗಳನ್ನೇ ರಫ್ತು ಮಾಡುವ ದಿನ ದೂರವಿಲ್ಲ. ಕೇಂದ್ರ ಮಂತ್ರಿ ಕಲ್ಪನಾಥ್ ರೈ ಹೇಳುವಂತೆ ದೇಶದ ಜನತೆಗೆ ಆಹಾರದ ಕೊರತೆಯಿಲ್ಲ. ಆದ್ದರಿಂದ ಆಹಾರ ಧಾನ್ಯಗಳು ಮತ್ತು ಸಕ್ಕರೆಯನ್ನು ರಫ್ತು ಮಾಡುವ ನಿರ್ಧಾರವನ್ನು ಸರ್ಕಾರ ಕೈಗೊಂಡಿದೆ.

ದೇಶದೊಳಗೆ ಬೇಕಾದಷ್ಟು ಆಹಾರಧಾನ್ಯ ಉತ್ಪಾದನೆಯಾದರೆ ಅದರಿಂದ ಜನರ ಹೊಟ್ಟೆ ತುಂಬುವುದಿಲ್ಲ. ಅದರ ವಿತರಣೆ ಸರಿಯಾಗಿ ಆಗಬೇಕು. ಹಾಗೆ ವಿತರಣೆಯಾಗಲು ಜನರಿಗೆ ಕೊಳ್ಳುವ ಸಾಮರ್ಥ್ಯ ಬರಬೇಕು. ಈ ಕೊಳ್ಳುವ ಸಾಮರ್ಥ್ಯ ಹಣದಿಂದ ಬರುತ್ತದೆ. ಹಣ ಉದ್ಯೋಗದಿಂದ ಬರುತ್ತದೆ. ಆದರೆ ನಮ್ಮ ಸರ್ಕಾರದ ಧೋರಣೆ ಈ ತೊಂದರೆ ನಮಗೇಕೆ? ಜನರಿಗೆ ಕೊಳ್ಳುವ ಸಾಮರ್ಥ್ಯವಿಲ್ಲದಿದ್ದರೆ ನಾವು ರಫ್ತು ಮಾಡುತ್ತೇವೆ. ಜನ ಉಪವಾಸ ಸತ್ತರೆ ಅದು ಅವರ ಹಣೆಬರಹ. ಹೇಗಿದೆ ಇದು?

●

1990-91 ರ ನಡುವೆ
ಾಲು ಕಮ್ಮಿಯಾಗುತ್ತಿ
ಳದಲ್ಲಿ ಅದು 28.3
ಾರಧಾನ್ಯ ಉತ್ಪಾದನೆ
ಭತ್ತದ ಉತ್ಪಾದನೆ
ರಲ್ಲಿ ಪಶ್ಚಿಮಬಂಗಾಳ
ೆ. ಭತ್ತ ಉತ್ಪಾದನೆ
ದಲ್ಲಿ ಮೊದಲ ಸ್ಥಾನ
ತಿ ಆಲೂಗೆಡ್ಡೆ ಉತ್ಪಾ
ಬೀ[illegible] ಉತ್ಪಾದ
ಭಿವೃದ್ಧಿಯಾಗಿದೆ.

ಳದ ಈ 'ಹಸಿರು
ೈತರನ್ನು ನಿರ್ಣಾಯಕ
ರಿಗೆ ಈ ಸಾಮರ್ಥ್ಯ
ುತುಗಳು 'ಉಳುವವ
ಬ ತತ್ವವನ್ನು ಜಾರಿಗೆ
ಆಪರೇಶನ್ ಬರ್ಗಾ)
ಾತ್ರದಿಂದಾಗಿ" ಎನ್ನು
ಸ್ವಾತಂತ್ರ್ಯಾನಂತರ
ಾರಿ ಪದ್ಧತಿ ರದ್ದಾದ
ಲಕರ ಪ್ರಾಬಲ್ಯವಿದ್ದ
ಲ್ಲಿ ಈ 'ಆಪರೇಶನ್
ಚರಣೆಯ ಮೂಲಕ
ರವರೆಗೆ 12.69 ಲಕ್ಷ
ದ ವಶಕ್ಕೆ ಬಂದದ್ದು.
ಯನ್ನು 20.48 ಲಕ್ಷ
ಚಿದ್ದು, ಈ ಗೇಣಿದಾ
ರಿಜನ- ಗಿರಿಜನರಾಗಿ
ಮಾನ್ಯ ಸಾಧನೆಯಲ್ಲ
ಮ್ಯಾಥ್ಯೂ ಪಂಚಾ
ಗಳ ಅಭ್ಯರ್ಥಿಗಳಲ್ಲಿ
ಬಹಳ ಮಂದಿ ತೀವ್ರ
ರಣೆಯಿಂದ ಪ್ರಯೋ
ಎಂದಿರುವ ಅವರು
ಗತಿಶೀಲ ಪಂಚಾ
ದ್ದರೆ ಈ ಕಾರ್ಯಾ
ುತ್ತಿರಲಿಲ್ಲ, ಪಂಚಾ
ಧ್ಧ ಪ್ರಮಾಣದಲ್ಲಿ
ಯೋಜನೆಗಳನ್ನು ಕೈಗೆತ್ತಿ
ಲ್ಲಿ ಇನ್ನಷ್ಟು ನೆರವು

ಜನತೆಗೇ ಆದ್ಯತೆ

ಪಂಚಾಯತು ಮಟ್ಟದಲ್ಲಿ ಚುನಾಯಿತ ಪ್ರತಿನಿಧಿಗಳು ಹಾಗೂ ಅಧಿಕಾರಶಾಹಿ ನಡುವಿನ ಮುಖಾಮುಖಿ ಒಂದು ನಿರ್ಣಾಯಕ ಅಂಶ ಎನ್ನುತ್ತಾ ಮ್ಯಾಥ್ಯೂರವರು ಹೀಗೆಂದಿದ್ದಾರೆ.

"ಪಶ್ಚಿಮಬಂಗಾಳದಲ್ಲಿ ಜಿಲ್ಲಾ ಮ್ಯಾಜಿಸ್ಟ್ರೇಟರನ್ನು ಕಾರ್ಯಕಾರಿ ಅಧಿಕಾರಿಯಾಗಿ ಜಿಲ್ಲಾ ಪರಿಷತ್ತಿನ ಹತೋಟಿಯೊಳಗೆ ತಂದಾಗ ಅಧಿಕಾರಿ ಶಾಹಿ ಜಿಲ್ಲಾ ಪರಿಷತ್ತು ಮತ್ತು ಅದರ ಅಧ್ಯಕ್ಷರನ್ನು ಹಗುರವಾಗಿ ಕಾಣಲು ಸಾಧ್ಯವಿಲ್ಲ ಎಂಬ ಸಂದೇಶ ನೀಡಲಾಯಿತು." ಅವರು ಅಧಿಕಾರಿಶಾಹಿಯ ನಿಲುವಿನ ಬದಲಾವಣೆಯ ಬಗ್ಗೆ ಒತ್ತುನೀಡುತ್ತಾ ಭೂಹೀನ ರೈತರು ಮತ್ತು ಅಧಿಕಾರಿಗಳು ಜತೆಜತೆಯಾಗಿ ಭಾಗವಹಿಸಿದ್ದ ಹಲವಾರು ಮರುಮಾರ್ಗದರ್ಶನ ಶಿಬಿರಗಳು ಅವರ ನಡುವೆ ನಿಕಟ ಸಂಪರ್ಕ ಬೆಳೆಸಲು ನೆರವಾದವು ಎಂದಿದ್ದಾರೆ. "ಪಶ್ಚಿಮಬಂಗಾಳಧಲ್ಲಿ ಅಧಿಕಾರಿಗಳು ಮತ್ತು ಚುನಾಯಿತ ಪ್ರತಿನಿಧಿಗಳು ತಾವು ಪರಸ್ಪರ ಒಬ್ಬರಿಲ್ಲದೆ ಇನ್ನೊಂದು ಕೆಲಸ ಮಾಡಲು ಸಾಧ್ಯವಿಲ್ಲ ಎಂದು ಅರಿತಿದ್ದಾರೆ. ಆದ್ಯತೆ ಚುನಾಯಿತ ಪ್ರತಿನಿಧಿ

ಪುಟ 7ನೋಡಿ

ಪ.ಬಂಗಾಳದ ಪಂಚಾಯತ್ ಚುನಾವಣೆಯ ಅಂತಿಮ ಪಟ್ಟಿ

ಪಕ್ಷಗಳು	ಗ್ರಾಮ ಪಂಚಾಯತು	ಪಂಚಾಯತ್ ಸಮಿತಿ	ಜಿಲ್ಲಾ ಪರಿಷತ್	ಒಟ್ಟು ಸ್ಥಾನಗಳು
ಸಿಪಿಐ(ಎಂ)	35,456 (59,15)	6324 (67.76)	524 (81.49)	42,036 (59.18)
ಸಿಪಿಐ	789 (1.29)	88 (0.94)	6 (0.93)	883 (1.24)
ಆರ್.ಎಸ್.ಪಿ.	1526 (2.50)	235 (2.50)	14 (2.18)	1775 (2.50)
ಫಾವರ್ಡ್‌ಬ್ಲಾಕ್	1238 (2.03)	166 (1.77)	17 (2.64)	1421 (2.00)
ಎಡರಂಗದ ಸಹಪಕ್ಷಗಳು	93 (0.15)	22 (0.23)	5 (0.78)	120 (0.17)
ಒಟ್ಟು ಎಡರಂಗ	39,111 (64.13)	6835 (72.64)	566 (88.02)	46,517 (65.48)
ಕಾಂಗ್ರೆಸ್(ಐ)	16,325 (26.77)	2145 (22.82)	68 (10.58)	18,539 (26.10)
ಬಿಜೆಪಿ	2,366 (3.88)	124 (1.32)	- -	2,498 (3.51)
ಇತರೆ	3,184 (5.22)	298 (3.17)	9 (1.40)	3,491 (4.91)
ಒಟ್ಟು ಸ್ಥಾನಗಳು	60,986	9,483	643	71,032

ಮನಮೋಹನ ಸಿಂಗರ ಮೇಲೆ ಸಿಡಿದ ಬಾಂಬು

ನೇರ ತೆರಿಗೆಗಳ ಕೇಂದ್ರೀಯ ಮಂಡಳಿಯ ಸದಸ್ಯ ಪಿ.ಕೆ. ಗುಪ್ತಾ ಕೇಂದ್ರ ಸರ್ಕಾರದ ಹಣಕಾಸು ಮಂತ್ರಾಲಯದ ಮೇಲೆ ಬಾಂಬೊಂದನ್ನು ಸಿಡಿಸಿದ್ದಾರೆ. ಗುಪ್ತಾರವರ ಪ್ರಕಾರ ಅವರ ಇಲಾಖೆ ಹರ್ಷದ್ ಮೆಹ್ತನ ಆಸ್ತಿಪಾಸ್ತಿ ತನಿಖೆ ನಡೆಸಲು ದಾಳಿ ನಡೆಸ ಹೋದರೆ ಅದಕ್ಕೆ ಕೇಂದ್ರ ಸರ್ಕಾರದ ಹಣಕಾಸು ಮಂತ್ರಾಲಯವೇ ಅಡ್ಡಬಂತು. ಅಂದಿನ ಕೇಂದ್ರ ಹಣಕಾಸು ಇಲಾಕೆಯ ರಾಜ್ಯ ಸಚಿವ ರಾಮೇಶ್ವರ್ ಠಾಕೂರ್ ಈ ದಾಳಿ ತಡೆಯಲು ಬಹಳ ಪ್ರಯತ್ನಪಟ್ಟರು. ಅಂದಿನ ಅರ್ಥಖಾತೆಯ ಕಾರ್ಯದರ್ಶಿ ಎಸ್. ಗೀತಾಕೃಷ್ಣನ್ ಸಹ ಅಡೆತಡೆ ಒಡ್ಡಿದ್ದರು.

ಹರ್ಷದ್ ಮೆಹ್ತ ಗೀತಾಕೃಷ್ಣನ್ ಮತ್ತು ರಾಮೇಶ್ವರ್ ಠಾಕೂರರನ್ನು ಭೇಟಿ ಆಗಿರುವ ಬಗ್ಗೆ ಪುರಾವೆಗಳಿವೆ ಎಂದಿದ್ದಾರೆ.

ಶೇರು ಹಗರಣದ ತನಿಖೆ ನಡೆಸುತ್ತಿರುವ ಜಂಟಿ ಸಂಸದೀಯ ಸಮಿತಿಯ ಅಧ್ಯಕ್ಷ ರಾಮ್‌ನಿವಾಸ್ ಮಿರ್ಧಾ ಅವರಿಗೆ ಪತ್ರವೊಂದನ್ನು ಬರೆದು ಶ್ರೀ ಗುಪ್ತಾ, ಈ ವಿಷಯವನ್ನು ಬಯಲಿಗೆಳೆದಿದ್ದಾರೆ.

'ಹರ್ಷದ್ ಮೆಹ್ತನ ಮೇಲೆ ವರಮಾನ ತೆರಿಗೆ ದಾಳಿ ಮಾಡಲು ನಾನೇ ನಿರ್ದೇಶನ ನೀಡಿದ್ದೆ ಎಂಬ ಮನಮೋಹನ್ ಸಿಂಗರ ಹೇಳಿಕೆಯನ್ನು ಖಂಡಿಸಿರುವ ಗುಪ್ತಾ ಇದು ಸುಳ್ಳು ಎಂದಿದ್ದಾರೆ. ಬದಲಿಗೆ ತಾವು ತನಿಖೆ ನಡೆಸಲು ಹೊರಟಾಗ ಅಡೆ ತಡೆಗಳನ್ನು ಒಡ್ಡಲಾಯಿತೆಂದಿದ್ದಾರೆ.

ತನಿಖೆಗೆ ಇನ್ನೊಂದು ಆಯಾಮ ಈಗ ದೊರೆತಂತಾಗಿದೆ. ಹಣಕಾಸು ಇಲಾಖೆ ಗುಪ್ತಾರ ಹೇಳಿಕೆಯನ್ನು ಅಲ್ಲಗಳೆದು ಹೇಳಿಕೆ ನೀಡಿದೆ. ಆದರೆ ಸಂಸದೀಯ ಸಮಿತಿ ಈ ವಿಷಯದ ತನಿಖೆ ಮಾಡದೇ ಬಿಡುವಂತಿಲ್ಲ.

ವಿದೇಶೀ ಬ್ಯಾಂಕುಗಳು ಹಗರಣಕ್ಕೆ ಪ್ರೇರೇಪಿಸಿದ ಪಾತ್ರ

ಹಗರಣದ ತನಿಖೆ ನಡೆಸುತ್ತಿರುವ ಸಂಸದೀಯ ಸಮಿತಿಯ ಅಧ್ಯಕ್ಷ ರಾಮ್ ನಿವಾಸ್ ಮಿರ್ಧಾ ಈ ಮಾತನ್ನು ಹೇಳಿದ್ದಾರೆ. ವಿದೇಶೀ ಬ್ಯಾಂಕುಗಳು ಈ ಹಗರಣಕ್ಕೆ ಪ್ರೇರೇಪಣೆಯನ್ನು ಮಾತ್ರ ನೀಡಲಿಲ್ಲ, ಜೊತೆಗೆ ಹಗರಣದ ಪ್ರಾರಂಭವನ್ನು ಅವರು ಮಾಡಿದರು. ಉದಾರೀಕರಣದಿಂದ ದೇಶದ ಹಣಕಾಸು ವ್ಯವಸ್ಥೆಯಲ್ಲಿ ಇನ್ನೂ ಹೆಚ್ಚಿನ ಪಾತ್ರ ಹೊಂದಲಿರುವ ಈ ಬ್ಯಾಂಕುಗಳ ಮೇಲೆ



ಶೇರು ಹಗರಣ

ಹೆಚ್ಚಿನ ಹತೋಟಿ ಇರಬೇಕಾದ ಅವಶ್ಯಕತೆಯ ಬಗ್ಗೆ ಒತ್ತಿ ಹೇಳಿದ್ದಾರೆ.

ಮಿರ್ಧಾ ಹೇಳದೆ ಇರುವ ವಿಷಯ ದೇಶದ ರಾಜಕಾರಣಿಗಳದ್ದು. ಅದರಲ್ಲೂ ಹೆಚ್ಚಾಗಿ ಕಾಂಗ್ರೆಸ್ ರಾಜಕಾರಣಿಗಳದ್ದು. ವಿದೇಶಿ ಬ್ಯಾಂಕುಗಳ ಮತ್ತು ದಲ್ಲಾಳಿಗಳ ಅನುಕೂಲಕ್ಕೆ ತಕ್ಕಂತೆ ನಡೆದುಕೊಂಡು ಈ ರಾಜಕಾರಣಿಗಳು ಹಗರಣಕ್ಕೆ ಪೂರ್ಣವಾಗಿ ಆಶ್ರಯ ನೀಡಿದವರು.


ಅವಧಿ ವಿಸ್ತರಣೆಗೆ ಸಂಸದೀಯ ಸಮಿತಿ

ಹೊಸ ಹೊಸ ವಿಷಯಗಳು ಹೊರಬರುತ್ತಿರುವ ಹಿನ್ನೆಲೆಯಲ್ಲಿ ಸಂಸದೀಯ ಸಮಿತಿಯ ತನಿಖಾ ಕಾರ್ಯ ಹೆಚ್ಚಿದ್ದು ಸಮಿತಿ ಮಳೆಗಾಲದ ಅಧಿವೇಶನದ ಕೊನೆಯವರೆಗೆ ಅವಧಿಯ ವಿಸ್ತರಣೆ ಕೇಳಲಿದೆ. ಈಗಿರುವಂತೆ ಸಮಿತಿ ಮಳೆಗಾಲ ಅಧಿವೇಶನದ ಮೊದಲ ವಾರದಲ್ಲಿ ವರದಿ ಸಲ್ಲಿಸಬೇಕಾಗಿತ್ತು.

ಪ್ರಶ್ನಾವಳಿಗಳ ರವಾನೆ

ಸಂಸದೀಯ ಸಮಿತಿ ಒಂಬತ್ತು ಜನರಿಗೆ ಪ್ರಶ್ನಾವಳಿಗಳನ್ನು ಕಳುಹಿಸಿದೆ. ಆ ಒಂಬತ್ತು ಜನರೆಂದರೆ ಪ್ರಧಾನ ಮಂತ್ರಿಯ ಸಹಾಯಕ ಆರ್.ಕೆ. ಖಾಂಡೇಕರ್, ನೇರ ತೆರಿಗೆಗಳ ಕೇಂದ್ರೀಯ ಮಂಡಳಿಯ ಸದಸ್ಯ ಪಿ.ಕೆ. ಗುಪ್ತಾ, ಸುನೀಲ್ ಮಿತ್ತಲ್, ದಲ್ಬೀರ ಸಿಂಗ್, ಅಶ್ವಿನ್ ಮೆಹ್ತಾ, ಮನಮೋಹನ್ ಶರ್ಮಾ, ಕಮಾಲ್ ಪಾಂಡೆ, ಮೋಹನ್ ಖಾಂಡೇಲ್ವಾಲ್, ಪೌಲ್ ಜೋಸೆಫ್ ಮತ್ತು ಎಂ.ಎಲ್. ಮಯ್ಯ

ಇವರ ಉತ್ತರಗಳನ್ನು ನೋಡಿ ಸಮಿತಿ ಮುಂದಿನ ನಿರ್ಧಾರಗಳನ್ನು ಕೈಗೊಳ್ಳಲಿದೆ.



ಜುಲೈ 9 ರಂದು ಗಣಶಕ್ತಿ ಆಶ್ರಯದಲ್ಲಿ ಪ್ರತಿಭಟನಾ ಸಭೆಯೊಂದು ನಡೆಯಿತು.

ನೀರಿಗೆ ಹಾಹಾಕಾರ

ಈ ಮಧ್ಯೆ ತಮಿಳುನಾಡಿನ ರಾಜಧಾನಿ ಮದ್ರಾಸ್ ನಗರ ಕುಡಿಯುವ ನೀರಿನ ಕೊರತೆಯಿಂದ ತ್ತರಿಸುತ್ತಿದೆ ಎಂದು ವರದಿಯಾಗಿದೆ. ನಾಗರಿಕರನ್ನು ತೀವ್ರವಾಗಿ ಭಾಧಿಸುತ್ತಿರುವ ಈ ಸಮಸ್ಯೆಯನ್ನು ಪರಿಹರಿಸುವಂತೆ ಒತ್ತಾಯಪಡಿಸಿ ದ್ರಾವಿಡ ಮುನ್ನೇತ್ರ ಕಳಗಂ (ಡಿ.ಎಂ.ಕೆ.) ಜುಲೈ 10 ರಂದು

ರನ್ನು ಉರುಳಿಸಲು ನಡೆಯುತ್ತಿರುವ ಕಾರಾಸ್ಥಾನದ ಕಂತೆ.

ಗೋವಾ ಕಾಂಗ್ರೆ ಶಾಸಕರು ಮುಖ್ಯಮಂತ್ರಿಯವರನ್ನು ಉರುಳಿಸುವ ಆಟದಲ್ಲಿ ತುಂಬಾ ಎಕ್ಸ್‌ಪರ್ಟ್ ಆಗಿರುವಂತೆ ಕಾಣುತ್ತದೆ. ಏನೆಲ್ಲಾ ಮಾಡಿ ಕೊನೆಗೂ ರವಿನಾಯಕ್‌ರನ್ನು ಕೆಳಗಿಳಿಸಿದರು. ನಾಯಕ್‌ರ ಉತ್ತಾರಾಧಿಕಾರಿಯಾಗಿ ಡಿಸೋಜಾ ಅಧಿಕಾರಕ್ಕೆ ಬಂದು ಎರಡು ತಿಂಗಳು ಕೂಡಾ ಮುಗಿದಿಲ್ಲ. ಅಷ್ಟರೊಳಗೇ ಅವರ ವಿರುದ್ಧ ಬಂಡಾಯ ಆರಂಭವಾಗಿ ಬಿಟ್ಟಿದೆ. ಅಂದರೆ ಗೋವಾವನ್ನು ಇನ್ನೊಂದು ಕರ್ನಾ

ಗೊಂಡಿರುವ ಪ್ರಮುಖ ಅರ್ಚಕನ ಹೆಸರು ಫಲಹಾರಿ ಸೂರ್ಯವಂಶಿ ದಾಸ್. ದೇವಸ್ಥಾನದಲ್ಲಿ ಅರ್ಚಕರಾಗಿದ್ದರು.

ಕೆಲವುಶಕ್ತಿಗಳು ದೇಶವನ್ನು ಅಸ್ಥಿರಗೊಳಿಸಲು ಹಾಗೂ ಜನರಲ್ಲಿ ದ್ವೇಷವನ್ನು ಹರಡಲು ಯತ್ನಿಸುತ್ತಿವೆ ಎಂಧು ದಾಸ್ ಇಲ್ಲಿಗೆ ನೇಮಕಗೊಳ್ಳುವುದಕ್ಕೆ ಮುಂಚೆ ಅವರು ಅಯೋಧ್ಯೆಯ ರವಿದಾಸ್ ಹೇಳಿರುವುದು ಗಮನಾರ್ಹವಾಗಿದೆ.

ದೇಶದ ಪ್ರಥಮ ಆಟಿಕೆ ಬ್ಯಾಂಕ್

ಕಲ್ಕತ್ತ ಮಹಾನಗರದ ಕೊಳಚೆ ಪ್ರದೇಶಗಳಲ್ಲಿನ ಮಕ್ಕಳು ಗೊಂಬೆಗಳೊಂದಿಗೆ ಆಟವಾಡುವ ಕನಸು ಸಾಕಾರಗೊಂಡಿದೆ. ಪಶ್ಚಿಮಬಂಗಾಳದ ಅಂಗನಾವಾಡಿ ಕಾರ್ಯಕರ್ತೆಯರು ಹಾಗೂ ರಾಜ್ಯ ಸಮಾಜ ಕಲ್ಯಾಣ ಇಲಾಖೆಯ ಸತತ ಪ್ರಯತ್ನಗಳಿಂದಾಗಿ ಪುಟಾಣಿಗಳ ಕಣ್ಣಲ್ಲಿ ಸಂತಸದ ಹೊಳಪು ಮೂಡಿದೆ.

ಹೊಸದಾಗಿ ಸ್ಥಾಪಿಸಲಾದ ಆಟಿಕೆ ಬ್ಯಾಂಕ್‌ಗೆ ಮುಖ್ಯಮಂತ್ರಿ ಜ್ಯೋತಿಬಸು ಜುಲೈ 9 ರಂದು 1,03,000 ಗೊಂಬೆಗಳನ್ನು ಸಮರ್ಪಿಸಿದರು. ಇದರೊಂದಿಗೆ ದೇಶದ ಮೊಟ್ಟ ಮೊದಲ ಆಟಿಕೆ ಬ್ಯಾಂಕ್ ಕಾರ್ಯಾ

ಟರ್ಕಿ ಲೇಖಕರ ಹತ್ಯಾಕಾಂಡ

ಪ. ಬಂಗಾಳದಲ್ಲಿ ತೀವ್ರ ಖಂಡನೆ

ಪಶ್ಚಿಮಬಂಗಾಳದಲ್ಲಿ ಕಾಡ್ಗಿಚ್ಚಿನಂತೆ ಹರಡಿದ್ದು ಬುದ್ಧಿಜೀವಿ ಹಾಗೂ ಪ್ರಗತಿಪರ ಚಳವಳಿ ಮಧ್ಯೆ ಆಕ್ರೋಶದ ಅಲೆಯನ್ನು ಎಬ್ಬಿಸಿದೆ. ಹತ್ಯಾಕಾಂಡದ ಸುದ್ದಿ ಜುಲೈ 3 ರ ಶನಿವಾರ ಸಂಜೆ 'ಗಣಶಕ್ತಿ' ಪತ್ರಿಕೆಗೆ ತಲುಪಿತು. ಮರುದಿನದ ಸಂಚಿಕೆಯಲ್ಲಿ ಅದನ್ನು ಪ್ರಾಮುಖ್ಯ ನೀಡಿ ಪ್ರಕಟಿಸಿತು. ತಕ್ಷಣವೇ ವ್ಯಾಪಕ ಪ್ರತಿಕ್ರಿಯೆಗಳು ವ್ಯಕ್ತವಾದವು. ಪ್ರಮುಖ ಬುದ್ಧಿಜೀವಿಗಳು-ಶಿಕ್ಷಣ ತಜ್ಞರು ಹತ್ಯಾಕಾಂಡಕ್ಕೆ ಆಘಾತ ವ್ಯಕ್ತಪಡಿಸಿದ್ದು 'ಇದು ಮಾನವೀಯತೆ ವಿರುದ್ಧದ ಕೃತ್ಯವಾಗಿದೆ' ಎಂದು ವರ್ಣಿಸಿದ್ದಾರೆ.

ಇದು ಪ್ರಗತಿಪರ ಚಿಂತನೆಗಳ ಮೇಲಿನ ಆಕ್ರಮಣವಾಗಿದೆ ಎಂದು ಎಡರಂಗ ಅಧ್ಯಕ್ಷ ಶೈಲೇನ್ ದಾಸ್ ಗುಪ್ತಾ ಪ್ರತಿಕ್ರಿಯಿಸಿದ್ದಾರೆ. ಮೂಲಭೂತವಾದಿಗಳು ವೈಚಾರಿಕತೆಗೆ ಅವಕಾಶ ನೀಡುವುದಿಲ್ಲ. ಸಮಾಜವನ್ನು ಕತ್ತಲೆಯಲ್ಲಿಡಲಿಕ್ಕಾಗಿ ಅವರು ಧರ್ಮವನ್ನು ಬಳಸಿಕೊಳ್ಳುತ್ತಾರೆ. ಧಾರ್ಮಿಕ ಮೂಲಭೂತವಾದಿಗಳು ಪ್ರಪಂಚದ ಎಲ್ಲಾ ಭಾಗಗಳಲ್ಲಿ ಸಕ್ರಿಯರಾಗಿದ್ದಾರೆ. ಪ್ರಗತಿಪರ ಚಿಂತನೆ ಮೇಲೆ ಆಕ್ರಮಣ ಅವರ ಪ್ರಮುಖ ಗುರಿಯಾಗಿದೆ ಎಂದು ದಾಸ್‌ಗುಪ್ತಾ ಹೇಳಿದ್ದಾರೆ. ನಮ್ಮ ದೇಶದಲ್ಲಿ ಕೂಡಾ ಇಂಥ ಶಕ್ತಿಗಳಿದ್ದು ಅವುಗಳ ಬಗ್ಗೆ ಜಾಗೃತರಾಗಿರಬೇಕೆಂದು ಅವರು ಕರೆ ನೀಡಿದ್ದಾರೆ.

ಕಲ್ಕತ್ತ ರವೀಂದ್ರ ಭಾರತಿ, ಬರ್ದ್ವಾನ್, ಕಲ್ಯಾಣಿ ಮತ್ತು ವಿದ್ಯಾಸಾಗರ ವಿಶ್ವವಿದ್ಯಾನಿಲಯಗಳ ಉಪಕುಲಪತಿಗಳು ಟರ್ಕಿ ಹತ್ಯಾಕಾಂಡವನ್ನು ಖಂಡಿಸಿದ್ದಾರೆ. ಈ ಕ್ರೌರ್ಯದ ವಿರುದ್ಧ ದನಿಯೆತ್ತಿರುವ ಇತರ ಕೆಲವು ಮಂದಿ ಪ್ರಮುಖರು :ಖ್ಯಾತ ಸಾಹಿತಿ ಆನಂದ ಶಂಕರ ರಾಯ್, ಚಿತ್ರ ನಿರ್ದೇಶಕ ಮೃಣಾಲ್ ಸೇನ್, ನಾಟಕ ಕಲಾವಿದರಾದ ಉತ್ಪಲ್‌ದತ್, ತಪಸ್ ಸೇನ್, ಮನೋಜ್ ಮಿತ್ರಾ, ಖಲೀದ್ ಚೌಧರಿ, ಖ್ಯಾತ ಅರ್ಥಶಾಸ್ತ್ರಜ್ಞ ಡಾ. ಅಶೋಕ್ ಮಿತ್ರ, ಚಿತ್ರ ಕಲಾವಿದ ಬಿಜೊನ್ ಚೌಧರಿ, ಕವಿಗಳಾದ ಶಂಖ ಘೋಷ್ ಸುನಿಲ್ ಗಂಗೋಪಾಧ್ಯಾಯ, ಸಲೇಖ್ ಲಖನೊವಿ, ಪೂರ್ಣೆಂದು ಪುತ್ರಿ, ಪ್ರೊಫೆಸರ್‌ಗಳಾದ ಜಾಫರ್ ಉಗ್ನವಿ ಮತ್ತು ಸುಕುಮಾರಿ ಭಟ್ಟಾಚಾರ್ಯ.

ನಗರದಲ್ಲಿ ರಸ್ತೆ ಚಳುವಳಿ ನಡೆಸಿದರು. ಸುಮಾರು 2000 ಮಂದಿ ಗಂಡಸರು, ಹೆಂಗಸರು ಮತ್ತು ಮಕ್ಕಳನ್ನು ಪೋಲೀಸರು ಬಂಧಿಸಿ ನಂತರ ಬಿಡುಗಡೆ ಮಾಡಿದರು.

ಇದೇ ಸಮಸ್ಯೆಯನ್ನು ಎತ್ತಿಕೊಂಡು ಎಡಿಎಂಕೆಯ 'ವಿಚ್ಛೇದಿತ'ಗೆಳೆಯ ಪಕ್ಷ ಕಾಂಗ್ರೆ ಜುಲೈ 12 ರಂದು ಮದ್ರಾಸ್ ಬಂದ್‌ಗೆ ಕರೆ ನೀಡಿತ್ತು ಅದಕ್ಕೆ ಸಪ್ಪೆ ಪ್ರತಿಕ್ರಿಯೆ ವ್ಯಕ್ತವಾಗಿದೆ ಎಂದು ಸುದ್ದಿ ಸಂಸ್ಥೆಗಳು ವರದಿ ಮಾಡಿದೆ. ನೀರಿನ ಪ್ರಶ್ನೆ ಕಾಂಗ್ರೆ ತಂತ್ರಕ್ಕೆ ತಣ್ಣೀರೆರಚಿದೆ.

ಜಯಾಗೆ ಅನರ್ಹತೆ ಹೈಕೋರ್ಟ್ ತಡೆಯಾಜ್ಞೆ

ಜಯಲಲಿತಾರನ್ನು ವಿಧಾನಸಭೆಯ ಸದಸ್ಯತ್ವದಿಂದ ಅನರ್ಹಗೊಳಿಸುವಂತೆ ಕೋರಿ ಡಾ. ಸ್ವಾಮಿ ಚುನಾವಣಾ ಆಯೋಗಕ್ಕೆ ಮನವಿ ಸಲ್ಲಿಸಿದ್ದರು. ಈ ಮನವಿ ಮೇಲೆ ಕ್ರಮಕೈಗೊಳ್ಳದಂತೆ ತಡೆಯಾಜ್ಞೆ ನೀಡುವಂತೆ ಜಯಲಲಿತಾ ನ್ಯಾಯಾಲಯದ ಮೊರೆ ಹೊಕ್ಕಿದ್ದರು.

ಇದೀಗ ಮದ್ರಾಸ್ ಹೈಕೋರ್ಟ್ ಮುಖ್ಯಮಂತ್ರಿಯವರ ಅರ್ಜಿಯನ್ನು ಪುರಸ್ಕರಿಸಿದೆ. ಜನತಾಪಕ್ಷದ ಅಧ್ಯಕ್ಷರ ಅರ್ಜಿ ಮೇಲೆ ಕ್ರಮ ಕೈಗೊಳ್ಳದಂತೆ ಚುನಾವಣಾ ಆಯೋಗಕ್ಕೆ ಸೂಚಿಸಿದೆ. ಇದು ತಮಿಳುನಾಡಿನ ಆಳುವ ಎಐಡಿಎಂಕೆ ವಲಯದಲ್ಲಿ ಹರ್ಷ ವನ್ನು ತಂದಿದೆ.

ಜಯಲಲಿತಾ ಪಾಲುದಾರರಾಗಿರುವ ಒಂ

ದು ಸಂಸ್ಥೆ ರಾಜ್ಯ ಪಠ್ಯ ಪುಸ್ತಕ ಸೊಸೈಟಿ ಜತೆ ಎರಡು ಪಠ್ಯ ಪುಸ್ತಕ ಸರಬರಾಜಿನ ಬಗ್ಗೆ ಒಪ್ಪಂದ ಮಾಡಿಕೊಂಡಿರುವುದರಿಂದ ಜಯಾರನ್ನು ಶಾಸಕತ್ವದಿಂದ ಅನರ್ಹಗೊಳಿಸಬೇಕೆಂದು ಡಾ. ಸ್ವಾಮಿ ಆಪಾದಿಸಿದರು.

ಗೋವಾ ಮುಖ್ಯಮಂತ್ರಿ ಎರಡು ತಿಂಗಳಲ್ಲೇ ತಲೆ ನೋವು ಆರಂಭ

ಶೀರ್ಷಿಕೆ ಓದಿ ಏನಾದ ಎರಡು ತಿಂಗಳಲ್ಲಿ ಎಂಬ ಪ್ರಶ್ನೆ ಮೂಡುವುದು ಸಹಜವೇ. ಇನ್ನು ವಿಲ್ಪ್ರೆಡ್ ಡಿಸೋಜಾ ಎಂಬ ಪ್ರಶ್ನೆಯೂ ಉದ್ಭವಿಸಬಹುದು.

ಹೌದು ಸ್ವಾಮಿ, ಇದು ಗೋವಾ ರಾಜ್ಯದ ಕತೆ. ಅಲ್ಲಿನ ಮುಖ್ಯಮಂತ್ರಿಯವ

ಟಕ, ಡಿಸೋಜಾರನ್ನು ಇನ್ನೊಬ್ಬ ವೀರಪ್ಪ ಮೊಯ್ಲಿಯವರಿಗೆ ಹೋಲಿಸಬಹುದು.

ಪ್ರಣಬ್‌ಗೆ ಪುನರ್ ವಸತಿ!

ರಾಜ್ಯಸಭೆಗೆ ಆಯ್ಕೆಯಾಗಲು ಪ್ರಣಬ್ ಮುಖರ್ಜಿ ಪಾಡುತ್ತಿರುವ ಕಷ್ಟವನ್ನು 'ಐಕ್ಯರಂಗ'ದ ಕಳೆದ ಸಂಚಿಕೆಯಲ್ಲಿ ಓದಿ ಅಯ್ಯೋ ಪಾಪ ಎಂದು ಹೇಳಿರುವಿರಲ್ಲವೇ? ಪ್ರಣಬ್ ಮುಖರ್ಜಿ ಕೇಂದ್ರ ವಾಣಿಜ್ಯ ಖಾತೆಗೆ ಜುಲೈ ಎಂಟರಂದು ರಾಜೀನಾಮೆ ಕೊಟ್ಟಿದ್ದಾರೆ. ಪಶ್ಚಿಮ ಬಂಗಾಳ ವಿಧಾನಸಭೆಯಿಂದ ರಾಜ್ಯಸಭೆಗೆ ಆಯ್ಕೆಯಾಗುವ 'ಅದಮ್ಯ' ಆತ್ಮವಿಶ್ವಾಸವನ್ನು ಅವರು ವ್ಯಕ್ತಪಡಿಸಿದ್ದಾರೆ.

ಆದರೆ 'ಅಷ್ಟರವರೆಗೆ' ಏನು ಮಾಡಬೇಕು ಅವರು? ಅದಕ್ಕೆಂದೇ ಕಾಂಗ್ರೆಸ್(ಐ) ಹೈಕಮಾಂಡ್ ಪ್ರಣಬ್‌ಗೆ ಪುನರ್ ವಸತಿ ಕಲ್ಪಿಸಿದೆ.

ಈ ವರ್ಷದ ಕೊನೆಯ ಹೊತ್ತಿಗೆ ಚುನಾವಣೆ ನಡೆಯುವ ಸಾಧ್ಯತೆಗಳಿರುವ ಬಿಜೆಪಿ ಆಡಳಿತವಿದ್ದ ನಾಲ್ಕು ರಾಜ್ಯಗಳು ಮತ್ತು ದೆಹಲಿಗಾಗಿ ರಚಿಸಲಾಗಿರುವ ಉನ್ನತಾಧಿಕಾರದ ಕಾಂಗ್ರೆಸ್ ಜಂಟಿ ಸಮನ್ವಯ ಸಮಿತಿಯ ಅಧ್ಯಕ್ಷರಾಗಿ ಪ್ರಣಬ್‌ರನ್ನು ನೇಮಿಸಲಾಗಿದೆ.

ದೆಹಲಿ, ಉತ್ತರ ಪ್ರದೇಶ, ಮಧ್ಯಪ್ರದೇಶ, ರಾಜಸ್ತಾನ ಮತ್ತು ಹಿಮಾಚಲ ಪ್ರದೇಶದಲ್ಲಿ ಚುನಾವಣೆಗಳನ್ನು ಎದುರಿಸುವ ಬಗ್ಗೆ ಈ ಸಮಿತಿ ಕಾರ್ಯತಂತ್ರವನ್ನು ರೂಪಿಸಲಿದೆ. ಚುನಾಯಿತರಾಗಲು ವಿಫಲರಾಗಿ ಸಚಿವ ಸ್ಥಾನಕ್ಕೆ ರಾಜೀನಾಮೆ ಕೊಟ್ಟವರಿಂದ ತಂತ್ರ ರೂಪಿಸುವ ಸಮಿತಿಗೆ ನೇತೃತ್ವ ಚೆನ್ನಾಗಿದೆ ಅಲ್ಲವೇ.

ಪ್ರಮುಖ ದೇವಸ್ಥಾನಕ್ಕೆ ಹರಿಜನ ಅರ್ಚಕನ ನೇಮಕ

ದೇಶದ ಪ್ರಮುಖ ದೇವಾಲಯಗಳಲ್ಲಿ ಒಂದೆನಿಸಿರುವ ಮಹಾವೀರ ದೇವಸ್ಥಾನಕ್ಕೆ ಹರಿಜನ ವ್ಯಕ್ತಿಯೊಬ್ಬರನ್ನು ಪ್ರಮುಖ ಅರ್ಚಕನನ್ನಾಗಿ ನೇಮಿಸಿರುವ ಸುದ್ದಿ ಬಿಹಾರದಿಂದ ಬಂದಿದೆ. ಬಹುಶಃ ಪರಿಶಿಷ್ಟ ಜಾತಿಗೆ ಸೇರಿದವರೊಬ್ಬರು ಇಂಥ ಸ್ಥಾನಕ್ಕೆ ನೇಮಕಗೊಳ್ಳುತ್ತಿರುವುದು ಇದೇ ಮೊದಲ ಸಲವಾಗಿದೆ.

ಬಿಹಾರ ರಾಜಧಾನಿ ಪಾಟ್ನಾದಲ್ಲಿರುವ ಮಹಾವೀರ ದೇವಾಲಯಕ್ಕೆ ನೇಮಕ

ರಂಭಗೊಂಡಂತಾಯಿತು.

ದೇಶದ ಪ್ರಮುಖ ನಗರಗಳಲ್ಲಿ ಆಟಿಕೆ ಲೈಬ್ರರಿಗಳು ಅಸ್ತಿತ್ವದಲ್ಲಿವೆ. ಆದರೆ ಇಂಥ ಬ್ಯಾಂಕ್ ಇದೇ ಮೊದಲನೆಯದಾಗಿದೆ. ಮಹಾನಗರದ ಬಡ ಹಾಗೂ ತುಳಿತಕ್ಕೊಳಗಾದ ಮಕ್ಕಳಿಗಾಗಿಯೇ ವಿವಿಧ ಭಾಗಗಳಲ್ಲಿ ಇಂಥ ಎಂಟು ಬ್ಯಾಂಕ್‌ಗಳನ್ನು ತೆರೆಯಲಾಗಿದೆ. ಇಲ್ಲಿನ ಗೊಂಬೆಗಳನ್ನು ದೇಣಿಗೆ ರೂಪದಲ್ಲಿ ಸಂಗ್ರಹಿಸಲಾಗಿದ್ದು ಸರಕಾರ ಒಂದು ಪೈಸೆಯನ್ನು ಕೂಡಾ ಖರ್ಚು ಮಾಡಿಲ್ಲ.

-- ವಿಶ್ವ

ಮಲ್ಲಪುರಂ ಜಿಲ್ಲೆ ಮುಸ್ಲಿಂ ಲೀಗ್‌ಗೆ ಕೊಡುಗೆಯಲ್ಲ

ಕೇರಳದಲ್ಲಿ ಮಲ್ಲಪುರಂ ಎಂಬ ಒಂದು ಜಿಲ್ಲೆಯಿದೆ. ಮುಸ್ಲಿಮರನ್ನು ತೃಪ್ತಿಪಡಿಸಲಿಕ್ಕಾಗಿ ಕಮ್ಯುನಿಸ್ಟರು ಈ ಜಿಲ್ಲೆಯನ್ನು ರಚಿಸಿದರು ಎಂಬ ಅಭಿಪ್ರಾಯ; ಅಪಪ್ರಚಾರ ಎನ್ನುವುದು ಸೂಕ್ತ, ಚಾಲ್ತಿಯಲ್ಲಿದೆ. ಇನ್ನೊಂದೆಡೆ ಇದು ತನಗೆ ಸಿಕ್ಕ ಜಯ ಎಂದು ಮುಸ್ಲಿಂ ಲೀಗ್ ಕೊಚ್ಚಿಕೊಳ್ಳುತ್ತಿರುವುದನ್ನು ಕಾಣಬಹುದು. ಆದರೆ ಇವೆರಡೂ ಮೂರ್ಖತನದ ಅಭಿಪ್ರಾಯಗಳು. ಕೇರಳದ ಮುಖ್ಯಮಂತ್ರಿಯಾಗಿದ್ದ ಹಿರಿಯ ಮಾರ್ಕ್ಸ್‌ವಾದಿ ನಾಯಕ ಇ.ಎಂ.ಎಸ್. ನಂಬೂದರಿಪಾಡ್ ಎಲ್ಲಾ ತಪ್ಪು ಅಭಿಪ್ರಾಯಗಳನ್ನು ಹೋಗಲಾಡಿಸುವ ಪತ್ರವೊಂದನ್ನು ಮುಸ್ಲಿಂ ಲೀಗ್ ಅಧ್ಯಕ್ಷರಿಗೆ ಬರೆದಿದ್ದಾರೆ.

ಮಲ್ಲಪುರಂ ಜಿಲ್ಲಾ ರಚನೆ. ಆ ಪ್ರದೇಶದ ಜನರಿಗೆ ಸಿಕ್ಕ ಗೆಲವು ಎಂಬುದು ಭಾವಿಸಬೇಕು. ಇದು ಮುಸ್ಲಿಂ ಲೀಗಿಗೆ ಸಿಕ್ಕ ಕೊಡುಗೆ ಎಂದು ಬಾವಿಸಿದರೆ ದೇಶಕ್ಕೆ ಹಾನಿಯಾಗುತ್ತದೆ ಎಂದು ಬಹಿರಂಗ ಪತ್ರದಲ್ಲಿ ಇಎಂಎಸ್. ಸ್ಪಷ್ಟಪಡಿಸಿದ್ದಾರೆ.

ಮಲ್ಲಪುರಂ ಜಿಲ್ಲಾ ರಚನೆಯ ಬೆಳ್ಳಿ ಹಬ್ಬದ ಸಮಾರಂಭಗಳಲ್ಲಿ ಪಾಲ್ಗೊಳ್ಳಲು ಮುಸ್ಲಿಂ ಯೂತ್ ಲೀಗ್ ನೀಡಿದ್ದ ಆಹ್ವಾನವನ್ನು ಇ.ಎಂ.ಎಸ್. ತಿರಸ್ಕರಿಸಿದ್ದರು. ಬಿಜೆಪಿಯ ಯುವ ವಿಭಾಗ ತಿರುವನಂತಪುರದಲ್ಲಿ ಏರ್ಪಡಿಸಿದ್ದ ಒಂದು ವಿಚಾರ ಸಂಕಿರಣದಲ್ಲಿ ಭಾಗವಹಿಸಿದ್ದರು. ಇದು ಇಎಂಎಸ್‌ರ ದ್ವಿಮುಖ ಧೋರಣೆಯನ್ನು ತೋರಿಸುತ್ತದೆ ಎಂದು ಮುಸ್ಲಿಂ ಯೂತ್ ಲೀಗ್ ಒಂದು ಬಹಿರಂಗ ಪತ್ರದಲ್ಲಿ ಹೇಳಿತ್ತು. ಈ ಆರೋಪಕ್ಕೆ ತಮ್ಮ ಬಹಿರಂಗಪತ್ರದಲ್ಲಿ ಇಎಂಎಸ್ ಉತ್ತರ ನೀಡಿದ್ದಾರೆ.

ತಿರುವನಂತಪುರದಲ್ಲಿ 'ಕಾಶ್ಮೀರ ಮತ್ತು 370 ನೇ ವಿಧಿ' ಎಂಬ ವಿಷಯದಲ್ಲಿ ಮೇಲೆ ವಿಚಾರ ಸಂಕಿರಣ ನಡೆದಿತ್ತು. ಅದರಲ್ಲಿ ವಿವಿಧ ರಾಜಕೀಯ ಪಕ್ಷಗಳ ಪ್ರತಿನಿಧಿಗಳು ಪಾಲ್ಗೊಂಡಿದ್ದರು. ಅದು ಬಿಜೆಪಿಯ ಯುವ ವಿಭಾಗ ಏರ್ಪಡಿಸಿದ ಕಾರ್ಯಕ್ರಮವಾಗಿದ್ದರೂ ಇಡಿಯಾಗಿ ಬಿಜೆಪಿಯ ಕಾರ್ಯಕ್ರಮ ಅಲ್ಲ ಎಂದು ಇಎಂಎಸ್ ವಿವರಿಸಿದ್ದಾರೆ.

ಜಿಲ್ಲಾ ರಚನೆಯ ಬೆಳ್ಳಿ ಹಬ್ಬ ಸಮಾರಂಭಗಳನ್ನು ಮುಸ್ಲಿಂ ಯೂತ್‌ಲೀಗ್ ಮಾತ್ರವೇ ಏರ್ಪಡಿಸಿತ್ತು. ಸಮಾರಂಭಗಳಲ್ಲಿ ಬೇರೆ ಯಾವುದೇ ಪಕ್ಷ ಭಾಗವಹಿಸದಿರುವುದೆಂದರೆ ಜಿಲ್ಲೆ ಮುಸ್ಲಿಂ ಲೀಗಿಗೆ ದೊರತೆ ಕೊಡುಗೆ ಎಂದು ಅದು ಭಾವಿಸಿದಂತೆ ಆಗುತ್ತದೆ ಎಂದು ಸಿಪಿಐ(ಎಂ) ಪಾಲಿಟ್ ಬ್ಯೂರೋ ಸದಸ್ಯರಾಗಿರುವ ಇಎಂಎಸ್ ಹೇಳಿದ್ದಾರೆ.

ಇದು ತಪ್ಪು ಅಭಿಪ್ರಾಯ ಎಂದವರು ಪ್ರತಿಪಾದಿಸಿದ್ದಾರೆ. ತಮ್ಮ ಅಧ್ಯಕ್ಷತೆಯಲ್ಲಿ ನಡೆದ ಸಚಿವ ಸಂಪುಟದ ಸಭೆ ಮಲ್ಲಪುರಂ ಜಿಲ್ಲಾ ರಚನೆಗೆ ನಿರ್ಧಾರ ಕೈಗೊಂಡಿತ್ತು ಎಂಧು ಹೇಳಿದ್ದಾರೆ. ಆ ಮುಸ್ಲಿಂ ಲೀಗಿಗೆ ಸಚಿವ ಸಂಪುಟದ 'ಕೊಡುಗೆ'ಯೂ ಆಗಿರಲಿಲ್ಲ ಎಂದಿದ್ದಾರೆ.

ಇಎಂಎಸ್. ನೇತೃತದ ಸಂಪುಟ ಅದಕ್ಕೂ ಮುನ್ನ ಎರ್ನಾಕುಳಂ ಮತ್ತು ಅಲಪುಳ ಜಿಲ್ಲೆಗಳನ್ನು ರಚಿಸಿತ್ತು. ಅದರ ನಂತರ ಇನ್ನೂ ನಾಲ್ಕು ಜಿಲ್ಲೆಗಳು ರೂಪುಗೊಂಡಿವೆ. ಇವುಗಳಲ್ಲಿ ಯಾವುದು ಕೂಡಾ ಯಾವುದೇ ಜನಾಂಗಕ್ಕೆ ನೀಡಿದ ಕೊಡುಗೆಯಲ್ಲ ಮಲ್ಲಪುರಂ ವಿಚಾರದಲ್ಲಿ ಕೂಡ ಇದೇ ತತ್ವ ಅನ್ವಯವಾಗುತ್ತದೆ.

ಜಿಲ್ಲೆಯ ರಚನೆ ಮುಸ್ಲಿಂ ಲೀಗಿನ ಜಯ ಎಂದು ಹೇಳಿಕೊಳ್ಳುವುದರಿಂದ ದೇಶದ ಹಿತಾಸಕ್ತಿಗೆ ಮಾತವಲ್ಲದೆ ಸ್ವತಃ ಮುಸ್ಲಿಂ ಲೀಗಿಗೆ ಕೂಡಾ ಹಾನಿಯಾಗುತ್ತದೆ ಎಂದು ಇಎಂಎಸ್. ಎಚ್ಚರಿಕೆ ನೀಡಿದ್ದಾರೆ.

ಡಂಕೆಲ್ ಪ್ರಸ್ತಾವದಿಂದ ಪಾಕಿಸ್ತಾನ ರೈತರಿಗೆ ಕಹಿ ಅನುಭವ

ಭಾರತದ ರಾಷ್ಟ್ರೀಯ ಹಿತಾಸಕ್ತಿ ಮೇಲೆ ಡಂಕೆಲ್ ಪ್ರಸ್ತಾಪಗಳು ಸ್ಪಷ್ಟ ಪರಿಣಾಮಗಳನ್ನು ಬೀರಲಿವೆ. ಆದ್ದರಿಂದ ಪ್ರಸ್ತಾವಗಳನ್ನು ಪರಿಶೀಲಿಸಿ ಅದರ ಅನುಷ್ಠಾನದಿಂದಾಗುವ ಪರಿಣಾಮಗಳ ಬಗ್ಗೆ ಮಾಹಿತಿ ನೀಡಲು ಸರ್ವಪಕ್ಷ ಸಂಸದೀಯ ಸಮಿತಿಯನ್ನು ನೇಮಕ ಮಾಡಬೇಕು- ಲೋಕಸಭೆಯ ಮಾಜಿ ಸ್ಪೀಕರ್ ಹಾಗೂ ಜನತಾದಳ ನಾಯಕ ರಬಿರಾಯ್ ಹೀಗೆಂದು ಒತ್ತಾಯ ಮಾಡಿದ್ದಾರೆ.

ಡಂಕೆಲ್ ಪ್ರಸ್ತಾಪಗಳಲ್ಲಿನ ಕೆಲವು ಭಾರತದ ಕೃಷಿಯ ಅವನತಿಗೆ ಹಾಗೂ ಸಣ್ಣ ಪ್ರಮಾಣದ ಉದ್ಯಮಗಳ ನಾಶಕ್ಕೆ ಕಾರಣವಾಗುತ್ತಿದೆ ಎಂದು ಅವರು ವಿಶ್ಲೇಷಿಸಿದ್ದಾರೆ.

ಡಂಕೆಲ್ ಪ್ರಸ್ತಾವಗಳು ಭಾರತದ ರೈತರ ಹಿತಾಸಕ್ತಿಗಳಿಗೆ ಮಾರಕವಾಗಿಲ್ಲ ಎಂಬ ಪ್ರಧಾನಿ ನರಸಿಂಹರಾವ್‌ರ ಹೇಳಿಕೆಯನ್ನು ರಬಿರಾಯ್ ಜುಲೈ 11 ರಂದು ಭುವನೇಶ್ವರದಲ್ಲಿ ನಡೆದ ಸುದ್ದಿಗೋಷ್ಠಿಯೊಂದರಲ್ಲಿ ತಳ್ಳಿ ಹಾಕಿದರು.

ಡಂಕೆಲ್ ಪ್ರಸ್ತಾವಗಳು ಪಾಕಿಸ್ತಾನದಲ್ಲಿ ಜಾರಿಗೆ ಬಂದಿವೆ. ಅವು ಈಗಾಗಲೇ ಅಲ್ಲಿನ ರೈತರಿಗೆ ಕಹಿ ಅನುಭವ ಮಾಡಿಕೊಟ್ಟಿದೆ ಎಂದು ರಬಿರಾಯ್ ವಿವರಿಸಿದರು. ಭಾರತದಲ್ಲಿ ಇದು ಜಾರಿಗೆ ಬಂದರೆ 1970 ಪೇಟೆಂಟ್ ಕಾಯಿದೆ ರದ್ದಾಗುವ ಎಲ್ಲಾ ಸೂಚನೆಗಳಿದ್ದು 2000 ನೇ ಇಸವಿ ಹೊತ್ತಿಗೆ ಔಷಧಿಗಳ ಬೆಲೆ ಗಗನಕ್ಕೇರಲಿದೆ ಎಂದು ಎಚ್ಚರಿಕೆ ನೀಡಿದರು.

ಸುದ್ದಿಗಳು.............

ಪುಟ 7ರಿಂದ

ಡಿ.ಸಿ. ಕಛೇರಿ ಮುತ್ತಿಗೆ ಕಾರ್ಯಕ್ರಮವನ್ನು ಜುಲೈ 5 ರಂದು ಯೋಜಿಸಲಾಗಿತ್ತು. ದ್ವಿತೀಯ ಶ್ರೇಣಿಯಲ್ಲಿ ಪಿ.ಯು.ಸಿ. ಆದವರಿಗೆ ಮಾತ್ರ ಪದವಿ ತರಗತಿಗೆ ಅನುಮತಿ ಎನ್ನುವ ವಿವಿ ನಿಲುವನ್ನು ವಿರೋಧಿಸಿ, ಮತ್ತು ಅರ್ಜಿ ಸಲ್ಲಿಸಿದ ಎಲ್ಲಾ ವಿದ್ಯಾರ್ಥಿಗಳಿಗೆ ಸರಕಾರಿ ಕಾಲೇಜಿನಲ್ಲಿ ಸೀಟು ಪಡೆಯುವ ಹಕ್ಕಿದೆಯೆಂದು ಎಸ್.ಎಫ್.ಐ ವಾದಿಸಿತ್ತು. ಜುಲೈ 15 ರೊಳಗಾಗಿ ಎಸ್.ಎಫ್.ಐ. ಬೇಡಿಕೆಯನ್ನು ಈಡೇರಿಸಲಾಗುವುದು ಎನ್ನುವ ಭರವಸೆಯನ್ನು ಪಡೆದ ನಂತರ ಹೋರಾಟವನ್ನು ಹಿಂತೆಗೆದುಕೊಳ್ಳಲಾಯಿತು.

2ನೇ ಮಾರ್ಚ್93ರಿಂದಲೇ ಮಂಗಳೂರು ತಾಲೂಕಿನಾದ್ಯಂತವಾಗಿ ಜಿಲ್ಲಾ ಪರಿಷತ್ ಹೈಸ್ಕೂಲುಗಳ ಪರಿಸ್ಥಿತಿಯನ್ನು ಎಸ್.ಎಫ್.ಐ ಮಂಗಳೂರು ತಾಲೂಕು ಸಮಿತಿ ಸಮೀಕ್ಷೆ ನಡೆಸಿ ಜಿಲ್ಲಾ ಪರಿಷತ್ ಕಾರ್ಯದರ್ಶಿಗಳ ಗಮನ ಸೆಳೆಯುವಲ್ಲಿ ಮುಂದಾಗಿತ್ತು.

ದಿನಾಂಕ ಜುಲೈ 7,1993 ರಂದು ಮಂಗಳೂರು ನಗರದ ಮಧ್ಯೆ ಇರುವ ಮೂರು ಜಿಲ್ಲಾ ಪರಿಷತ್ ಹೈಸ್ಕೂಲುಗಳ ವಿದ್ಯಾರ್ಥಿಗಳು ತರಗತಿ ಬಹಿಷ್ಕರಿಸಿ ಜಿಲ್ಲಾ ಪರಿಷತ್ ಚಲೋ ನಡೆಸಿದರು

ಜಿಲ್ಲೆಯಾದ್ಯಂತ 680 ಶಿಕ್ಷಕರ ಸ್ಥಾನ ಖಾಲಿ ಇದ್ದು ಅದನ್ನು ಭರ್ತಿಮಾಡುವಂತೆ ಒತ್ತಾಯಿಸಲಾಗಿದೆ.

ಶೈಕ್ಷಣಿಕವಾಗಿ ಮುಂದುವರಿದ ಜಿಲ್ಲೆಯೆಂದು ಖ್ಯಾತಿ ಪಡೆದ ದ.ಕ. ಜಿಲ್ಲೆಯಲ್ಲಿ ಶಾಲಾಕಟ್ಟಡಗಳು ಅವ್ಯವಸ್ಥೆಗಳಿಂದ ಕೂಡಿವೆ. ಸೋರುವ ಕಟ್ಟಡದಲ್ಲಿ ಕುಳಿತುಕೊಳ್ಳಲು ಕುರ್ಚಿ ಬೆಂಚುಗಳಿಲ್ಲ. ಆಟೋಪಕರಣಗಳಿಲ್ಲ. ಲೈಬ್ರರಿಗಳಿಲ್ಲದ, ಪ್ರಯೋಗಾಲಯವಿಲ್ಲದ, ಕುಡಿಯುವ ನೀರಿನ ವ್ಯವಸ್ಥೆ ಇಲ್ಲದ ಹೈಸ್ಕೂಲುಗಳನ್ನು ಪಟ್ಟಿಮಾಡಿ ಜಿಲ್ಲಾ ಪರಿಷತ್‌ನ ಗಮನ ಸೆಳೆಯಲಾಯಿತು.

ನಗರದ ಮಧ್ಯೆ ಸಮವಸ್ತ್ರ ಧರಿಸಿದ ವಿದ್ಯಾರ್ಥಿ-ವಿದ್ಯಾರ್ಥಿನಿಯರು ಬಾವುಟ ಪ್ಲೇ ಕಾರ್ಡುಗಳನ್ನು ಹಿಡಿದು ಸರಕಾರದ ಭ್ರಷ್ಟ ಶಿಕ್ಷಣ ನೀತಿಯ ವಿರುದ್ಧ ಘೋಷಣೆಗಳನ್ನು ಕೂಗುತ್ತಾ "ಜಿಲ್ಲಾ ಪರಿಷತ್ ಚಲೋ" ಎಂದು ಸ್ವಯಂ ಪ್ರೇರಿತರಾಗಿ ಉತ್ಸಾಹದಿಂದ ಮುನ್ನುಗ್ಗುತ್ತಿದ್ದುದನ್ನು ಮಾರ್ಗದ ಇಕ್ಕೆಲಗಳಲ್ಲಿ ನಿಂತ ಜನರು ಆಶ್ಚರ್ಯಭರಿತರಾಗಿ ನೋಡುತ್ತಿದ್ದರು.

ಕ್ಯಾಪಿಟೇಶನ್ ಡೊನೇಶನ್ ಸುಪ್ರಿಂ ಕೋರ್ಟ್ ತೀರ್ಮಾನವನ್ನು ವಿರೋಧಿಸಿ ಖಾಸಗಿ ಶಿಕ್ಷಣ ಸಂಸ್ಥೆಗಳು ಮತ್ತು ಕರ್ನಾಟಕ ರಾಜ್ಯ ಸರಕಾರದ ಲಾಬಿಯ ವಿರುದ್ಧ, ಹಿಂದಿ ಭಾಷೆಯನ್ನು ಕಡ್ಡಾಯವಾಗಿ ಹೇರಿರುವುದನ್ನು ವಿರೋಧಿಸಿ ಎಸ್.ಎಫ್.ಐ, ಎಐಎಸ್‌ಎಫ್ ಮತ್ತು ಡಿ.ಎಸ್.ಎಫ್. ಜಿಲ್ಲಾ ಸಮಿತಿಗಳ ಸಂಯುಕ್ತ ಹೋರಾಟವನ್ನು ಯಶಸ್ವಿಗೊಳಿಸಲು ಮಂಗಳೂರು ತಾಲೂಕು ಸಮಿತಿ ಸಜ್ಜಾಗಿ ನಿಂತಿದೆ.

ವರದಿ: ಎಸ್. ರಾಜ್‌ಕುಮಾರ್

ರಾಮಾನುಜನ್ ನಿಧನಕ್ಕೆ ಸಂತಾಪ

ಖ್ಯಾತ ಕನ್ನಡ ಸಾಹಿತಿ ಎ.ಕೆ. ರಾಮಾನುಜನ್ ನಿಧನಕ್ಕೆ 'ಐಕ್ಯರಂಗ' ಸಂತಾಪ ಸಲ್ಲಿಸುತ್ತದೆ.

ಎ.ಕೆ. ರಾಮಾನುಜನ್ ನವ್ಯ ಸಾಹಿತ್ಯಕ್ಕೆ ಚಾಲನೆ ನೀಡಿದ ಸಾಹಿತಿ. ವ್ಯಕ್ತಿ ಕೇಂದ್ರಿತ ನವ್ಯ ಸಾಹಿತ್ಯಮುನ್ನಡೆಯಲು ಕೊಡುಗೆ ನೀಡಿದವರ ಪೈಕಿ ರಾಮಾನುಜನ್ ಅವರು ಪ್ರಮುಖರು.

ಎ.ಕೆ. ರಾಮಾನುಜನ್ ಎರಡು ಕಾರಣಗಳಿಗಾಗಿ ಮುಖ್ಯರಾದವರು. ಒಂದು ಅವರು ಕನ್ನಡದ ಸಾಹಿತ್ಯಕೃತಿಗಳನ್ನು ಇಂಗ್ಲೀಷ್‌ಗೆ ಅನುವಾದಿಸುವ ಮೂಲಕ ಕನ್ನಡ ಸಾಹಿತ್ಯದ ಸೊಗಡನ್ನು ಇತರ ದೇಶಗಳಿಗೂ ಪರಿಚಯಿಸಿದರು.

ಮತ್ತೊಂದು ರಾಮಾನುಜನ್ ಜಾನಪದ ಕಥೆಗಳನ್ನೂ ಸಂಗ್ರಹಿಸಿ ಇತರೆ ಭಾಷೆಗೆ ಅನುವಾದಿಸಿದರು.

ಹಳದಿ ಮೀನಿನಂತಹ ಅಪ್ಪಟ ನವ್ಯ ಕಾದಂಬರಿಗಳನ್ನು ಕನ್ನಡಕ್ಕೆ ಅನುವಾದಿಸಿ ಕೊಡುವ ಸಮಯದಲ್ಲೇ ಕನ್ನಡದ ಗಾದೆ, ಕಥೆ ಮಾತ್ರವೇ ಅಲ್ಲದೆ ವಚನಗಳನ್ನು ಅನುವಾದಿಸಿದರು.

ವಚನಗಳ ಅನುವಾದ 'ಸ್ಪೀಕಿಂಗ್ ಆಫ್ ಶಿವ' ಜಾನಪದ ಕಥೆಗಳ ಅನುವಾದ 'ಫೋಕ್ ಟೇಲ್ಸ್ ಆಫ್ ಇಂಡಿಯಾ'

ಕನ್ನಡ ರಂಗಭೂಮಿಯಲ್ಲಿ ಮಹತ್ವದ ಪ್ರಯೋಗಗಳೆಂದು ಬಣ್ಣಿಸಲ್ಪಟ್ಟ ಗಿರೀಶ್ ಕಾರ್ನಾಡರ ನಾಗಮಂಡಲ, ಚಂದ್ರಶೇಖರ್ ಕಂಬಾರ ಸಿರಿಸಂಪಿಗೆಗೆ ರಾಮಾನುಜನ್ ಹೇಳಿದ ಕಥೆಯೇ ಆಧಾರವಾಗಿತ್ತು.



- **ನೇಪಾಳದಲ್ಲಿ** ಏಳುಪಕ್ಷಗಳ ಸಂಯುಕ್ತ ಎಡರಂಗದ ಕರೆಯಮೇರೆಗೆ ನೇಪಾಳವಿಡೀ ಜುಲೈ 4 ರಂದು ಬಂದ್ ಆಚರಿಸಿತು. ಎಡರಂಗದ ಕರೆಗೆ ಓಗೊಟ್ಟು ಭಾರಿ ಸಾಮೂಹಿಕ ಚಳುವಳಿ ನಡೆಯುತ್ತಿದೆ. ಚಳುವಳಿಯ ವ್ಯಾಪಕತೆಗೆ ಹೆದರಿ ಸರಕಾರ ಒಂದು ಬೇಡಿಕೆಯನ್ನು ಮನ್ನಿಸಿದೆ. ಹಾಲಿ ಸುಪ್ರಿಂಕೋರ್ಟ್ ಜಡ್ಜ್ ರಿಂದ ಪುನಃ ತನಿಖೆ- ಎರಡು ಪೊಲಿಟ್‌ಬ್ಯೂರೋ ಸದಸ್ಯರ ಕೊಲೆ ಬಗ್ಗೆ. ಈ ಕೊಲೆಯ ಬಗ್ಗೆ ತಿಳಿದೂ ಮುಚ್ಚಿಡುತ್ತಿರುವ ಪ್ರಧಾನಿ ರಾಜಿನಾಮೆ ನೀಡಬೇಕೆಂಬ ಬೇಡಿಕೆ ಮೇಲೆ ಚಳುವಳಿ ಮುಂದುವರಿಯಲಿದೆ.

- **ಜಿ-7 ಶೃಂಗಸಭೆ** ಈ ಬಾರಿ ಟೋಕಿಯೋದಲ್ಲಿ ನಡೆಯಿತು. ಏಳು ಸಾಮ್ರಾಜ್ಯಶಾಹಿ ದೇಶಗಳ ಈ ಸಭೆ ಮುಂದಿದ್ದ ದೊಡ್ಡ ಪ್ರಶ್ನೆ ಬಂಡವಾಳಶಾಹಿ ಎದುರಿಸುತ್ತಿರುವ ಆರ್ಥಿಕ ಹಿಂಜರಿತ ಎದುರಿಸುವುದು ಹೇಗೆ ಎಂದು. ಅವುಗಳ ನಡುವೆಯೆ ಬೆಳೆಯುತ್ತಿರುವ ವ್ಯಾಪಾರ ಸಮರ ಕಡಿಮೆ ಮಾಡುವ ಕೆಲವು ಒಪ್ಪಂದಗಳನ್ನು ಬಿಟ್ಟರೆ ಇನ್ನೇನೂ ಸಾಧಿಸಲಿಲ್ಲ ಈ ಸಭೆ. ಬಂಡವಾಳಶಾಹಿ ಬಿಕ್ಕಟ್ಟಿನ ಒಡಲಲ್ಲಿರುವ ವ್ಯವಸ್ಥೆ ಎಂದು ಪುನಃ ತೋರಿಸಿದೆ ಈ ಸಭೆ.

- ಪಾಕಿಸ್ತಾನದಲ್ಲಿ ರಾಜಕೀಯ ಬಿಕ್ಕಟ್ಟು ಇನ್ನಷ್ಟು ತೀವ್ರಗೊಂಡಿದ್ದು ವಿರೋಧ ಪಕ್ಷಗಳು ಮರುಚುನಾವಣೆಗೆ ಒತ್ತಾಯಿಸುತ್ತಿವೆ. ಈ ಒತ್ತಾಯಕ್ಕೆ ಬೆಂಬಲವಾಗಿ ವಿರೋಧಪಕ್ಷಗಳು 'ಇಸ್ಲಾಮಾಬಾದ್ ಚಲೋ' ಚಳುವಳಿಗೆ ಕರೆ ನೀಡಿವೆ.

ಕಮ್ಯುನಿಸ್ಟ್ ನಾಯಕರ ಕೊಲೆ ಫಲಶ್ರುತಿ

ನೇಪಾಳಿ ಪ್ರಧಾನಿ ರಾಜಿನಾಮೆಗೆ ಬೃಹತ್ ಬೆಂಬಲ

-- ಶರತ್‌ಚಂದ್ರ

ನೇಪಾಳದ ಏಳು ಎಡಪಕ್ಷಗಳ ರಂಗದ ಸಾಮೂಹಿಕ ಚಳುವಳಿ ದಿನೇ ದಿನೇ ತೀವ್ರವಾಗುತ್ತಿದ್ದು ಭಾರಿ ಜನಬೆಂಬಲಗಳಿಸುತ್ತಿದೆ. ಆಳುವ ನೇಪಾಳಿ ಕಾಂಗ್ರೆಸ್ ಪಕ್ಷದ ಜನಬೆಂಬಲ ಕುಸಿಯುತ್ತಿದೆ. ಜುಲೈ 4 ರಂದು ಎಡಪಕ್ಷಗಳು ಕರೆಕೊಟ್ಟ 'ನೇಪಾಳ ಬಂದ್' ಅಭೂತಪೂರ್ವ ಯಶಸ್ಸು ಪಡೆಯಿತು. ನೇಪಾಳದ 75 ಜಿಲ್ಲೆಗಳಲ್ಲಿ ಜನಜೀವನ ಸ್ತಬ್ದವಾಗಿತ್ತು. ಬಂದ್ ಸಂಪೂರ್ಣವಾಗಿ ಶಾಂತಿಯುತವಾಗಿತ್ತು ಅದೇ ದಿನ ಸಂಜೆ ಕರೆದಿದ್ದ ರ‍್ಯಾಲಿಯಲ್ಲಿ ಲಕ್ಷಕ್ಕೂ ಹೆಚ್ಚು ಜನ ನೆರೆದು ಪ್ರಧಾನಿ ರಾಜಿನಾಮೆ ನೀಡಬೇಕು ಎಂಬ ಬೇಡಿಕೆಗೆ ಭಾರಿ ಜನಬೆಂಬಲ ವ್ಯಕ್ತವಾಯಿತು. ಶಾಂತಿಯುತ ಬಂದ್ ಎಡಪಕ್ಷಗಳು ಹಿಂಸಾಚಾರದಲ್ಲಿ ತೊಡಗಿ ಆರ್ಥಿಕ ಅವ್ಯವಸ್ಥೆಗೆ ದಾರಿ ಮಾಡಿಕೊಡುತ್ತಿದ್ದಾರೆ ಎಂಬ ಆಳುವ ಪಕ್ಷದ ಪ್ರಚಾರದ ಪೊಳ್ಳು ತೋರಿಸಿಕೊಟ್ಟಿದೆ.

ಜೂನ್ 25 ರಂದು ಮಾಜಿ ಸುಪ್ರೀಂ ಕೋರ್ಟ್ ಜಡ್ಜ್ಅನಿಲ್‌ರವರ ವಿಚಾರಣಾ ಆಯೋಗ ನೇಪಾಳ ಕಮ್ಯುನಿಸ್ಟ್ ಪಕ್ಷ (ಯುಎಮ್‌ಎಲ್)ನ ಇಬ್ಬರು ಪೊಲಿಟ್ ಬ್ಯೂರೋ ಸದಸ್ಯರ ಮರಣ ಅಪಘಾತದಿಂದ ಆದದ್ದು ಎಂಬ ತೀರ್ಮಾನದಿಂದ ರೊಚ್ಚಿಗೆದ್ದ ಜನ ಬೀದಿಗಿಳಿದು ಭಾರಿ ಪ್ರದರ್ಶನ ನಡೆಸಿದರು. ಆಗ ಈ ಚಳುವಳಿಯ ಬೇಡಿಕೆ ಹಾಲಿ ಸುಪ್ರಿಂಕೋರ್ಟಿನ ನ್ಯಾಯಾಧೀಶರಿಂದ ಹೊಸ ವಿಚಾರಣೆ ನಡೆಸುವುದು ಮಾತ್ರ ಆಗಿತ್ತು. ಆದರೆ ಜೂನ್ 26,27ರಂದು ಸರಕಾರ ಪ್ರದರ್ಶನಕಾರರ ಮೇಲೆ ಹರಿಯಬಿಟ್ಟ ಹಿಂಸಾಕಾಂಡದಿಂದ ಚಳುವಳಿಯ ಬೇಡಿಕೆಗೆ ಇನ್ನೊಂದು ಬೇಡಿಕೆ ಸೇರಿಕೊಂಡಿತು. ಸರಕಾರ ಶಾಂತಿಯುತ ಪ್ರದರ್ಶನಕಾರರ ಮೇಲೆ ನಡೆಸಿದ ಹಿಂಸಾಕಾಂಡದಲ್ಲಿ 13 ಜನ ಸತ್ತರು. 200 ಜನ ಗಾಯಗೊಂಡು 800 ಜನರನ್ನು ಬಂಧಿಸಲಾಯಿತು. ನೇಪಾಳದ ಪ್ರಧಾನಿ ರಾಜಿನಾಮೆ ನೀಡಬೇಕು ಎಂಬ ಬೇಡಿಕೆ ಚಳುವಳಿಯ ಕೇಂದ್ರ ಬಿಂದುವಾಯಿತು.

ಇಬ್ಬರು ಹಿರಿಯ ಕಮ್ಯುನಿಸ್ಟ್ ನಾಯಕರ ಮರಣ ಅಪಘಾತದಿಂದ ಆದದ್ದಲ್ಲ. ಕೊಲೆ ಎಂಬುದು ಎಲ್ಲರಿಗೂ ಸ್ಪಷ್ಟವಾಗಿರುವ ಸಂಗತಿ. ಅದನ್ನು ಮರೆಮಾಚಿ, ಈ ಕೊಲೆಯ ಹಿಂದಿನ ಪಿತೂರಿ ಮುಚ್ಚಿಹಾಕುವ ಪ್ರಯತ್ನದಲ್ಲಿ ಸರಕಾರ ತೊಡಗಿದೆ ಎಂಬುದೂ ಎಲ್ಲರಿಗೂ ಮನದಟ್ಟಾಗುತ್ತಿದೆ. ಆದ್ದರಿಂದ ಜನಬೆಂಬಲ ಪ್ರಧಾನಿ ರಾಜಿನಾಮೆ ಬೇಡಿಕೆಗೆ ವ್ಯಕ್ತವಾಗುತ್ತಿದೆ. ಜೀಪ್‌ನ ಡ್ರೈವರ್ ಸರ್ಕಾರದ ವಶದಲ್ಲಿದ್ದರೂ ಸತ್ಯ ತಿಳಿಯುವ ಗೋಜಿಗೆ ಹೋಗಿಲ್ಲ. ಆತನ ಮೇಲೆ ಕೊಲೆ ಆಪಾದನೆ ಸಹ ಹಾಕಿಲ್ಲ. 'ಅಪಘಾತ' ಮಾಡಿದ ಆಪಾದನೆ ಮಾತ್ರ ಹಾಕಲಾಗಿದೆ.

ಪ್ರಧಾನಿ ಜಿ.ಪಿ. ಕೊಯಿರಾಲಾ ರಾಜಿನಾಮೆ ಕೊಡಬೇಕೆಂಬ ಚಳುವಳಿಯ ಪ್ರಭಾವ ನೇಪಾಳಿ ಕಾಂಗ್ರೆಸ್ ಪಕ್ಷದ ಮೇಲೂ ಆಗಲಾರಂಭಿಸಿದೆ. ಆ ಪಕ್ಷದೊಳಗಿಂದಲೂ ಕೊಯಿರಾಲ ರಾಜಿನಾಮೆ ಕೊಡಬೇಕೆಂಬ ಅಭಿಪ್ರಾಯ ವ್ಯಕ್ತವಾಗಹತ್ತಿದೆ.

ಆಗಸ್ಟ್ 9,10,11 ರಂದು ಮೂರು ದಿನಗಳ 'ನೇಪಾಳಬಂದ್'ನಲ್ಲಿ ಕೊನೆಯಾಗುವ ಒಂದು ತಿಂಗಳ ಭಾರಿ ಚಳುವಳಿಯ ಕಾರ್ಯಕ್ರಮವನ್ನು ಎಡರಂಗ ಹಾಕಿಕೊಂಡಿದೆ.

ಶ್ರೀಮಂತ ರಾಷ್ಟ್ರಗಳ ನಡುವೆ ಹೆಚ್ಚುತ್ತಿರುವ ಕಚ್ಚಾಟಗಳು

ಜಿ-7 (G -7) ಅಥವಾ ಗುಂಪು-7, ಏಳು ಸಾಮ್ರಾಜ್ಯಶಾಹಿ ದೇಶಗಳ ಗುಂಪು ಅಮೇರಿಕಾ, ಕೆನಡಾ, ಬ್ರಿಟನ್, ಫ್ರಾನ್ಸ್, ಜರ್ಮನಿ, ಇಟಲಿ, ಜಪಾನ್‌ಗಳೇ ಈ ಏಳು ದೇಶಗಳು. ಈ ಗುಂಪು-7 ವರ್ಷಕ್ಕೊಮ್ಮೆ ಆ ದೇಶಗಳ ಮುಖ್ಯಸ್ಥರ ಶೃಂಗ ಸಭೆನಡೆಸುತ್ತದೆ. ಆ ಸಭೆ ಸಾಮ್ರಾಜ್ಯಶಾಹಿ ಹಿತಾಸಕ್ತಿ ಕಾಪಾಡುವ, ಅದಕ್ಕೊಡ್ಡಿರುವ ಅಪಾಯದ ಬಗ್ಗೆ ವಿಚಾರವಿನಿಮಯ ಒಮ್ಮತಕ್ಕೆ ಪ್ರಯತ್ನಿಸುತ್ತದೆ. ಪ್ರಬಲ ಸೋವಿಯೆಟ್ ಒಕ್ಕೂಟ ಅಸ್ತಿತ್ವದಲ್ಲಿರುವರೆಗೆ ಗುಂಪು-7 ದೇಶಗಳ ನಡುವಣ ಭಿನ್ನಾಭಿಪ್ರಾಯ ಅಷ್ಟಾಗಿ ಚರ್ಚಿತವಾಗುತ್ತಿರಲಿಲ್ಲ. ಆದರೆ ಸೋವಿಯೆಟ್ ವಿಘಟನೆಯ ನಂತರ ಈ ದೇಶಗಳ ನಡುವಣ ವ್ಯಾಪಾರದ ಬಗೆಗಿನ ತಿಕ್ಕಾಟ ತೀವ್ರವಾಗಿದೆ. ಯುರೋಪಿಯನ್ ಸಮುದಾಯ, ಅಮೇರಿಕ, ಜಪಾನ್‌ನಡುವೆ ತೀವ್ರ ಆರ್ಥಿಕ ಪೈಪೋಟಿ, ಮಾರುಕಟ್ಟೆಗಳಿಗಾಗಿ ತಿಕ್ಕಾಟ, ಪರಸ್ಪರ ಮಾರುಕಟ್ಟೆಯಲ್ಲಿ ಆಮದು ವ್ಯಾಪಾರಕ್ಕೆ ಅಡೆತಡೆಗಳು ಶೃಂಗಸಭೆಯಲ್ಲಿ ಹೆಚ್ಚೆಚ್ಚು ವ್ಯಕ್ತವಾಗುತ್ತಿವೆ.

ಈ ಬಾರಿಯ ಶೃಂಗಸಭೆಯಲ್ಲೂ ಇದೇ ಮುಖ್ಯ ವಿಷಯವಾಗಿತ್ತು. ಜಾಗತಿಕ ಬಂಡವಾಳಶಾಹಿ ವ್ಯವಸ್ಥೆ ಎದುರಿಸುತ್ತಿರುವ ತೀವ್ರ ಆರ್ಥಿಕ ಹಿಂಜರಿತ, ಅತ್ಯಧಿಕ ನಿರುದ್ಯೋಗ ಸಭೆಗೆ ಹಾಜರಾದ ನಾಯಕರನ್ನು ಚಿಂತೆಗೀಡುಮಾಡಿತ್ತು. ಈ ಹಿನ್ನೆಲೆಯಲ್ಲಿ ಪರಸ್ಪರ ವ್ಯಾಪಾರ ಸಂಬಂಧ, ಆಮದು ರಫ್ತಿಗೆ ಇರುವ ನಿರ್ಬಂಧಗಳ ಬಗ್ಗೆ ವಿವಾದ ಚರ್ಚೆಯ ಕೇಂದ್ರಬಿಂದುವಾಗಿತ್ತು. ಅಮೇರಿಕ ಅದರ ರಫ್ತಿಗೆ ಯಾವುದೇ ಅಡೆತಡೆ ಇರಬಾರದು (ಜಪಾನ್, ಯುರೋಪ್‌ನಲ್ಲಿ) ಎಂದು ಬಯಸುತ್ತಿದೆ. ಆದರೆ ಜಪಾನಿ, ಯುರೋಪಿಯನ್ ರಷ್ಟ್ರಗಳ ಮೇಲೆ ಹಲವು ನಿರ್ಬಂಧಗಳನ್ನು ಹೇರಿದೆ. ಈ ಬಗ್ಗೆ ತೀವ್ರ ವಾದ - ವಿವಾದಗಳ ನಂತರ ಕೆಲವು ನಿರ್ಬಂಧಗಳನ್ನು ತೆಗೆದುಹಾಕುವ ಬಗ್ಗೆ ಸೀಮಿತ ಒಪ್ಪಂದವಾಗಿದೆ. ಇದನ್ನೇ ಸಭೆಯ ಸಫಲತೆ ಎಂದು ಟಾಂ ಟಾಂ ಮಾಡಲಾಗುತ್ತಿದೆ. ಆದರೆ ಕೃಷಿ ಹಾಗೂ ಜವಳಿಯ ಆಮದು ರಫ್ತು ಬಗೆಗೆ ಒಪ್ಪಂದ ಸಾಧ್ಯವಾಗಿಲ್ಲ. ಇದು ತೀವ್ರ ವಿವಾದಕ್ಕೊಳಗಾಗಿರುವ ವಿಷಯ. ಜಾಗತಿಕ ವ್ಯಾಪಾರದ ಬಗ್ಗೆ ಬಹು-ಪಕ್ಷೀಯ ಉರುಗ್ವೆ ಸುತ್ತಿನ ಮಾತುಕತೆಗಳಲ್ಲಿ ಯಾವುದೇ ಪ್ರಗತಿ ಆಗದಿರಲು ಇದೇ ಕಾರಣ. ಆರ್ಥಿಕ ಹಿಂಜರಿತ, ನಿರುದ್ಯೋಗ ಹೋಗಲಾಡಿಸಲು ಕೈಗೊಳ್ಳಬೇಕಾದ ಕ್ರಮ, ಸಾಧಿಸಬಹುದಾದ ಗುರಿಗಳ ಬಗ್ಗೆ ಯಾವುದೇ ಒಮ್ಮತಕ್ಕೆ ಬರಲು ಜಿ-7 ಮಾನವ ಹಕ್ಕುಗಳು, ಅಣ್ವಸ್ತ್ರ-ಪ್ರಸಾರ ನಿಷೇಧದ ಹೆಸರಲ್ಲಿ ಎಂದಿನಂತೆ ಮೂರನೇ ಜಗತ್ತಿನ ದೇಶಗಳಿಗೆ ಬೆದರಿಕೆ ಹಾಕಿತು. ಮಾನವ-ಹಕ್ಕುಗಳ ಹೆಸರಿನಲ್ಲಿ ಒಪಾನಿನ ಒತ್ತಡದಿಂದಾಗಿ ಯಾವುದೇ ನಿರ್ದಿಷ್ಟ ದೇಶಕ್ಕೆ ಬೆದರಿಕೆ ಹಾಕಲಿಲ್ಲ. ಆದರೆ ಅಣ್ವಸ್ತ್ರ-ಪ್ರಸಾರ ನಿಷೇಧದ ಹೆಸರಲ್ಲಿ ಉತ್ತ ಕೊರಿಯಾಕ್ಕೆ ತೀವ್ರ ಬೆದರಿಕೆ ಹಾಕಿತು.

ಜಿ-7ರ ಮುಂದೆ ಯೆಲ್ಟ್‌ಸಿನ್ನರ 'ಜೀ ಹುಜೂರ್'

ಜಿ-7 ಶೃಂಗಸಭೆಯ ಮುಂದೆ ಕಳೆದ ಮೂರು ವರ್ಷದಿಂದ ಜೀ ಹುಜೂರ್ ಎಂದು ನಿಂತಿರುವ ಹಿಂದಿನ ಸೋವಿಯೆಟ್ ಈಗಿನ ರಶ್ಯಾಕ್ಕೆ ಕೊನೆಗೂ ಭಿಕ್ಷೆಹಾಕಲು ನಿರ್ಧರಿಸಿದೆ. ರಶ್ಯಾದ ಕೈಗಾರಿಕೆಯನ್ನು ಖಾಸಗೀಕರಿಸಲು ಮೂರು ಶತಕೋಟಿ ಡಾಲರು ಸಹಾಯಧನ ನೀಡಲು ನಿರ್ಧರಿಸಿದೆ. ಇದು ಈಗಾಗಲೇ ಕೆಲವು ತಿಂಗಳ ಹಿಂದೆ ಕ್ಲಿಂಟನ್-ಯೆಲ್ಟ್‌ಸಿನ್ ಶೃಂಗಸಭೆಯಲ್ಲಿ ಘೋಷಿಸಿದ ನಾಲ್ಕು ಶತಕೋಟಿ ಡಾಲರುಗಳಿಗಿಂತ ಕಡಿಮೆ. ಇದು ಯೆಲ್ಟ್‌ಸಿನ್ನರಿಗೆ ನೀಡಿದ ರಾಜಕೀಯ ಬೆಂಬಲ ಮಾತ್ರವೇ ಎಂದು ಕಾದು ನೋಡಬೇಕಾಗಿದೆ. ರಶ್ಯಾವನ್ನು ಸೇರಿಸಿಕೊಂಡು ಜಿ-7 ನ್ನು ಜಿ-8 ಮಾಡಬೇಕೆಂಬ ಯೆಲ್ಟ್‌ಸಿನ್ನರ ಸಲಹೆಯನ್ನು ತಳ್ಳಿಹಾಕಿದೆ. ಇದಕ್ಕಿಂತ ಹೆಚ್ಚಿನ ಅವಮಾನ ಇನ್ನೊಂದು ಇರಲಾರದು.

ಕ್ಯಾಪಿಟೇಶನ್ : ರಘುಪತಿ ನಿಲುವಿಗೆ ಎಸ್.ಎಫ್.ಐ ವಿರೋಧ

ವೃತ್ತಿಪರ ಶಿಕ್ಷಣ ಪ್ರವೇಶ ಶುಲ್ಕಕ್ಕೆ ಸಂಬಂಧಿಸಿದಂತೆ ಖಾಸಗೀ ಆಡಳಿತ ಮಂಡಳಿಗಳ ಪ್ರತಿನಿಧಿಗಳೂ ಸೇರಿದಂತೆ ಶಿಕ್ಷಣ ತಜ್ಞರ ಸಮಿತಿಯನ್ನು ಪುನರ್ ರಚಿಸಬೇಕೆಂಬ ಮಾಜಿ ಸಚಿವ ರಘುಪತಿಯವರ ಹೇಳಿಕೆಯನ್ನು ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ) ಕರ್ನಾಟಕ ರಾಜ್ಯ ಸಮಿತಿ ಉಗ್ರವಾಗಿ ಖಂಡಿಸಿದೆ.

ತಾವುಸಚಿವರಾಗಿದ್ದಾಗ ಶಿಕ್ಷಣ ವ್ಯಾಪಾರೀಕರಣದ ವಿರುದ್ಧ ಬಹಳಷ್ಟು ಮಾತನಾಡಿ ಏನೂ ಮಾಡಲಾಗದಿದ್ದ ರಘುಪತಿಯವರು ಸುಪ್ರಿಂಕೋರ್ಟಿನ ತೀರ್ಪಿನ ಹಿನ್ನೆಲೆಯಲ್ಲಿ ಮತ್ತೊಂದು ಸಮಿತಿಯ ರಚನೆಗೆ ಸೂಚಿಸಿರುವುದು ಅತ್ಯಂತ ಖಂಡನಾರ್ಹ. ಸರ್ಕಾರ ನಿಗದಿಪಡಿಸಿರುವ ಶುಲ್ಕಗಳೇ ವಿಪರೀತ ಹೆಚ್ಚಾಗಿರುವಾಗ ಇವುಗಳನ್ನು ಇನ್ನಷ್ಟು ಹೆಚ್ಚಿಸಿ ಸುಪ್ರಿಂ ಕೋರ್ಟ್ ತೀರ್ಪಿನ ಸ್ಫೂರ್ತಿಯನ್ನು ನಾಶಮಾಡಿ, ಡೊನೇಷನ್ ಕ್ಯಾಪಿಟೇಷನನ್ನು ಕಾನೂನು ಬದ್ಧಗೊಳಿಸುವ ಮಾಲಿಕ ವರ್ಗದ ಕುತಂತ್ರದ ಭಾಗವಾಗಿದೆ ಎಂದು ರಘುಪತಿಯವರ ಸೂಚನೆಯನ್ನು ಎಸ್. ಎಫ್.ಐ. ವಿಶ್ಲೇಷಿಸಿದೆ.

ಇಂತಹ ರಾಜಕಾರಣಿಗಳ ಹೇಳಿಕೆಗಳ ಬಗ್ಗೆ ಎಚ್ಚರ ವಹಿಸಿ ಏನೇ ಆದರೂ ಸುಪ್ರಿಂ ಕೋರ್ಟಿನ ತೀರ್ಪು ಸಂಪೂರ್ಣ ಜಾರಿಯಾಗುವಂತೆ ಹಾಗೂ ಶುಲ್ಕ ಏರಿಕೆಗೆ ಅವಕಾಶ ಕೊಡದಂತೆ ಪ್ರತಿರೋಧವನ್ನು ಒಡ್ಡಬೇಕೆಂದು ವಿದ್ಯಾರ್ಥಿ ಪೋಷಕ ಬಂಧುಗಳಲ್ಲಿ ಹಾಗೂ ರಾಜ್ಯ ಸರ್ಕಾರವನ್ನು ಎಸ್.ಎಫ್.ಐ. ವಿನಂತಿಸಿದೆ.

ಜೈಲ್‌ಭರೋ, ಭಾರತ್‌ಬಂದ್ ಯಶಸ್ಸಿಗೆ ಹೆಜ್ಜೆಗಳು

ಉಡುಪಿ : ಕೇಂದ್ರ ಸರಕಾರದ ಹೊಸ ಆರ್ಥಿಕ ನೀತಿ, ಕೈಗಾರಿಕಾ ನೀತಿಗಳನ್ನು ವಿರೋಧಿಸಿ ನಡೆಸಲಾಗುತ್ತಿರುವ ಹೋರಾಟವನ್ನು ಮುಂದುವರಿಸಿ ಆಗಸ್ಟ್ 19 ರಂದು "ಜೈಲ್‌ಭರೋ", ಸೆಪ್ಟೆಂಬರ್ 9 ರ "ಭಾರತ ಬಂದ್" ಹೋರಾಟವನ್ನು ಯಶಸ್ವಿಗೊಳಿಸಲು ದಿನಾಂಕ 13-6-1993 ರಂದು ಸಾಮೂಹಿಕ ಸಂಘಟನೆಗಳ ಕ್ರಿಯಾವೇದಿಕೆಯ ಆಶ್ರಯದಲ್ಲಿ ಉಡುಪಿ ಸತ್ಯನಾರಾಯಣ ಸಭಾಂಗಣದಲ್ಲಿ ಜರು

ಗಿಸಲಾದ ಸಮಾವೇಶ ಕರೆ ನೀಡಿತು.

ಸಮಾವೇಶದ ಅಧ್ಯಕ್ಷತೆಯನ್ನು ವಿಮಾ ನೌಕರರ ಸಂಘದ ಅಧ್ಯಕ್ಷ ಬಿ. ಆರ್. ವಿ. ಕಾಮತ್ ವಹಿಸಿದ್ದರು. ಸಮಾವೇಶವನ್ನುದ್ದೇಶಿಸಿ ಮಾತನಾಡಿದ ದ.ಕ. ಜಿಲ್ಲಾ ಸಿಐಟಿಯು ಅಧ್ಯಕ್ಷ ಬಿ. ಮಾಧವರವರು ಬಜೆಟ್ ಮಂಡನೆಗೆ ಮೊದಲೇ ಕೇಂದ್ರ ಸರಕಾರವು ಸಕ್ಕರೆ ಕಲ್ಲಿದ್ದಲು, ಉಕ್ಕು, ಅಡುಗೆ ಅನಿಲ ಇವುಗಳ ಬೆಲೆ ಏರಿಕೆ ಮಾಡಿದೆ. ರೈಲ್ವೆ ಪ್ರಯಾಣ ದರ, ಸರಕು ಸಾಗಾಟದ ದರಗಳನ್ನು ಹೆಚ್ಚಿಸಿದೆ. ಅಕ್ಕಿ ಗೋಧಿ ಮಾರಾಟದ ಬೆಲೆ ಅಧಿಕಗೊಳಿಸಿದ ಸರಕಾರ ರಸಗೊಬ್ಬರ ಬೆಲೆ ನಿಯಂತ್ರಣ ರದ್ದುಪಡಿಸಿದೆ. ಸಬ್ಸಿಡಿ ನಿಲ್ಲಿಸಿದೆ. ವಿಶ್ವಬ್ಯಾಂಕ್, ಅಂತರಾಷ್ಟ್ರೀಯ ಹಣಕಾಸು ಸಂಸ್ಥೆಯ ಒತ್ತಡಕ್ಕೆ ಕೇಂದ್ರ ಸರಕಾರ ಶರಣಾಗುವ ರೀತಿಯಲ್ಲಿದೆ. ಇದರಿಂದಾಗಿ ರೂಪಾಯಿಯ ಅಪಮೌಲ್ಯ ಮೊದಲಾದ ಕ್ರಮಗಳನ್ನು ಜಾರಿಗೆ ತರಲಾಗುತ್ತಿದೆ ಎಂದು ಟೀಕಿಸಿದರು.

ಎಐಟಿಯುಸಿ ಮುಂದಾಳುಗಳು ಶಂಕರ್ ಎಸ್. ಸೆಟ್ಟಿಗಾರರು ಸಮಾವೇಶದ 20 ಹೇಳಿಕೆಗಳನ್ನು ಬೆಂಬಲಿಸಿದರು. ಬಿ. ಮೋನಪ್ಪ ಸಾಲಿಯನ್ ಸ್ವಾಗತಿಸಿದರು. ಡೇವಿಡ್ ಕರ್ಕಡ ಧನ್ಯವಾದ ಅರ್ಪಿಸಿದರು.

ವಿಜಾಪುರ : ಬಂದ್‌ನ ಹೋರಾಟ ಕಾರ್ಯಕ್ರಮಗಳನ್ನು ವಿಜಾಪುರ ಜಿಲ್ಲೆಯಲ್ಲಿ ಯಶಸ್ವಿಗೊಳಿಸುವುದಕ್ಕಾಗಿ ಪ್ರಾಂತ ರೈತ ಸಂಘದ ಸಂಚಾಲಕತ್ವದಲ್ಲಿ ಜು. 8 ರಂದು ಸಭೆಯೊಂದು ನಡೆಯಿತು. ಈ ಸಭೆಯ ಅಧ್ಯಕ್ಷತೆಯನ್ನು ಪ್ರಕಾಶ್ ಹಿಟ್ನಳ್ಳಿಯವರು ವಹಿಸಿದ್ದರು. ಕಾರ್ಮಿಕ ಮುಖಂಡರಾದ ಎನ್.ಕೆ. ಉಪಾಧ್ಯಾಯರು ದಿಲ್ಲಿಯ ಸಮಾವೇಶದ ತೀರ್ಮಾನ ಜೂನ್ 23 ರಂದು ಬೆಂಗಳೂರಿನಲ್ಲಿ ನಡೆದ ರಾಜ್ಯ ಕೇಂದ್ರೀಯ ಸಂಘಟನೆಗಳ ಸಭೆಯ ವರದಿಗಳನ್ನು ನೀಡಿದರು. ಚರ್ಚೆಯ ನಂತರ ಜುಲೈ 15 ರಂದು ವಿಜಾಪುರದಲ್ಲಿ ಎಲ್ಲಾ ಕಾರ್ಮಿಕ, ವಿದ್ಯಾರ್ಥಿ, ಯುವಜನ, ರೈತರ, ದಲಿತ ಸಂಘರ್ಷ ಸಮಿತಿ, ಶಿಕ್ಷಕರ, ಬ್ಯಾಂಕ್, ಎಲ್.ಐ.ಸಿ. ಪತ್ರಕರ್ತರ ಹಾಗೂ ಸಾಂಸ್ಕೃತಿಕ ಸಂಘಟನೆಗಳ ಕಾರ್ಯಕರ್ತರ ಸಭೆ ನಡೆಸಲು ತೀರ್ಮಾನಿಸಿತು. ಸರಕಾರದ ಆರ್ಥಿಕ ನೀತಿ ಮತ್ತು ಕೋಮುವಾದದ ವಿರುದ್ಧದ ವಿಜಾಪುರ ಜಿಲ್ಲಾ ವೇದಿಕೆ ರಚಿಸಬೇಕೆಂದು ತೀರ್ಮಾನಿಸಿತು. ಈ ವೇದಿಕೆಯಡಿ ಮುಂದಿನ ಹೋರಾಟಗಳನ್ನು ನಡೆಸಬೇಕೆಂದು ನಿರ್ಧರಿಸಲಾಯಿತು.

ರೈತ ಸಂಘದ ಅಧ್ಯಕ್ಷರಾದ ಭೀಮಶಿ ಕಲಾದಗಿ, ಕಾರ್ಮಿಕ ಮುಖಂಡರಾದ ಡಿ. ಹೆಚ್. ಮುಲ್ಲಾ, ಮನ್ನೂ ಸಾಬ ಕಲಾದಗಿ, ವಿದ್ಯಾರ್ಥಿ ಮುಖಂಡರಾದ ಎಮ್.ಎ. ಮೊಖಾಶಿ, ಸಾಹಿತ್ಯ ಸಂಗಮದ ಅಧ್ಯಕ್ಷರಾದ ಶೇಷರಾವ್. ಎಸ್. ಮಾನೆ, ಬ್ಯಾಂಕ್‌ಯೂನಿಯನ್‌ನ ಮುಖಂಡರು ಹಾಜರಿದ್ದರು.

ವಾಸದ ಮನೆಗಳ ಹಕ್ಕುಪತ್ರಕ್ಕಾಗಿ ಹೋರಾಟ

ವಿಜಾಪುರ : ಕಂಜರಬಾಟ ಕುಟುಂಬದವರಿಗೆ ವಾಸದ ಮನೆಗಳ ಹಕ್ಕುಪತ್ರಗಳನ್ನು ನೀಡುವಂತೆ ಆಗ್ರಹಪಡಿಸಿ ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (ಡಿ.ವೈ.ಎಫ್.ಐ) ಕಂಜರಬಾಟ ಘಟಕದ ನೇತೃತ್ವದಲ್ಲಿ ದಿನಾಂಕ 6ನೇ ಜುಲೈ 1993 ರಿಂದ ಅನಿರ್ದಿಷ್ಟ ಧರಣಿ ಸತ್ಯಾಗ್ರಹವನ್ನು ಆರಂಭಿಸಲಾಗಿದೆ. ಆದರೂ ಸರಕಾರ ಯಾವುದೇ ಕ್ರಮತೆಗೆದುಕೊಳ್ಳದೇ, ಇತ್ತ ಕಡೆ ಗಮನಹರಿಸದೇ ಇರುವುದನ್ನು ಡಿ.ವೈ.ಎಫ್.ಐ ಗಂಭೀರವಾಗಿ ಪರಿಗಣಿಸಿದೆ. ಅಲ್ಲದೆ 10ನೇ ತಾರೀಖಿನ ಒಳಗಾಗಿ ಕಂಜರಬಾಟ ಕುಟುಂಬದವರಿಗೆ ಅವರು ವಾಸಿಸುತ್ತಿರುವ ಮನೆಗಳ ಹಕ್ಕು ಪತ್ರ ಕೊಡದೇ ಇದ್ದರೆ ಉಗ್ರ ಹೋರಾಟ ಮಾಡಲಾಗುತ್ತದೆ ಎಂದು ಡಿ.ವೈ.ಎಫ್.ಐ ಎಚ್ಚರಿಕೆ ನೀಡಿದೆ.

ಈ ಹಿಂದೆ ಡಿ.ವೈ.ಎಫ್.ಐ ಜಿಲ್ಲಾ ಸಮಿತಿ ನೇತೃತ್ವದಲ್ಲಿ ಜಿಲ್ಲಾಧಿಕಾರಿಗಳಿಗೆ ಮನವಿ ಅರ್ಪಿಸಿದಾಗ ಜಿಲ್ಲಾಧಿಕಾರಿಗಳು ತಕ್ಷಣವೇ ಬೇಡಿಕೆಗಳನ್ನು ಪೂರೈಸಲಾಗುವುದೆಂದು ಆಶ್ವಾಸನೆ ಕೊಟ್ಟಿದ್ದರಲ್ಲದೆ ಹಕ್ಕು ಪತ್ರ ಕೊಡುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದ್ದರು.

ಆದರೆ ಅವಕ್ಕೆ ಸಂಬಂಧಿಸಿದ ಅಧಿಕಾರಿಗಳು ಇತ್ತ ಕಡೆಗೆ ಲಕ್ಷ್ಯ ವಹಿಸದೇ ಇರುವುದನ್ನು ಡಿವೈಎಫ್‌ಐ ಪ್ರತಿಭಟಿಸಿದೆ, ಅಲ್ಲದೆ 10 ನೇ ತಾರೀಖಿನ ನಂತರ ಸೂಕ್ತ ಕ್ರಮವನ್ನು ಕೈಗೊಳ್ಳದೇ ಇದ್ದಲ್ಲಿ ಸಂಬಂಧಿಸಿದ ಅಧಿಕಾರಿಗಳ ಕಾರ್ಯಾಲಯವನ್ನು ಮುಚ್ಚಿಸಿ ಉಗ್ರ ಹೋರಾಟ ಮಾಡಲು ನಿರ್ಣಯಿಸಿದೆ. ಜು. 9ರ ಧರಣಿಯಲ್ಲಿ ಕಂಜರಬಾಟ ಸಮಾಜದ 25 ಜನರು ಭಾಗವಹಿಸಿದ್ದು, ಪ್ರತಾಪಸಿಂಗ ಕಂಜರಬಾಟ, ಜೈಸಿಂಗ್ ಕಂಜರಬಾಟ, ದ್ವಾಪಸಿಂಗ ಕಂಜರಬಾಟ ಮುಂತಾದವರು ನೇತೃತ್ವ ವಹಿಸಿದ್ದರಲ್ಲದೆ ಗುರುಪಾದ ಶಿರನಾಳ ಹಾಗೂ ಜಿಲ್ಲಾ ಸಮಿತಿಯ ಮುಖಂಡರು ಭಾಗವಹಿಸಿದ್ದರು.

ಬಿಡುವಿಲ್ಲದ ಹೋರಾಟಗಳ ವಾರ

ಮಂಗಳೂರು : ಜುಲೈ ಮೊದಲ ವಾರ ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ) ಮಂಗಳೂರು ತಾಲೂಕು ಸಮಿತಿಗೆ 'ಬಿಡುವಿಲ್ಲದ ಹೋರಾಟಗಳ ವಾರವಾಗಿತ್ತು.

ದಿನಾಂಕ 3ನೇ ಜುಲೈ 1993 ರಂದು ಮಂಗಳೂರು ತಾಲೂಕಾ ಮಟ್ಟದ ಅಧ್ಯಯನ ಶಿಬಿರ ನಡೆಸಲಾಗಿತ್ತು. ಶಿಬಿರದಲ್ಲಿ ಸಮುದಾಯ ಅಧ್ಯಕ್ಷರಾದ ಫಣಿರಾಜ್ ಅವರು 'ಶೈಕ್ಷಣಿಕ ಪರಿಸ್ಥಿತಿ ಮತ್ತು ವಿದ್ಯಾರ್ಥಿ ಚಳುವಳಿಯ ದಿಕ್ಕುದೆಸೆ' ಎನ್ನುವ ವಿಷಯದ ಬಗೆಗೆ ತರಗತಿ ನೀಡಿದರು. ಜಿಲ್ಲಾ ಕಾರ್ಯದರ್ಶಿ ಎಸ್. ರಾಜ್ ಕುಮಾರ್ ಸಂಘಟನೆಯ ಬಗ್ಗೆ ತರಬೇತಿ ನೀಡಿದರು. ತಾಲೂಕು ಅಧ್ಯಕ್ಷ ರಾಮ್‌ದಾಸ್ ವಾರ್ಷಿಕ ಯೋಜನೆಯನ್ನು ಇಟ್ಟರು. ತಾಲೂಕು ಕಾರ್ಯದರ್ಶಿ ಸುಕೇಶ್ ಸ್ವಾಗತಿಸಿ ವಂದಿಸಿದರು.

ಮಂಗಳೂರು ವಿ.ವಿ.ಯ ನೇರ ಅಧಿಕಾರ ವ್ಯಾಪ್ತಿಗೊಳಪಟ್ಟ ಸರಕಾರೀ ಕಾಲೇಜಿನಲ್ಲಿ ಪ್ರವೇಶಾವಕಾಶಕ್ಕೆ ಅನುಮತಿ ದೊರೆಯದಿದ್ದಾಗ

ಪುಟ 6ನೋಡಿ

ಪಶ್ಚಿಮಬಂಗಾಳ ದೇಶಕ್ಕೆ ಒಂದು ಪಾಠ........

ಗೇನೇ, ಏಕೆಂದರೆ ಜನತೆ ಸಾರ್ವಭೌಮರು ಎಂಬುದು ಇದರ ಹಿಂದಿರುವ ನೀತಿ" ಎಂದು ಈ ಸಮಾಜವಿಜ್ಞಾನಿ ಹೇಳುತ್ತಾರೆ.

ಪಂಚಾಯತುಗಳ ಮೂಲಕ ಸಾಕ್ಷರತೆ

ಗ್ರಾಮೀಣ ಅಭಿವೃದ್ಧಿ ಪ್ರಕ್ರಿಯೆಯಲ್ಲಿರುವ ಒಂದು ಪ್ರಮುಖ ಕೊರತೆಯೆಂದರೆ ವಿವಿಧ ಜಿಲ್ಲೆಗಳಲ್ಲಿ ಕೃಷಿಕೂಲಿ ಕಾರರ ಕನಿಷ್ಟ ಕೂಲಿಗಳಲ್ಲಿ ಇರುವ ಅಂತರ ಎಂದು ಮ್ಯಾಥ್ಯೂರವರ ಈ ಲೇಖನ ಅಭಿಪ್ರಾಯಪಟ್ಟಿದೆ. ಸಿಪಿಐ(ಎಂ) ಅಭ್ಯರ್ಥಿಗಳಿಗೆ ಇದರ ಅರಿವಿದೆಯೆಂದೂ ಗಮನಿಸಿರುವ ಅವರು ತಾವು ಸಂದರ್ಶಿಸಿದ ಒಬ್ಬ ಮಹಿಳಾ ಅಭ್ಯರ್ಥಿ ತಾನು ಚುನಾಯಿತಳಾದರೆ ತನ್ನ ಮೊದಲ ಕೆಲಸ ಎಲ್ಲರಿಗೂ ಸಮಾನ ಕೂಲಿಗಾಗಿ ಶ್ರಮಿಸುವುದು ಎಂದು ಹೇಳಿದುದನ್ನು ನೆನಪಿಸಿಕೊಳ್ಳುತ್ತಾರೆ. ಇನ್ನೊಂದು ಪ್ರಮುಖ ಸವಾಲೆಂದರೆ ಸಾಕ್ಷರತೆ. ಮುಂದಿನ ಐದು ವರ್ಷಗಳಲ್ಲಿ ಪಂಚಾಯತುಗಳ ಮೂಲಕ ಗ್ರಾಮೀಣ ಜನಸಮೂಹಗಳಲ್ಲಿ ಶಿಕ್ಷಣದ ಪ್ರಸಾರಕ್ಕೆ ಗಮನ ಕೇಂದ್ರೀಕರಿಸುವುದು ಎಂದು ಮುಖ್ಯಮಂತ್ರಿ ಜ್ಯೋತಿಬಸು ಚೇನೀ ಸಂದರ್ಶಕರೊಂದಿಗೆ ವಿಚಾರ ವಿನಿಮಯದಲ್ಲಿ ಹೇಳಿದುದಾಗಿ ಮ್ಯಾಥ್ಯೂ ತಿಳಿಸಿದ್ದಾರೆ.

ಪಶ್ಚಿಮಬಂಗಾಳ ಚುನಾವಣೆಗಳಲ್ಲಿ ಮಹಿಳೆಯರು ಅತ್ಯಂತ ಉತ್ಸಾಹದಿಂದ ಭಾಗವಹಿಸಿದ್ದು, ಮಹಿಳಾ ಅಭ್ಯರ್ಥಿಗಳ ದೊಡ್ಡ ಸಂಖ್ಯೆ, ಚುನಾವಣಾ ಕಾರ್ಯ ಸುಸೂತ್ರವಾಗಿ ನಡೆದದ್ದು ಹಾಗೂ ಮತಗಟ್ಟೆಗಳಲ್ಲಿ ಮತದಾರರ ಸ್ವಯಂಪ್ರೇರಿತ ಶಿಸ್ತು ಎಂದು ಚೀನೀ ಪ್ರತಿನಿಧಿಗಳ ಗಮನಸೆಳೆಯಿತು ಎಂದಿರುವ ಈ ಸಮಾಜವಿಜ್ಞಾನಿ ಕೂಡಾ ಗ್ರಾಮೀಣ ಪಶ್ಚಿಮಬಂಗಾಳದಲ್ಲಿ ಬುಡಮಟ್ಟದ ಪ್ರಜಾಪ್ರಭುತ್ವ ಬೇರು ಬಿಟ್ಟಿರುವುದನ್ನು ಕಂಡು ಪ್ರಭಾವಿತರಾಗಿದ್ದಾರೆ.

"ಚಳಿಗಳ ಧೂಳು ತುಂಬಿದ ರಸ್ತೆಗಳನ್ನು, ಮನೆಗಳನ್ನು, ಚಾವಡಿಗಳಲ್ಲಿ ಅಲಂಕರಿಸಿರುವ ಗೋಡೆ ಬರಹಗಳು, ಬಾವುಟಗಳು, ಪೋಸ್ಟರುಗಳು ಒಂದು ಬಾಹ್ಯ ಸಂದೇಶ ನೀಡುತ್ತವೆಯಷ್ಟೇ ಅಲ್ಲ, ಪ್ರಜಾಪ್ರಭುತ್ವದ ಬಗ್ಗೆ, ಹಿಂದು ಬಹುಪಕ್ಷೀಯ ವ್ಯವಸ್ಥೆಯಲ್ಲಿ ಪ್ರಜಾಪ್ರಭುತ್ವ ಶಕ್ತಿಯ ಬಗ್ಗೆ ಬಹಳಷ್ಟು ಅರ್ಥಪೂರ್ಣ" ಎನ್ನುತ್ತಾರೆ ಜಾರ್ಜ್ ಮ್ಯಾಥ್ಯೂ.

KRNM/BGS-405 MAG(2) PRB DECR 319-78/79

ನಾಗರೀಕ ನ್ಯಾಯಮಂಡಲಿಯ ತನಿಖಾ ಆಯೋಗ:

ಬಿಜೆಪಿಯದು ಎರಡು ನಾಲಗೆ ಕೇಂದ್ರ ಸರ್ಕಾರದ್ದು ಹೊಣೆಗೇಡಿತನ

ಬಾಬ್ರಿ ಮಸೀದಿಯನ್ನು ಧ್ವಂಸಮಾಡುವ ಯೋಜನೆ 'ಸಂಘಪರಿವಾರ'ಕ್ಕೆ ಇರಲಿಲ್ಲ, ಮಿತಿಮೀರಿದ ಕರಸೇವಕರಿಂದ ಆವೇಶದಲ್ಲಿ ಅದು ನಡೆದು ಹೋಯಿತು ಎಂದು ಭಾರತೀಯ ಜನಸಾಮಾನ್ಯರನ್ನು ನಂಬಿಸಲು 'ಸಂಘ ಪರಿವಾರ'ದ ಮುಖಂಡರು ಡಿಸೆಂಬರ್ 6 ರಿಂದಲೂ ವಿವಿಧ ಕಸರತ್ತುಗಳನ್ನು ನಡೆಸುತ್ತಲೇ ಬಂದಿದ್ದಾರೆ. ಬಹಳ ಮಂದಿ ಬಿಜೆಪಿಗೆ ಪರವಾಗಿದ್ದರೂ ಕೂಡಾ ಅದು ನಂಬಿದಂತಿಲ್ಲ. ಭಾರತ ಸರಕಾರದ ತನಿಖೆ ಆಮೆವೇಗದಿಂದ ಸಾಗುತ್ತಲೇ ಇದೆ. ಈ ನಡುವೆ ಒಂದು ಸ್ವತಂತ್ರ ತನಿಖಾ ಆಯೋಗದ ತೀರ್ಮಾನ "ಸಂಘ ಪರಿವಾರ" ಸುಳ್ಳು ಹೇಳುತ್ತಿದೆ ಎಂಬುದನ್ನು ಸಾಬೀತುಪಡಿಸಿದೆ.

ಆಯೋಧ್ಯಾ ಘಟನೆಗಳ ನಂತರ ನಿವೃತ್ತ ನ್ಯಾಯಾಧೀಶರುಗಳ ಮುಖಂಡತ್ವದಲ್ಲಿ ಒಂದು 'ನಾಗರಿಕ ನ್ಯಾಯಮಂಡಳಿ' ರಚನೆಗೊಂಡಿತು. ನಿವೃತ್ತ ಸುಪ್ರೀಂ ಕೋರ್ಟ್ ನ್ಯಾಯಾಧೀಶರುಗಳಾದ ಒ. ಚಿನ್ನಪ್ಪರೆಡ್ಡಿ ಹಾಗೂ ಡಿ.ಎ. ದೇಸಾಯಿ ಮತ್ತು ಕಲ್ಕತ್ತಾ ಹೈಕೋರ್ಟ್ ಮುಖ್ಯನ್ಯಾಯಾಧೀಶರಾಗಿದ್ದ ಡಿ.ಎಸ್. ತೇವಟಿಯಾ ಈ ನ್ಯಾಯ ಮಂಡಳಿಯ ಮುಖ್ಯಸ್ಥರು. ಈ ನ್ಯಾಯ ಮಂಡಳಿ ನೇಮಿಸಿದ ತನಿಖಾ ಆಯೋಗ ಫೆಬ್ರವರಿ 9 ರಂದು ಲಕ್ನೌ, ಫೆಬ್ರವರಿ 9 ರಿಂದ 11 ರವರೆಗೆ ಅಯೋಧ್ಯೆ ಮತ್ತು ಫೈಜಾಬಾದ್, 12 ಮತ್ತು 13 ರಂದು ಮತ್ತೆ ಲಕ್ನೌಗೆ ಭೇಟಿ ನೀಡಿ ತನಿಖೆ ನಡೆಸಿ ತನ್ನ ತೀರ್ಮಾನವನ್ನು ನ್ಯಾಯಾಮಂಡಳಿಗೆ ಸಲ್ಲಿಸಿತು. ಈ ತೀರ್ಮಾನ ಸಿಪಿಐ(ಎಂ) ಮತ್ತಿತರ ಜಾತ್ಯಾತೀತ ಶಕ್ತಿಗಳ ಅಭಿಪ್ರಾಯವನ್ನು ದೃಢೀಕರಿಸಿದೆ. ಡಿಸೆಂಬರ್ 6 ರಂದು ಬಾಬ್ರಿ ಮಸೀದಿಯ ಧ್ವಂಸ ಕಾರ್ಯ ಪೂರ್ವ ಯೋಜಿತವಾಗಿತ್ತು ಎಂದಿದೆ. ಇದಕ್ಕೆ ಉತ್ತರಪ್ರದೇಶ ರಾಜ್ಯ ಸರಕಾರ ಮಾಡಿದ ಕೃತ್ಯಗಳು ಹಾಗೂ ಕೇಂದ್ರಸರಕಾರ ಮಾಡದೇ ಇದ್ದ ಕೆಲಸಗಳು ಕಾರಣ ಎಂದು ಅದು ಹೇಳಿದೆ.

ಬಿಹಾರದ ಮಾಜೀ ಮುಖ್ಯಕಾರ್ಯದರ್ಶಿ ಕಮಲಾ ಪ್ರಸಾದ್ ಮುಖಂಡತ್ವದ ಈ ತನಿಖಾ ಆಯೋಗದಲ್ಲಿದ್ದ ಇತರರು ಶ್ರೀಮತಿ ಕೀರ್ತಿ ಸಿಂಗ್, ಪ್ರೊ. ದಿನೇಶ್ ಮೋಹನ್, ಶ್ರೀಮತಿ ಸಾಗರಿ ಛಾಬ್ರಾ, ಪ್ರೊ. ಎಸ್.ಸಿ. ಶುಕ್ಲಾ ಹಾಗೂ ಡಾ. ಕಮಲ್ ಎ. ಮಿತ್ರಾ ಚಿನೋಯ್.

ನ್ಯಾಯಮಂಡಳಿ ಜುಲೈ 6 ರಂದು ದೆಹಲಿಯಲ್ಲಿ ಸಾರ್ವಜನಿಕ ವಿಚಾರಣೆ ಆರಂಭಿಸಿದಾಗ ತನಿಖಾ ಆಯೋಗ ತನ್ನ ವರದಿಯನ್ನು ಸಲ್ಲಿಸಿತು. 'ಸಂಘಪರಿವಾರ' ಮುಖಂಡರ ಹೇಳಿಕೆಗಳು ಸ್ಪಷ್ಟವಾಗಿ ರಾಜಕೀಯ ಉದ್ದೇಶದಿಂದ ಕೂಡಿವೆ. ಕಾನೂನಿನ ಉಲ್ಲಂಘನೆಯ ಹೊಣೆ ಹೇಗೆ ತಪ್ಪಿಸಿಕೊಳ್ಳಲು ಅವರು ಹೀಗೆ ಹೇಳುತ್ತಿದ್ದಾರೆ ಎಂದು ತನಿಖಾ ಆಯೋಗ ಹೇಳಿದೆ. 'ಸಂಘಪರಿವಾರ' ಸಾರ್ವಜನಿಕವಾಗಿ ಮತ್ತೆ ಮತ್ತೆ ಮಸೀದಿಯನ್ನು ಧ್ವಂಸಮಾಡುವುದಾಗಿ ಹೇಳಿತ್ತು. ಕೇಂದ್ರ ಸರಕಾರ, ಸಂಸತ್ತು, ಎಲ್ಲಾ ರಾಜಕೀಯ ಪಕ್ಷಗಳು ಹಾಗೂ ಪತ್ರಿಕಾ ರಂಗಕ್ಕೆ ಇದರ ಅರಿವಿತ್ತು. ಆದರೂ ನಿರ್ಣಾಯಕ ಕ್ರಮ ಕೈಗೊಳ್ಳುವಲ್ಲಿ ಹಿಂಜರಿದರು ಎಂದು ತನಿಖಾ ಆಯೋಗ ಹೇಳಿದೆ.

ಕೇಂದ್ರ ಸರಕಾರದ ಅತ್ಯುನ್ನತ ಹುದ್ದೆಗಳಲ್ಲಿರುವವರೂ, ಸರಕಾರದ ಶ್ವೇತಪತ್ರವು ಏನೇ ನಿರಾಕರಣೆ ನೀಡಿದರೂ ಕೇಂದ್ರ ಹಾಗೂ ರಾಜ್ಯ ಗುಪ್ತಚಾರ ಸಂಸ್ಥೆಗಳು ಹಾಗೂ ಸ್ಥಳೀಯ ಪೋಲೀಸ್ ವಿವರವಾದ ವರದಿಗಳನ್ನು, ಮಸೀದಿ ಧ್ವಂಸದ ಯೋಜನೆಯ ವಿವರವಾದ ವರದಿಯನ್ನು ನವಂಬರ್ 26 ರೊಳಗೆ ಕೇಂದ್ರ ಸರಕಾರಕ್ಕೆ ಕಳಿಸಿದ್ದವು ಎನ್ನುವುದಕ್ಕೆ ಪುರಾವೆಗಳಿವೆ. ಕೇಂದ್ರ ಸರಕಾರ ಸುಪ್ರೀಂಕೋರ್ಟಿಗೂ ಇದನ್ನು ತಿಳಿಸಲಿಲ್ಲ ಎಂದು ಆಯೋಗ ಅಭಿಪ್ರಾಯಪಟ್ಟಿದೆ.

ಪರಿಸ್ಥಿತಿಯ ಪರಿಶೀಲನೆ ಮಾಡಿ ಮಧ್ಯಪ್ರವೇಶಿಸುವುದಕ್ಕೆ ಕೇಂದ್ರ ಸರಕಾರದ ಮೇಲೆ ಯಾವ ತಡೆಯೂ ಇಲ್ಲ ಎಂದು ಸುಪ್ರೀಂ ಕೋರ್ಟ್ ಹೇಳಿದ ಮೇಲೂ ಕೇಂದ್ರ ಸರಕಾರ ಉತ್ತರ ಪ್ರದೇಶ ಸರಕಾರಕ್ಕೆ ಹಲವು ಪತ್ರಗಳನ್ನು ಕಳಿಸಿದ್ದಲ್ಲದೆ ಬೇರೇನೂ ಕ್ರಮ ಕೈಗೊಂಡಂತಿಲ್ಲ ಎಂದು ಆಯೋಗ ಹೇಳಿದೆ.

ಪತ್ರಕರ್ತರೂ ಅಯೋಧ್ಯೆಯಲ್ಲಿ ಮುಂಬರಲಿದ್ದ ಮರಂತದ ಬಗ್ಗೆ ಹಲವು ಸಂಕೇತಗಳು ಕಂಡು ಬರುತ್ತಿದ್ದರೂ ಅದಕ್ಕೆ ಪ್ರಚಾರ ಕೊಡಲು ಹಿಂಜರಿದರು ಎಂದು ಗಮನಿಸಿರುವ ತನಿಖಾ ಆಯೋಗ 'ಸಂಘಪರಿವಾರ'ದ ಜನರ ಎರಡೆರಡು ದನಿಗಳನ್ನು ಎಷ್ಟೊಂದು ಬಾರಿ ಕೇಳಿದ್ದೆವೆಂದರೆ 'ಸಂಘಪರಿವಾರ' ಏನೇ ಕೋಮುವಾದಿ, ಭಾವೋದ್ರೇಕಕಾರಿ ಶಬ್ದಜಾಲ ಬಳಸಿದರೂ ತನ್ನ ಬೆದರಿಕೆಯನ್ನು ಜಾರಿಮಾಡಲಿಕ್ಕಿಲ್ಲ ಎಂದು ತಾವು ನಂಬಿದುದಾಗಿ ಪತ್ರಕರ್ತರು ನಮಗೆ ತಿಳಿಸಿದರು ಎಂದಿದೆ.

ಡಿಸೆಂಬರ್ 6 ರ ಸಂಜೆ ರಾಷ್ಟ್ರಪತಿ ಆಳ್ವಿಕೆ ಹೇರಿದರೂ ಆಸ್ತಿ-ಪಾಸ್ತಿಗಳನ್ನು, ಪೂಜಾಸ್ಥಳಗಳನ್ನು ರಕ್ಷಿಸಲು ಯಾವುದೇ ಗಮನಾರ್ಹ ಕ್ರಮ ಕೈಗೊಳ್ಳಲಿಲ್ಲ ಎಂದೂ ತನಿಖಾ ಆಯೋಗ ಹೇಳಿದೆ.

ಬಿಜೆಪಿ ವಕ್ತಾರರ ಪೀಕಲಾಟ

ನ್ಯಾಯಾಮಂಡಳಿಯ ವಿಚಾರಣೆಯ ಸಮಯದಲ್ಲಿ ಅಡ್ವಾಣಿಯವರು ಬಾಬ್ರಿಮಸೀದಿಯ ಧ್ವಂಸವಾಗುವವರೆಗೆ ಕಲ್ಯಾಣ್‌ಸಿಂಗ್ ರಾಜೀನಾಮೆ ಕೊಡದಂತೆ ತಡೆದರು ಎಂದು ಇಬ್ಬರು ಪತ್ರಕರ್ತರು ನೀಡಿದ ವಿವರಣೆಯಿಂದ ಕುಪಿತರಾದ ಅಡ್ವಾಣಿಯವರು ಒಂದು ನಿರಾಕರಣೆ ಹೇಳಿಕೆ ಕಳಿಸಿದರು. ಅದರಲ್ಲಿ ಕಲ್ಯಾಣ್‌ಸಿಂಗ್ ರಾಜೀನಾಮೆ ನೀಡುವುದನ್ನು ತಾನು ಒಂದು ಗಂಟೆ ತಡೆದುದಾಗಿ ಒಪ್ಪಿಕೊಂಡರೂ ಅದು ಮಸೀದಿಯ ಗುಮ್ಮಟಗಳ ಮೇಲೆ ಹತ್ತಿದ ಕರಸೇವಕರನ್ನು ಇಳಿಯುವಂತೆ ಮಾಡಲು ಸಮಯಾವಕಾಶಕ್ಕಾಗಿ ಎಂದು ಸಮಜಾಯಿಷಿನೀಡಿದ್ದರು. ಆದರೆ ಈ ಹೇಳಿಕೆಯನ್ನು ಬಹಿರಂಗಪಡಿಸಿದ ಬಿಜೆಪಿ ಪತ್ರಿಕಾ ಸಮ್ಮೇಳನದಲ್ಲಿ ಪತ್ರಕರ್ತರ ಪ್ರಶ್ನೆಗಳಿಗೆ ಬಿಜೆಪಿ ವಕ್ತಾರ ಕೆ.ಎಲ್ ಶರ್ಮಾರು ನೀಡಬೇಕಾದ ಉತ್ತರಗಳೇ ಅಡ್ವಾಣಿಯವರ ಈ ಹೇಳಿಕೆಯೂ ಸುಳ್ಳು ಎಂಬುದನ್ನು ಸಾಬೀತು ಪಡಿಸಿದವು. ಕಲ್ಯಾಣ್ ಸಿಂಗ್ 5 ಗಂಟೆಯ ವೇಳೆಗೆ ರಾಜಿನಾಮೆ ನೀಡಿದರು. ಅದಕ್ಕೆ ಒಂದು ಗಂಟೆಯ ಮೊದಲು ಅಡ್ವಾಣಿಯವರು ತಮ್ಮ 'ಪ್ರಯತ್ನ' ಸಫಲವಾಗಿಲ್ಲ ಎಂದು ಅವರಿಗೆ ತಿಳಿಸಿದರಂತೆ. ಅಡ್ವಾಣಿಯವರಿಗೆ ತಮ್ಮ 'ವಿಫಲತೆ' ಅರಿಯಲು ಅಷ್ಟು ಸಮಯಬೇಕಾಯಿತೇ ಎಂದು ಪತ್ರಕರ್ತರು ಪ್ರಶ್ನಿಸಿದಾಗ ಶರ್ಮಾರವರು ಸುಮಾರು 2-30 ಕ್ಕೆ ಅಡ್ವಾಣಿಯವರು ಕಲ್ಯಾಣ್ ಸಿಂಗ್‌ಗೆ ಫೋನ್‌ಮೂಲಕ ತಿಳಿಸಿದ್ದರು ಎಂದರು. ಆದರೆ ಆಗಲೇ ಎರಡು ಗುಮ್ಮಟಗಳು ಬಿದ್ದಾಗಿತ್ತಲ್ಲಾ ಎಂದಾಗ ಶರ್ಮಾರವರಿಗೆ ಮತ್ತೆ ಪೀಕಲಾಟ. ಈ ಪತ್ರಿಕಾ ಸಮ್ಮೇಳನ ಫೋನ್ ಮಾಡಿದ ಸಮಯ ತಿಳಿಸಲಿಕ್ಕಲ್ಲ ಅಡ್ವಾಣಿಯವರ ಹೇಳಿಕೆಯನ್ನು ತಿಳಿಸಲು ಎಂದು ಮುಕ್ತಾಯಮಾಡಿದರು.

ಗ್ರಾಹಕ ಬೆಲೆ ಸೂಚ್ಯಂಕ

ಕರ್ನಾಟಕ ಸರಕಾರದ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ ಪ್ರಕಟಿಸಿರುವ ರಾಜ್ಯದ ವಿವಿಧ ಕೇಂದ್ರಗಳಲ್ಲಿ ಮಾರ್ಚ್ ಹಾಗೂ ಎಪ್ರಿಲ್ ತಿಂಗಳುಗಳ ಔದ್ಯಮಿಕ ಕಾರ್ಮಿಕರ ಗ್ರಾಹಕ ಬೆಲೆ ಸೂಚ್ಯಂಕಗಳು ಹೀಗಿವೆ.

ಕ್ರ.ಸಂ. ರಾಜ್ಯ ಸರಣಿ	ಕೇಂದ್ರಗಳು 1987-88ರ ಬೆಲೆಗಳಲ್ಲಿ	ಮಾರ್ಚ್ 1993ರ ಸೂಚ್ಯಂಕ 1960ರ ಬೆಲೆಗಳಲ್ಲಿ	ಎಪ್ರಿಲ್ 1993ರ ಸೂಚ್ಯಂಕ 1987-88ರ ಬೆಲೆಗಳಲ್ಲಿ	1960ರ ಬೆಲೆಗಳಲ್ಲಿ
1. ಬಳ್ಳಾರಿ	164	1212	162	1197
2. ಭದ್ರಾವತಿ	154	1415	154	1415
3. ದಾವಣಗೆರೆ	163	1348	166	1373
4. ಗುಲ್ಬರ್ಗಾ	162	1338	161	1330
5. ಹಾಸನ	149	1378	148	1369
6. ಮಂಡ್ಯ	160	1267	162	1283
7. ಮಂಗಳೂರು	159	1480	160	1490
8. ಮೈಸೂರು	152	1376	152	1376
9. ತುಮಕೂರು	146	---	146	---
10. ದಾಂಡೇಲಿ	161	---	161	---
11. ರಾಯಚೂರು	160	---	159	---
ಕೇಂದ್ರ ಸರಣಿ	1982ರ ಬೆಲೆಗಳಲ್ಲಿ	1960ರ ಬೆಲೆಗಳಲ್ಲಿ	1982ರ ಬೆಲೆಗಳಲ್ಲಿ	1960ರ ಬೆಲೆಗಳಲ್ಲಿ
12. ಬೆಂಗಳೂರು	241	1364	243	1375
13. ಬೆಳಗಾಂ	247	1398	246	1392
14. ಹುಬ್ಬಳ್ಳಿ-ಧಾರಾವಾಡ	252	1426	253	1432
15. ಮಡಿಕೇರಿ	235	1330	237	1341
ಅಖಿಲಭಾರತ	*243*	*1198*	*245*	*1208*

ಖ್ಯಾತ ಅರ್ಥಶಾಸ್ತ್ರಜ್ಞ ಡಾ. ಅಶೋಕ ಮಿತ್ರ ಲೇಖನದ ಸಂಗ್ರಹ

ಎರಡು ವರದಿಗಳು : ಎರಡು ಮುಖಗಳು

ಇತ್ತೀಚೆಗೆ ಎರಡು ಜಾಗತಿಕ ಮಟ್ಟದ ಸಂಸ್ಥೆಗಳು ಎರಡು ವರದಿಗಳನ್ನು ಬಿಡುಗಡೆ ಮಾಡಿವೆ. ಒಂದು ವಿಶ್ವಸಂಸ್ಥೆಯ ಅಭಿವೃದ್ಧಿ ಕಾರ್ಯಕ್ರಮ ಎಂಬ ಸಂಸ್ಥೆಯದು. ಇನ್ನೊಂದು ಅಂತರ್‌ರಾಷ್ಟ್ರೀಯ ಹಣಕಾಸು ಸಂಸ್ಥೆ - ಐಎಂಎಫ್‌ನದು. ಸ್ವಾರಸ್ಯವೆಂದರೆ ಇವೆರಡೂ ಬೇರೆ ಬೇರೆ ದೃಷ್ಟಿಕೋಣದಿಂದ ಭಾರತವನ್ನು ನೋಡಿರುವುದು.

ವಿಶ್ವಸಂಸ್ಥೆ ಮಾನವನ ಅಭ್ಯುದಯದ ಮಾಪಕಗಳಾದ ಸಾಕ್ಷರತೆ, ಜೀವನದ ಅವಧಿ, ಆರೋಗ್ಯ, ಪೌಷ್ಠಿಕ ಆಹಾರ ಬಳಕೆ, ಶೈಕ್ಷಣಿಕ ಮಟ್ಟ ಇತ್ಯಾದಿಗಳನ್ನು ಅಳತೆಗೋಲಾಗಿ ಬಳಸಿದೆ. ಸಾಮಾಜಿಕ ಹಿತಕ್ಕಾಗಿ ಸಾರ್ವಜನಿಕ ವೆಚ್ಚದ ಪ್ರಮಾಣ, ಮಾನವ ಹಕ್ಕುಗಳ ಗುಣ ಇವೂ ಅದರ ಅಳತೆಗೋಲುಗಳು. ಈ ವರದಿಯ ಪ್ರಕಾರ ಜಗತ್ತಿನ 173 ದೇಶಗಳಲ್ಲಿ ಭಾರತಕ್ಕೆ 134 ನೇ ಸ್ಥಾನ ಅಥವಾ ಕೆಳಗಿನಿಂದ ನಲವತ್ತನೇ ಸ್ಥಾನ.

ಐಎಂಎಫ್ ತನ್ನ 'ಸ್ಥಿತಿ ವರದಿ'ಯಲ್ಲಿ ಭಾರತವನ್ನು ಆರನೇ ಸ್ಥಾನದಲ್ಲಿರಿಸಿದೆ. ಇದು ಹೇಗೆ ಸಾಧ್ಯ ಎನ್ನುವಿರಲ್ಲವೇ? ಅದು ಐಎಂಎಫ್ ಚಮತ್ಕಾರ. ಐಎಂಎಫ್ ರಾಷ್ಟ್ರೀಯ ಉತ್ಪನ್ನವನ್ನು ಬೇರೊಂದು ವಿಧಾನದಲ್ಲಿ ಅಳೆದಿದೆ. ಸಾಂಪ್ರಾದಾಯಿಕ ವಿಧಾನದಲ್ಲಿ ರಾಷ್ಟ್ರೀಯ ವರಮಾನವನ್ನು ರೂಪಾಯಿಗಳಲ್ಲಿ ಅಳೆಯಲಾಗುತ್ತದೆ. ಅನಂತರ ಇದನ್ನು ಅಮೇರಿಕದ ಡಾಲರುಗಳಿಗೆ ಅಧಿಕೃತ ವಿನಿಮಯ ದರದಲ್ಲಿ ಪರಿವರ್ತಿಸಲಾಗುತ್ತದೆ. ಉದಾಹರಣೆಗೆ ನಮ್ಮ ದೇಶದ ತಲಾ ಆದಾಯ ಈಗ 10,000 ರೂಪಾಯಿಗಳು. ಈಗ ಡಾಲರಿನ ರೂಪಾಯಿ ವಿನಿಮಯ ದರ ಸುಮಾರು 30 ರೂಪಾಯಿಗಳು. ಅಂದರೆ ಈ ಹತ್ತು ಸಾವಿರ ರೂಪಾಯಿಗಳು 330 ಡಾಲರುಗಳಾಗುತ್ತವೆ.

ಐಎಂಎಫ್‌ನ ಹೊಸ ವಿಧಾನ ಈ ರೀತಿಯಿದೆ. ಕೆಲವು ಪ್ರಾತಿನಿಧಿಕ ವಸ್ತುಗಳನ್ನು ಆಯ್ದುಕೊಳ್ಳುವುದು. ಈ ವಸ್ತುಗಳನ್ನು ಒಂದು ನಿರ್ದಿಷ್ಟ ಪ್ರಮಾಣದಲ್ಲಿ ಅಮೇರಿಕದಲ್ಲಿ ಕೊಳ್ಳುವುದಾದಲ್ಲಿ ಎಷ್ಟು ಡಾಲರುಗಳು ಬೇಕು? ಇವೇ ವಸ್ತುಗಳನ್ನು ಭಾರತದಲ್ಲಿ ಅದೇ ಪ್ರಮಾಣದಲ್ಲಿ ಕೊಳ್ಳುವುದಾದರೆ ಎಷ್ಟು ರೂಪಾಯಿಗಳು ಬೇಕು ಎಂಬುದನ್ನು ಈ ಅಳತೆಗೋಲಿನ ಪ್ರಕಾರ ಅಮೇರಿಕದಲ್ಲಿ ಮೂರೂವರೆ ಡಾಲರುಗಳಿಗೆ ಮೇಲಿನ ವಸ್ತುಗಳನ್ನು ಯಾವ ಪ್ರಮಾಣದಲ್ಲಿ ಕೊಳ್ಳಬಹುದು ಅವೇ ವಸ್ತುಗಳನ್ನು ಅದೇ ಪ್ರಮಾಣದಲ್ಲಿ 30 ರೂಪಾಯಿಗಳಿಗೆ ಭಾರತದಲ್ಲಿ ಕೊಳ್ಳಬಹುದು ಅಂದರೆ ಡಾಲರಿನ ವಿನಿಮಯ ಬೆಲೆ 3.5 ಡಾಲರಿಗೆ 30 ರೂಪಾಯಿಗಳು. ಅಂದರೆ ಅಜಮಾಸು 1 ಡಾಲರ್ ಎಂದರೆ 9 ರೂಪಾಯಿ.

ಈಗ ಈ ಅಳತೆಗೋಲಿನ ಪ್ರಕಾರ 10000 ರೂಪಾಯಿಗಳೆಂದರೆ 1150 ಡಾಲರುಗಳು. ತಲಾ ವರಮಾನ 1150 ಡಾಲರುಗಳಾದರೆ 88 ಕೋಟಿ ಜನರಿರುವ ನಮ್ಮ ದೇಶದಲ್ಲಿ ಒಟ್ಟು 1000 ಶತಕೋಟಿ ಡಾಲರುಗಳು. ಈ ಲೆಕ್ಕದಿಂದಲೇ ಭಾರತ ಜಾಗತಿಕ ಮಟ್ಟದಲ್ಲಿ ಆರನೇ ಸ್ಥಾನದಲ್ಲಿರುವುದು.

ಈ ಅಳತೆಗೋಲಂತೂ ಅತ್ಯಂತ ಸಮಂಜಸ ಎನಿಸುವುದಿಲ್ಲವೆ? ಹೌದು ಇದನ್ನೇ ತರ್ಕಬದ್ಧವಾಗಿ ಮುಂದುವರೆಸಿಕೊಂಡು ಹೋದರೆ ಸಮಸ್ಯೆ ಬರುವುದು. ವಾಸ್ತವ ಹೀಗಿರುವಾಗ ಡಾಲರ್-ರೂಪಾಯಿ ವಿನಿಮಯ ದರದಲ್ಲಿ 1 :17 ರ ಅನುಪಾತದಲ್ಲಿದ್ದಾಗ ಐ.ಎಂಎಫ್ ರೂಪಾಯಿಯ ಅಪಮೌಲ್ಯೀಕರಣ ಮಾಡಿ 1:22 ರ ಅನುಪಾತಕ್ಕೆ ತರುವಂತೆ ಒತ್ತಾಯ ಮಾಡಲಿಲ್ಲವೆ? ಯಾಕೆ?

ನಮ್ಮ ವಿದೇಶಿ ವಿನಿಮಯ ದರವನ್ನೇ 1 ಡಾಲರಿಗೆ 9 ರೂಪಾಯಿಗಳಂತೆ ನಿಗದಿ ಮಾಡಲು ಏಕೆ ಸಾಧ್ಯವಿಲ್ಲ? ರೂಪಾಯಿಯ ಅಪಮೌಲ್ಯೀಕರಣಕ್ಕೆ ಐ.ಎಂ.ಎಫ್ ನೀಡುವ ಸಮರ್ಥನೆ ಗೊತ್ತಲ್ಲವೆ? 'ಭಾರತದಲ್ಲಿ ವಸ್ತುಗಳ, ಸೇವೆಗಳ ಬೆಲೆ ಇಳಿದರೆ ಅದರಿಂದ ಭಾರತದ ರಫ್ತು ಹೆಚ್ಚುತ್ತದೆ ಮತ್ತು ವ್ಯಾಪಾರ ಬಾಕಿ ಕಡಿಮೆಯಾಗುತ್ತದೆ' ಎಂಬುದು ಅದರ ವಾದ. ಆದರೆ ವಾಸ್ತವದಲ್ಲಂತೂ ಹಾಗೇ ಆಗಿಲ್ಲ. ನಮ್ಮ ರಫ್ತಿನ ಪ್ರಮಾಣ ಹೆಚ್ಚಿಸದೇ ಇಂದು ಹೇಳುತ್ತಲೇ ಇದ್ದೇವೆ. ಆದರೆ ಅದು ಸಾಧಿತವಾಗಿಲ್ಲ.

ಈಗ ಈ ಹೊಸ ಅಳತೆಗೋಲನ್ನು ನಮ್ಮ ವಿದೇಶೀ ಸಾಲಗಳನ್ನು ಅಳೆಯಲು ಬಳಸಿದರೆ ಹೇಗೆ? ಪರಿಣಾಮ ಅದ್ಭುತವಾಗಿರುತ್ತದೆ. ಈಗಿನ ನಮ್ಮ ವಿದೇಶೀ ಸಾಲದ ಹೊರೆ 90 ಬಿಲಿಯನ್ ಡಾಲರುಗಳು. ಹೊಸ ಅಳತೆ ಗೋಲಿನಿಂದ ಅಳೆದರೆ ನಮ್ಮ ವಿದೇಶೀ ಸಾಲದ ಹೊರೆ ಬರೇ 25 ಬಿಲಿಯನ್ ಡಾಲರುಗಳಿಗಿಳಿಯುತ್ತದೆ. ಇದು ಭಾರತದಂತಹ ಬೃಹತ್ ರಾಷ್ಟ್ರಕ್ಕೆ ದೊಡ್ಡ ಹೊರೆಯಾಗುವುದಿಲ್ಲ. ಅಧಿಕೃತ ವಿನಿಮಯ ದರವೂ ಇದೇ ಆದರೆ ವ್ಯಾಪಾರ ಬಾಕಿ ಏರುವ ಪ್ರಶ್ನೆ ಉಳಿಯುವುದೇ ಇಲ್ಲ. ನಮ್ಮ ಸಾಂಪ್ರಾದಾಯಿಕ ರಫ್ತಿನ ವಸ್ತುಗಳಾದ ಸಾಂಬಾರ ಜಿನಸುಗಳು, ಜವಳಿ, ಕಾಫಿ, ಚಹ, ಇತ್ಯಾದಿಗಳನ್ನು ರಫ್ತು ಮಾಡುವದರಿಂದಲೇ ನಮ್ಮ ಆಮದಿನ ಅವಶ್ಯಕತೆಗಳನ್ನು ಪೂರೈಸಬಹುದಲ್ಲದೆ ಸಾಲ ಮರುಪಾವತಿಯನ್ನು ಸುಲಭವಾಗಿ ಮಾಡಬಹುದು.

ಐ.ಎಂಎಫ್ ತಾನೇ ನೀಡಿರುವ ಅಸ್ತ್ರ ಇದು. ನಮ್ಮ ದಿಲ್ಲಿಯ ಧಣಿಗಳು ಎಚ್ಚೆತ್ತುಕೊಂಡು ಇದೇ ವಿನಿಮಯ ದರವನ್ನು ನಿರ್ಧರಿಸಲು ಐ.ಎಂ.ಎಫ್ ಅನ್ನು ಒತ್ತಾಯಿಸಬೇಕು. ಅಂದರೆ ನಮ್ಮ ವ್ಯಾಪಾರ ಬಾಕಿ ಮತ್ತು ವಿದೇಶೀ ಸಾಲದ ಸಮಸ್ಯೆಗಳು ಪರಿಹಾರವಾಗುತ್ತದೆ. ಐ.ಎಂಎಫ್. ವಿಶ್ವಬ್ಯಾಂಕ್‌ಗಳ ಕೈಯಲ್ಲಿ ದಾಳವಾಗಿರುವ ಕೇಂದ್ರ ಸರಕಾರ ತನ್ನ ಧಣಿಗಳ ಮೇಲೆ ಈ ಒತ್ತಾಯ ಹೇರುವ ಧೈರ್ಯ ತೋರಿತೆ ಎಂಬುದು ಪ್ರಶ್ನೆ.

ಆದರೆ ನಮ್ಮ ಕೇಂದ್ರ ಸರ್ಕಾರದ ತೊಂದರೆಗಳು ಎಲ್ಲರಿಗೂ ಗೊತ್ತಿರುವುದೇ.

ಮೊದಲನೆಯದಾಗಿ ಅದು ಇಂತಹ ಬೇಡಿಕೆ ಸಲ್ಲಿಸಲು ಐಎಂಎಫ್- ವಿಶ್ವಬ್ಯಾಂಕ್ ಅನುಮತಿ ಅಗತ್ಯವೆಂದುಕೊಂಡಿರಬಹುದು. ಎರಡನೆಯದಾಗಿ ಇಂತಹ ಬೇಡಿಕೆಗಳನ್ನು ಮುಂದಿಡುವುದರಿಂದ ಮುಂದೆ ಜಾಗತಿಕ ಮಟ್ಟದಲ್ಲಿ ಎಲ್ಲೂ ಸಾಲ ದೊರೆಯದಂತಾಗಬಹುದೆಂಬ ಭಯ.

"ಅವರನ್ನು ಕಟಕಟೆಗೆ ಎಳೆತನ್ನಿ"

ಪುಟ 1ರಿಂದ

ಈ ರಾಜ್ಯದ ರೈತರ ಮತ ಪಡೆದ ನೀವು ಯಾರ ಕಡೆ?

ಕರ್ನಾಟಕದ ರೈತರು, ಕೃಷಿಕೂಲಿಕಾರರು ಡಂಕೆಲ್ ಪ್ರಸ್ತಾಪಗಳ ವಿರುದ್ಧ ಈಗಾಗಲೇ ದಿಟ್ಟ ಪ್ರತಿಭಟನೆ ವ್ಯಕ್ತ ಪಡಿಸಿದ್ದಾರೆ. ರಸಗೊಬ್ಬರಗಳ ಬೆಲೆ ಏರಿಕೆ ವಿರುದ್ಧ ಸಿಡಿದೆದ್ದಿದ್ದಾರೆ. ಹತ್ತಿ, ಭತ್ತ, ರೇಷ್ಮೆ ಬೆಲೆ ಇಳಿಕೆಯಿಂದ ತತ್ತರಿಸುತ್ತಿದ್ದಾರೆ.

ಬರಗಾಲದ ದವಡೆಗೆ ತುತ್ತಾಗಿದ್ದಾರೆ. ಕೇಂದ್ರ ಸರ್ಕಾರ ಯಾವುದೇ ಬರಗಾಲ ಪರಿಹಾರವನ್ನು ಇಲ್ಲಿಯವರೆಗೆ ಘೋಷಿಸಿಲ್ಲ. ಇದೆಲ್ಲಾ ಐ.ಎಂ.ಎಫ್ ಶರತ್ತುಗಳಿಗೆ ಮಣಿದ ಕೇಂದ್ರ ಸರ್ಕಾರದ ನೀತಿಗಳ ಫಲ. ಡಂಕೆಲ್ ಪ್ರಸ್ತಾಪಗಳಿಗೆ ಗುಲಾಮರಾಗಲು ಅಣಿಯಾಗುತ್ತಿರುವುದರ ಫಲ.

ಬೇರೆ ರಾಜ್ಯಗಳ ಎಂ.ಪಿ.ಗಳು ಎಡ-ರಾಷ್ಟ್ರೀಯ ರಂಗದವರು ಈ ರಾಜ್ಯದ ಗ್ರಾಮೀಣ ಜನತೆಗೂ ದನಿಯಾಗುತ್ತಿದ್ದಾರೆ. ಹೇಳಿ, ಈ ರೈತರ, ಕೂಲಿಕಾರರ ಮತಪಡೆದ ನೀವು ಏನು ಮಾಡುತ್ತೀರಿ ಹೇಳಿ?

ಭ್ರಷ್ಟತೆಯ ಉತ್ತುಂಗಶಿಖರ - ನರಸಿಂಹರಾಯರು

ಭಾರತವನ್ನು ದಿವಾಳಿಯೆಬ್ಬಿಸುವ ಈ ಆರ್ಥಿಕ ನೀತಿಗಳು ನಮ್ಮ ದೇಶದ ಅಭಿವೃದ್ಧಿಗೆ ಅತ್ಯುತ್ತಮ ದಾರಿಯೆಂದು ಸಾಧಿಸಲು ಬ್ಯಾಂಕುಗಳ ಮೇಲಿನ ಹಿಡಿತವನ್ನು ಸಡಿಲಗೊಳಿಸಿದರು. ಶೇರು ಮಾರ್ಕೆಟ್‌ನಲ್ಲಿ ಮಟ್ಕಾ ಆಟಕ್ಕೆ ಉತ್ತೇಜನ ನೀಡಿದರು. ಈ ಶೇರು ಹಗರಣವೆಂಬ ಈ ಜೂಜಾಟ ಬ್ಯಾಂಕ್‌ಗಳನ್ನು ದಿವಾಳಿ ಎಬ್ಬಿಸಿ 5,000 ಕೋಟಿ ರೂ ಹಣವನ್ನು ಮಂಗಮಾಯಮಾಡಿತು. ಹೊಸ ಆರ್ಥಿಕ ನೀತಿಗಳಿಂದ ದೇಶಕ್ಕೂ ಇದೇ ಗತಿ ಕಾದಿದೆ ಎಂದು ತೋರಿಸಿತು.

ಹೊಸ ಆರ್ಥಿಕ ನೀತಿಯೆಂದರೆ ಅಧಿಕಾರಶಾಹಿ ಹಾಗೂ ಶೇರು ದಲ್ಲಾಳಿಗಳು ರಾಜಕಾರಣಿಗಳೊಂದಿಗೆ ಸೇರಿ ನಡೆಸುವ ಲೂಟಿ ಎಂದು ಸಾಬೀತುಪಡಿಸಿತು.

ಇದರೊಡನೆ ಚಿದಂಬರ್‌ರಂತಹ ಕೇಂದ್ರದ ಮಂತ್ರಿಗಳ ನೇರಭಾಗಿದಾರಿಕೆಯ ಕತೆಯಿಂದ ಆರಂಭವಾಗಿ ಅಲ್ಲಿ ಇಲ್ಲಿ ಸುತ್ತಿ ಪ್ರಧಾನಿಯವರ ಮಗನ ಗೋಲ್ಡ್‌ಸ್ಟಾರ್ ಕಂಪನಿಗೆ ಹತ್ತಿಕೊಂಡ ಉರುಳು ಈಗ ನೇರವಾಗಿ ಪ್ರಧಾನಿಯವರ ಕೊರಳಿಗೆ ಒಂದು ಕೋಟಿರೂಗಳ ನೇಣಾಗಿ ಸುತ್ತಿಕೊಂಡಿದೆ. ಪ್ರತಿಯೊಂದು ಹಂತದಲ್ಲಿಯೂ ಹಗರಣವನ್ನು ಮುಚ್ಚಿಹಾಕಲು ಪ್ರಯತ್ನನಡೆದಿದೆ. ಸಿಬಿಐ ಅಧಿಕಾರಿ ಮಾಧವನ್ ರಾಜಿನಾಮೆ ಇತ್ಯಾದಿ ಉದಾಹರಣೆಗಳು ಹಲವಾರಿವೆ.

ಬೋಫೋರ್ಸ್‌ನಿಂದ ಆರಂಭವಾಗಿ ವಿದೇಶಿ ಮಂತ್ರಿ ಸೋಲಂಕಿಯವರ ರಾಜೀನಾಮೆ ಪ್ರಕರಣ, ಎಬಿಬಿ ರೈಲು ವ್ಯಾಗನುಗಳ ಜಾಫರ್ ಷರಿಫ್ ಹಗರಣ ಇವೆಲ್ಲವುದರ ಮೇಲೆ ಶೇರು ಹಗರಣ, ನಂತರ ಸುಪ್ರಿಂ ಕೋರ್ಟಿನ ನ್ಯಾಯಮೂರ್ತಿ ರಾಮಸ್ವಾಮಿಯವರ ಪ್ರಕರಣ ಇವೆಲ್ಲವೂ ಸೇರಿವೆ.

ಕರ್ನಾಟಕದಲ್ಲಿ ಬಂಗಾರಪ್ಪನವರ ಸರ್ಕಾರದಲ್ಲಿನ ನಿತ್ಯದ ಭ್ರಷ್ಟಾಚಾರಕ್ಕೆ ರಕ್ಷಣೆ ನೀಡಿದವರಾರು? ಕರ್ನಾಟಕದ ಎಲ್ಲ ಅಭಿವೃದ್ಧಿಯೋಜನೆಗಳನ್ನು ಜೇಬು ತುಂಬುವ ಯೋಜನೆಗಳಾಗಿ ಮಾಡಿ ಕರ್ನಾಟಕವನ್ನೇ ಅವನತಿಯ ಹಾದಿಗೆ ತರಲು ಕುಮ್ಮಕ್ಕು ನೀಡಿದವರು ನರಸಿಂಹರಾಯರೇ ಪ್ರಧಾನಿ ಅಲ್ಲವೆ? ಪ್ರಧಾನ ಮಂತ್ರಿಗಳ ಮಗನನ್ನು ತಂದು ಮೆರೆಸಿ ಕಾಣಿಕೆಗಳನ್ನಿತ್ತು ಮೆರೆಸಿದ ಬಂಗಾರಪ್ಪನವರೇ ಈಗ ಗೋಲ್ಡ್‌ಸ್ಟಾರ್‌ನ ಬೆಂಗಳೂರು ಅಧ್ಯಾಯವನ್ನು ತೆರೆಯುತ್ತಾರೆಂದು ಸುದ್ದಿಯಿದೆ. ಈ ಹಗರಣಗಳ ಆಳ ಉದ್ದ ಅಗಲಗಳು ಇನ್ನೂ ಸಿಕ್ಕಿಲ್ಲ.

...ಮಾರ್ಕ್ಸ್‌ವಾದಿ ಪರವಾಗಿ ಮುದ್ರಣ ಮತ್ತು ಪ್ರಕಾಶಕ ಪಿ.ರಾಮಚಂದ್ರರಾವ್, ಸಂಪಾದಕೀಯ ಕಚೇರಿ : 12, 18ನೇ ಅಡ್ಡರಸ್ತೆ, ಕಾಣಪ್ಪ ಗಾರ್ಡನ್ಸ್, ಸಂಪಂಗಿರಾಮನಗರ, ಬೆಂಗಳೂರು-560 027. ಫೋನ್ ನಂ : 236462 ಸಂಪಾದಕರು ...